# ಕೆಂಧೂಳಿ

ಹೊಸ ಸವಾಲುಗಳ ಕನಸು

ಪ್ರಧಾನ ಸಂಪಾದಕ: ತುರುವನೂರು ಮಂಜುನಾಥ

**KENDHOOLI** *Kannada Weekly*

kendhooli.com/e-paper/


ಮಾರಣ ಹೋಮದ ಪೂರ್ವ ತಯಾರಿ!



ಡಿ.ಉಮಾಪತಿ ಅವರ ಅಂಕಣದಲ್ಲಿ...


ಸಂಪುಟ - 02 । ಸಂಚಿಕೆ - 61 । ಪುಟ - 16 । ರೂ. 16/- । ಜನವರಿ 13 ರಿಂದ ಜನವರಿ 19, 2022

KARKAN/2018/76310




## ಮೋದಿ ಮಣಿಸಲು ವಿರೋಧಿ ಪಾಳಯದ ಅಜೆಂಡಾ ಏನು?

### "ಚಂಪಾ"ಎಂಬ ಕನ್ನಡದ ಸಾಕ್ಷೀಪ್ರಜ್ಞೆ

### ಪಾದಯಾತ್ರೆ ನಾಯಕರಿಗೆ ಖುಷಿ, ಆದರೆ ಜನರಿಗೆ ಸಂಕಟ..!

### ಮಕ್ಕಳನ್ನೇಕೆ ಸೆಳೆಯುತ್ತಿದೆ ಶಾಮನಿಷಮ್ ಭೂತ!

# ಮಹಾಪ್ರಾಣಗಳಿಗೆ ಕತ್ತರಿ ಪ್ರಯೋಗ ಸರಿ ಅಲ್ಲ

ಕನ್ನಡ ಭಾಷೆಗೆ ತನ್ನದೇ ಆದ ಇತಿಹಾಸವಿದೆ ಸುಂಸ್ಕೃತಿಯ ಭಾಷಾ ವೈವಿದ್ಯತೆಗೆ ಹೆಸರಾಗಿರುವ ಈ ಭಾಷೆಗೆ ಕೆಲವರು ಇನ್ನೇನೋ ಹೊಸತನವನ್ನು ತರುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ ಹಾಗಾಗಿ ವ್ಯಾಕರಣ ಈಗ ಒಂದಿಷ್ಟು ಚರ್ಚೆಯಲ್ಲಿದೆ.

ಹಿರಿಯ ಭಾಷಾ ವಿದ್ಯಾಂಸ ಡಾ. ಡಿ.ಎನ್.ಶಂಕರ ಭಟ್ ಅವರು ಕಳೆದ ಕೆಲ ವರ್ಷಗಳಿಂದ ಈ ವ್ಯಾಕರಣದೋಷವನ್ನು ಮಾರ್ಪಾಡು ಮಾಡಬೇಕು ಮತ್ತು ಮಹಾಪ್ರಾಣಗಳನ್ನು ತಗೆದುಹಾಕಬೇಕು ಎನ್ನುವ ವಾದವನ್ನು ಮಾಡಿಕೊಂಡು ಬರುತ್ತಿದ್ದಾರೆ ಇದನ್ನು ಸಹಜವಾಗಿಯೇ ಪ್ರತಿಭಾ ನಂತಕುಮಾರ್ ತೀವ್ರವಾಗಿ ಖಂಡಿಸಿದ್ದಾರೆ. ಆ ಮೂಲಕ ಈಗ ಚರ್ಚೆಗೆ ಗ್ರಾಸವಾಗಿದೆ ಈ ಬಗ್ಗೆ ಹಲವಾರು ಸಾಹಿತಿಗಳು ಭಾಷಾತಜ್ಞರು ಕೂಡ ಅವರ ನಿಲುವು ಸರಿ ಇಲ್ಲ ಎನ್ನುವುದನ್ನು ಪ್ರತಿಪಾದಿಸಿದ್ದಾರೆ ಕೆ.ವಿ.ತಿರುಮಲೇಶ್, ಎಸ್.ಜಿ.ಸಿದ್ದರಾಮಯ್ಯ ಮೊದಲದಾವರು ಈ ಹಿಂದೆ ಆಕ್ಷೇಪಗಳನ್ನು ವ್ಯಕ್ತಪಡಿಸಿದ್ದರು.ಯಾಕೆಂದರೆ ಇದೊಂದು ಸರ್ಕಾರದ ನಿಲುವಲ್ಲ ಚಿಂತನೆಯೂ ಇಲ್ಲ ಯಾರೋ ಪುಸ್ತಕ ಬರೆದು ವಾದ ಮಾಡಿದರೆ ಅದಕ್ಕೆ ಪ್ರತಿಕ್ರಿಯೇ ಕೊಡುವುದೇಕೆ ಎನ್ನುವ ಕುರಿತು ಬಹುಶಃ ಯಾವ ಭಾಷಾತಜ್ಞರು ಕೂಡ ತಲೆ ಕೆಡಸಿಕೊಂಡಿಲ್ಲ. ಈಗ ಚರ್ಚೆ ಮುನ್ನಲೆಗೆ ಬಂದಿರುವುದು ಪ್ರತಿಭಾ ನಂದಕುಮಾರ್ ಇದನ್ನು ತೀವ್ರವಾಗಿ ವಿರೋಧಿಸಿದ ಕಾರಣ .

ಡಿ. ಎನ್. ಶಂಕರ ಭಟ್ಟರು ಈಚಿನ ವರ್ಷಗಳಲ್ಲಿ" ಹೊಸ ಕನ್ನಡ"ವನ್ನು ಪ್ರತಿಪಾದಿಸುತ್ತಿದ್ದಾರೆ. ಕನ್ನಡದ ಅಕ್ಷರಗಳನ್ನು ಕಡಿಮೆ ಮಾಡಬೇಕು ಹಾಗೂ ಸಂಸ್ಕೃತದಿಂದ ಬಂದ ಪದಗಳನ್ನು ಬಿಟ್ಟುಬಿಡಬೇಕು ಎನ್ನುವುದು ಅವರ ವಾದದ ಮುಖ್ಯಾಂಶ. ಅವರ ಪುಸ್ತಕಗಳು ಅವರದೇ ಆದ ಹೊಸ ಕನ್ನಡದಲ್ಲಿ ಬರುತ್ತಿವೆ.

ಪರಂಪರೆ ಮತ್ತು ಸಂಸ್ಕೃತಿಗಳ ಬಗ್ಗೆ ಡಿ.ಎನ್. ಎಸ್. ಬರಹಗಳಲ್ಲಿ ವ್ಯಕ್ತವಾಗುವ ನಿಲುವೇನು ಎಂದು ನೋಡಬೇಕು. ಅವರು ಒಂದೆಡೆ ಸ್ವಾಭಿಮಾನ, ಸ್ವಸಂಸ್ಕೃತಿ ಬಗ್ಗೆ ಮಾತಾಡುತ್ತಾರೆ; ಇನ್ನೊಂದೆಡೆ ವ್ಯಾವಹಾರಿಕ ಪ್ರಯೋಜನಗಳ ಬಗ್ಗೆ ಮಾತಾಡುತ್ತಾರೆ.ಇನ್ನೊಂದೆಡೆ ವರ್ತಮಾನ ಕಾಲವನ್ನೂ ಈಚಿನ ಕೆಲ ಶತಮಾನಗಳ ಇತಿಹಾಸವನ್ನೂ ನಿರಾಕರಿಸುತ್ತಾರೆ.

ಕನ್ನಡ ಬರಹವನ್ನು ಮಹಾಪ್ರಾಣ ಇತ್ಯಾದಿಗಳುಳ್ಳ ಈಗಿನ ಸ್ವರೂಪದಲ್ಲಿ ಅನೇಕ ಶತಮಾನಗಳ ಹಿಂದೆ ಕೆಲವು ಪಂಡಿತರು ಪ್ರಜ್ಞಾಪೂರ್ವಕವಾಗಿಯೇ ಆರಂಭಿಸಿರಬಹುದು.ಆದರೆ ಇಂದು ನಮಗೆ ಅದು ಅಪ್ರಜ್ಞಾಪೂರ್ವಕ ರೂಢಿಯ ಮೂಲಕ ಬಂದುದು.ಇದನ್ನು ತಕ್ಷಣಕ್ಕೆ ಹಠ ಹಿಡಿದು ಬದಲಾಯಿಸುವುದೆಂದರೆ ರೂಢಿಯನ್ನೂ ಪರಂಪರೆಯನ್ನೂ ತಿರಸ್ಕರಿಸಿದಂತೆ ಅಲ್ಲವೇ?

ಕನ್ನಡದಲ್ಲಿ ಮಹಾಪ್ರಾಣ ಅಕ್ಷರಗಳನ್ನು ಯಾರೂ ಉಚ್ಚರಿಸುವುದಿಲ್ಲ ಎಂಬುದು ಸರಿಯಲ್ಲ. ಕರಾವಳಿಯಲ್ಲಿ ಬಹಳ ಮಂದಿ ಉಚ್ಚರಿಸುತ್ತಾರೆ. ಧಾರವಾಡ, ಗುಲ್ಬರ್ಗ ಕಡೆ ಎಜುಕೇಟೆಡ್ ಮಂದಿ ಬಳಸುತ್ತಾರೆ ಎಂಬುದನ್ನು ಡಿ.ಎನ್. ಎಸ್. ಅವರೇ ಹೇಳುತ್ತಾರೆ. ಮಹಾಪ್ರಾಣಗಳನ್ನು ತೆಗೆಯುವುದೆಂದರೆ ಈಗ ಬಳಸುವವರ ಸ್ವಾತಂತ್ರ್ಯದ ಅಪಹರಣ.ಇದು ವಿವರಣಾತ್ಮಕ ವ್ಯಾಕರಣವೇ? ಚರಿತ್ರೆಯನ್ನು ದಾಟಿ ಶತಮಾನಗಳಷ್ಟು ಹಿಂದೆ ಹೋಗಿ ಅದೇ ನಮ್ಮ ಸಂಸ್ಕೃತಿ, ಸೊಗಡು, ಸ್ವಂತಿಕೆ; ಅದನ್ನು ಮರುಸ್ಥಾಪಿಸಬೇಕು ಎಂದು ವಾದಿಸುವುದೆಂದರೆ ಇಂದು ನಮ್ಮ ದೇಶದಲ್ಲಿರುವ ಹಲವು ಮತಧರ್ಮೀಯರನ್ನು ಆಯಾ ಮತಧರ್ಮಗಳನ್ನು ಬಿಟ್ಟುಬಿಡಿರಿ ಎಂದು ಹೇಳಿದಂತಾಗುತ್ತದೆ.

ಆದಷ್ಟು ಕನ್ನಡದ್ದೇ ಪದಗಳನ್ನೇ ಬಳಸಬೇಕು ಎನ್ನುವುದರಲ್ಲಿ ತಪ್ಪೇನೂ ಇಲ್ಲ. ಆದರೆ ದಿನನಿತ್ಯದ ಬಳಕೆಯಲ್ಲಿ ಸೇರಿ ಹೋದ ಕಾಲ, ಕಾರಣ, ಪ್ರಮಾಣ, ಚಾಲಕ, ಕೃತಿ ,ಲೇಖನ, ಶಕ್ತಿ, ಬಲ, ಮುಖ, ಆರತಿ, ದ್ರವ ಮುಂತಾದ ಪದಗಳಿಗೆ ಕನ್ನಡ ಪದಗಳನ್ನು ಹುಡುಕಿ ತೆಗೆದರೂ ಈ ಪದಗಳಿಗೆ ಇಂದು ನಾವು ಹೊಂದಿರುವ ಎಲ್ಲ ಅರ್ಥಛಾಯೆಗಳೂ ಆ ಹೊಸ ಪದಗಳಿಗೆ ಬರಬೇಕಾದರೆ ಪ್ರತಿ ಪದದ ಜೊತೆ ಸಂಸ್ಕೃತಮೂಲ ಪದವನ್ನು ನೀಡಬೇಕಾಗಿ ಬಂದೀತು. ಇವುಗಳಿಗೆ ಹೊಸ ಪದಗಳನ್ನು ಟಂಕಿಸುವುದು ಅನಾವಶ್ಯಕ ಶ್ರಮ.

ಯಾವುದೇ ಕಾಲದಲ್ಲೂ ಕನ್ನಡದಲ್ಲಿ ಆಡುನುಡಿ ಮತ್ತು ಬರವಣಿಗೆಯ ಭಾಷೆ ಒಂದೇ ಆಗಿರಲಿಲ್ಲ. ಹಳಗನ್ನಡದ ಕೃತಿಗಳಲ್ಲಿ ಬಳಕೆಯಾಗಿರುವ ಭಾಷೆ, ಸಾಹಿತ್ಯ ರಚನೆಗೋಸ್ಕರ ಬರಹಗಾರರು ರೂಪಿಸಿಕೊಂಡದ್ದೇ ಹೊರತು ಆ ಕಾಲದ ಜನರ ಕನ್ನಡವೇನಾಗಿರಲಿಲ್ಲ

ನಡುಗನ್ನಡದ ಕಾಲದಲ್ಲಾದರೂ ಆಗಿನ ಗದ್ಯ, ಕಾವ್ಯ ಕೃತಿಗಳಲ್ಲಿ, ವಚನಗಳಲ್ಲಿ ಬಳಕೆಯಾಗಿರುವ ಭಾಷೆ ಕೂಡ ಜನರ ಆಡುನುಡಿಗೆ ಹತ್ತಿರವಾದ ಭಾಷೆಯಾಗಿದೆಯೇ ವಿನಾ ಆಡುನುಡಿಯ ತದ್ವತ್ ಅಲ್ಲ. ಅಲ್ಲೂ ಮಹಾ ಪ್ರಾಣಾಕ್ಷರಗಳಿವೆ. ಈಗಲಾದರೂ ಪ್ರಮಾಣಭಾಷೆಯಾಗಿ ಕರ್ನಾಟಕದಲ್ಲೆಲ್ಲಾ ಒಂದೇ ಭಾಷೆಯನ್ನು ಬಳಸುತ್ತಿದ್ದೇವೆ. ಅದರಲ್ಲಿ ಎಲ್ಲರಿಗೂ ಒಪ್ಪಿತವಾದ ಮಹಾಪ್ರಾಣಾಕ್ಷರಗಳು ಇರುವ ಭಾಷೆಯೇ ರೂಢಿಯಲ್ಲಿದೆ ಮತ್ತು ನಾವು ಆಡುವ ಕನ್ನಡಕ್ಕೂ ಅದಕ್ಕೂ ವ್ಯತ್ಯಾಸವಿದ್ದೇ ಇದೆ.ಒಂದು ಭಾಷೆಗೆ ಸಾಧ್ಯವಾದಷ್ಟೂ ಜಗತ್ತಿನ ಯಾವುದೇ ಭಾಷೆಯ ಎಲ್ಲ ಬಗೆಯ ಉಚ್ಚಾರಗಳನ್ನೂ ಮಾಡಲು ಸಾಧ್ಯವಿರುವಂಥ ವರ್ಣಮಾಲೆಯಿದ್ದರೆ ಅದೊಂದು ಅನುಕೂಲವೇ ವಿನಾ ದೋಷ ಖಂಡಿತಾ ಅಲ್ಲ. ಕನ್ನಡ ವರ್ಣಮಾಲೆಯಲ್ಲಿ ಈಗಿರುವ ಅಕ್ಷರಗಳಿಂದ ಇಂದು ಅದು ಬಹುಮಟ್ಟಿಗೆ ಸಾಧ್ಯವಾಗುತ್ತಿರುವುದು ಎಲ್ಲರ ಅನುಭವಕ್ಕೆ ಬಂದಿರುವಂಥದ್ದೇ. ತಮಿಳಿನ ಮಿತ ಸಂಖ್ಯೆಯ ವರ್ಣಗಳಿಂದ ಅದು ಸಾಧ್ಯವಿಲ್ಲವೆನ್ನುವುದು ಗೊತ್ತಿರುವಂಥದ್ದೇ

ಭಾಷೆಯನ್ನು ಬರೆಯಲು ಅಥವಾ ಓದಿಕೊಳ್ಳಲು ಈ ಹೊಸ ಬರಹಕ್ಕೆ ಪರಿವರ್ತಿಸಬೇಕೇ? ಹಾಗಿಲ್ಲದಿದ್ದರೆ ಈಗಿನ ಅಥವಾ ಇನ್ನು ಮುಂದಿನ ತಲೆಮಾರಿನವರಿಗೆ ಅವನ್ನು ಓದಲು ಈಗ ರೂಢಿಯಲ್ಲಿರುವ ಪ್ರಮಾಣ ಕನ್ನಡದ ವರ್ಣಮಾಲೆಯ ಜೊತೆಗೆ ಹೊಸ ಬರಹದ ವರ್ಣಮಾಲೆಯನ್ನೂ ಕಲಿಯಬೇಕಾಗುತ್ತದೆಯೇ? ಇಲ್ಲ ಗೊಂದಲಕ್ಕೆ ಬೀಳುವುದೇ ಅವರ ಹಣೆಯ ಬರಹವಾಗಬೇಕೇ? ಕನ್ನಡದ ಮೇಲಿನ ಅತ್ಯುಗ್ರ ಅಭಿಮಾನದಿಂದ ಆಂಡಯ್ಯನು ಸಂಸ್ಕೃತ ಬಳಸುವುದಿಲ್ಲವೆಂದು ಪ್ರತಿಜ್ಞೆ ಮಾಡಿ ಬರೀ ತದ್ಭವಗಳಿಂದ ಮತ್ತು ಕನ್ನಡ ಶಬ್ದಗಳಿಂದ ಕೃತಿ ರಚಿಸಿದ ಪ್ರಯೋಗ ಒಂದು ನಡುಗಡ್ಡೆಯಾಗಿಯೇ ಉಳಿದಿದೆ. ಈ ಹೊಸ ಬರಹ ಕೂಡ ಒಂದು ನಡುಗಡ್ಡೆಯಾಗಿಯೇ ಉಳಿಯುತ್ತದೆ ಅಷ್ಟೆ

ಕನ್ನಡದ್ದೇ ಪದಗಳನ್ನು ಉಳಿಸುವ ಬೆಳೆಸುವ ಅವಕಾಶಗಳು ಹೆಚ್ಚಾಗಿರುವುದು ಕಾವ್ಯ, ನಾಟಕ, ಕತೆ, ಕಾದಂಬರಿಗಳಂತಹ ಬರಹಗಳಲ್ಲಿ. ಹೇಗಿದ್ದರೂ ಹೆಚ್ಚಿನ ಸಂಖ್ಯೆಯ ಓದುಗರು ಮತ್ತು ಬರಹಗಾರರು ಇರುವುದು ಈ ಪ್ರಕಾರಗಳಿಗೇ ಹೊರತು ವಿಮರ್ಶೆ, ವಿಶ್ಲೇಷಣೆ, ವಿವಿಧ ವೈಚಾರಿಕ ಅಥವಾ ಶಾಸ್ತ್ರವಿಷಯಗಳ ಮೇಲಿನ ಬರಹಗಳಿಗಲ್ಲ. ಕತೆ–ಕಾವ್ಯಗಳಂಥ ಸೃಜನಶೀಲ ಬರಹಗಳು ಕನ್ನಡದ ವಿವಿಧ ಪ್ರಭೇದಗಳಲ್ಲಿರಬಹುದಾದ ವಿಶಿಷ್ಟ ಅರ್ಥಗಳ ಪದಗಳನ್ನು ಉಳಿಸಿ ಬೆಳೆಸುವಲ್ಲಿ ಕೆಲಸ ಮಾಡಬಹುದಾದಷ್ಟು ಪ್ರಮಾಣದಲ್ಲಿ ಶಾಸ್ತ್ರ ಬರಹಗಳು ಮಾಡಲಾರವು. ಇಂದು ಕನ್ನಡದ ಕತೆ, ಕಾದಂಬರಿಗಳಲ್ಲಿ ದಲಿತರ ಭಾಷೆ, ಕುಂದಾಪುರ ಭಾಷೆ,ಉತ್ತರಕರ್ನಾಟಕದ ಕನ್ನಡ ಮೊದಲಾದ ಅನೇಕ ಪ್ರಭೇದಗಳಲ್ಲಿರುವ ಪದಗಳೂ ವಾಕ್ಯರಚನೆಗಳೂ ಬಳಕೆಯಾಗುತ್ತಿವೆ. ಮಾನ್ಯತೆ ಪಡೆದಿವೆ. ಅಲ್ಲಿ ಎಲ್ಲೂ ಅಲ್ಪಪ್ರಾಣ ಮಹಾಪ್ರಾಣಗಳ ಕುರಿತ ಸರಿತಪ್ಪುಗಳ ಪ್ರಶ್ನೆಯಿಲ್ಲ. ತುಳು ಭಾಷೆಯ ವಿಚಾರವಾಗಿ ಕೂಡ ಇದೇ ಮಾತನ್ನು ಹೇಳಬಹುದು. ತುಳು ಭಾಷೆಯ ಕಾದಂಬರಿಗಳನ್ನು ಗಮನಿಸಿದರೆ ಅಲ್ಲಿ ಹೆಚ್ಚು ಕನ್ನಡ ಅಥವಾ ಸಂಸ್ಕೂತಮೂಲದ ಪದಗಳು ಕಾಣಿಸಲಾರವು. ಅದೇ ನೀವು ವಿವಿಧ ವಿಚಾರಗಳಿಗೆ ಸಂಬಂಧಿಸಿದಂತೆ ತುಳುವಿನಲ್ಲಿ ಇಂದು ಬರೆಯಲಾಗುತ್ತಿರುವ ಲೇಖನಗಳನ್ನು ಗಮನಿಸಿದರೆ ಅಲ್ಲಿ ಕನ್ನಡ ಅಥವಾ ಸಂಸ್ಕೃತಮೂಲದ ಪದಗಳು ಅನಿವಾರ್ಯವಾಗಿ ಬಳಕೆಯಾದುದನ್ನು ಕಾಣುತ್ತೀರಿ.

ಡಾ.ಶಂಕರ ಭಟ್ಟರು ಹೇಳುವ ಸುಧಾರಣೆಗಳ ಪರಿಣಾಮವಾಗಿ ಕೇವಲ "ಹೊಸ ಬರಹ"ವನ್ನು ಕಲಿತ ವಿದ್ಯಾವಂತರು, ಕನ್ನಡದಲ್ಲಿ ವಿವಿಧ ಜ್ಞಾನಕ್ಷೇತ್ರಗಳಿಗೆ ಸಂಬಂಧಿಸಿದಂತೆ ಹೊಸ ವಿಚಾರಗಳನ್ನು ಸೃಷ್ಟಿಸುವ ಸಾಧ್ಯತೆ ಕಡಿಮೆಯಾಗುವುದರಲ್ಲಿ ಸಂಶಯವಿಲ್ಲ.ಅಕ್ಷರಸ್ಥರಾಗುವುದರ ಅಂತಿಮ ಉದ್ದೇಶ ಕೇವಲ ಈಗಾಗಲೇ ಇರುವ ಸಾಹಿತ್ಯವನ್ನು ಓದುವುದು ಅಥವಾ ಅರ್ಥ ಮಾಡಿಕೊಳ್ಳುವುದಲ್ಲ. ಹೊಸತನ್ನು ಹೇಳುವುದು ,ಬರೆಯುವುದು ಗುರಿಯಾಗಬೇಕು. ಅದು ಹಾಗೆ ಆಗದಿರುವುದರಿಂದಲೇ ಇಂದು ಇಂಗ್ಲಿಷಿನೆದುರು ಕನ್ನಡ ಹಿಂದುಳಿದದ್ದು ಅಥವಾ ಇದನ್ನೇ ವಿಸ್ತರಿಸಿ ಹೇಳುವುದಾದರೆ, ಕನ್ನಡದಲ್ಲೇ ಕೆಲವರ್ಗಗಳು ಮುಂದಿದ್ದು ಇನ್ನು ಕೆಲವರ್ಗಗಳು ಹಿಂದಿರಲು ಕೂಡ ಇದೇ ಕಾರಣವಾಗಿರಬಹುದು.

ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ ಅಂ ಅಃ

ಕ ಖ ಗ ಘ ಙ
ಚ ಛ ಜ ಝ ಞ
ಟ ಠ ಡ ಢ ಣ
ತ ಥ ದ ಧ ನ
ಪ ಫ ಬ ಭ ಮ
ಯ ರ ಲ ವ ಶ ಸ ಹ ಳ ಕವ್ ಜಳ್

## ಮನ ಮಿಡಿತ



ತುರುವನೂರು ಮಂಜುನಾಥ
ಪ್ರಧಾನ ಸಂಪಾದಕ

# "ಚಂಪಾ" ಎಂಬ ಕನ್ನಡದ ಸಾಕ್ಷೀಪ್ರಜ್ಞೆ

"ಚಂಪಾ" ಎಂದೇ ಕನ್ನಡ ಸಾಹಿತ್ಯ, ಹೋರಾಟ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಚಿರಪರಿಚಿತರಾಗಿದ್ದ ಪ್ರೊ. ಚಂದ್ರಶೇಖರ ಪಾಟೀಲರು ಖಡಕ್ ಮಾತು ಹಾಗೂ ನೇರ ವಿಚಾರಗಳಿಗೆ ಹೆಸರಾಗಿದ್ದರು. ಅವರದ್ದು ಸದಾ ವ್ಯವಸ್ಥೆಯ ವಿರುದ್ಧದ ಬಂಡಾಯ ದನಿ. ಅದನ್ನು ಹೋರಾಟ ಹಾಗೂ ಸಂಘಟನೆ ಮೂಲಕವೂ ಗಟ್ಟಿಗೊಳಿಸುವ ಶಕ್ತಿ ಇತ್ತು. ನಾಡಿಗೇ ಮಾದರಿಯಾಗಿದ್ದ ಇಂಥ ವ್ಯಕ್ತಿತ್ವದ ಚಂಪಾ ತಮ್ಮ 82ನೇ ವಯಸ್ಸಿನಲ್ಲಿ ನಮ್ಮನ್ನಗಲಿದ್ದಾರೆ. ಇದು ಸಾಂಸ್ಕೃತಿಕ ಕ್ಷೇತ್ರಕ್ಕಾದ ನಷ್ಟ. ಚಂಪಾ ಈ ನೆಲ ಕಂಡ ಅಪರೂಪದ ವೈಚಾರಿಕ ಚಿಂತಕ, ಭಾಷಾತಜ್ಞ, ಕನ್ನಡಪರ ಹೋರಾಟಗಾರ, ಕವಿ, ನಾಟಕಕಾರ, ವಿಮರ್ಶಕರಾಗಿದ್ದರು. ಮೂಲತಃ ಅವರು ಇಂಗ್ಲಿಷ್ ಪ್ರಾಧ್ಯಾಪಕರು. ಕನ್ನಡ ಭಾಷೆ, ಸಾಹಿತ್ಯ ಹಾಗೂ ನಾಡುನುಡಿಯ ಬಗ್ಗೆ ಅವರಿಗಿದ್ದ ಕಾಳಜಿ ಹಾಗೂ ಬದ್ಧತೆಯನ್ನು ಯಾರೂ ಪ್ರಶ್ನೆ ಮಾಡುವಂತಿರಲಿಲ್ಲ.

"ಚಂಪಾ" – ಎಂದರೆ ಬದ್ಧತೆ, ಖಡಕ್ ವಿಚಾರ ಹಾಗೂ ಶಿಸ್ತು. ನುಡಿದಂತೆ ನಡೆದವರು.






ತಮ್ಮ ವೈಯಕ್ತಿಕ ಹಾಗೂ ಸಾರ್ವಜನಿಕ ಬದುಕಿನಲ್ಲೂ ಅದನ್ನು ಪಾಲಿಸಿದವರು. ಜೊತೆಗೆ ಚಂಪಾ ಎಂದರೆ "ಸಂಕ್ರಮಣ". ಇದು ಸಾಹಿತ್ಯ – ಸಾಂಸ್ಕೃತಿಕ ಕ್ಷೇತ್ರದಲ್ಲಿ ಜನಜನಿತ. ಐದೂವರೆ ದಶಕಗಳ ಕಾಲ ಈ ಸಾಹಿತ್ಯ ಪತ್ರಿಕೆ ನಡೆಸಿಕೊಂಡು ಬಂದುದ್ದಲ್ಲದೆ, ಮೌಲಿಕ ಬರಹಗಳನ್ನು ನೀಡಿದ ಮಹತ್ವದ ಕೊಡುಗೆ ಇವರದ್ದು. ಈ ಮೂಲಕ ಅಷ್ಟು ಕಾಲವೂ ವೈಚಾರಿಕ ಚರ್ಚೆ, ವಾದ – ವಿವಾದ, ಸಂವಾದಗಳಿಗೆ ವೇದಿಕೆ ಒದಗಿಸಿದವರು. ಕನ್ನಡ ಸಾಹಿತ್ಯದ ಕಿರು ಪತ್ರಿಕೆಗಳ ಇತಿಹಾಸದಲ್ಲಿ ಇವರ ಸಂಪಾದಕತ್ವದ ಸಂಕ್ರಮಣಕ್ಕೆ ಮೊದಲ ಸ್ಥಾನ ಇದೆ. ಚಂಪಾ ಕವಿ, ನಾಟಕಕಾರ ಹೇಗೋ ತಮ್ಮ ಹಾಸ್ಯಪ್ರಜ್ಞೆ ಹಾಗೂ ಮೊನಚು ಮಾತಿನಿಂದ ಜನರನ್ನು ಸಮಾಜವನ್ನು ಎಚ್ಚರಿಸುತ್ತಿದ್ದರು. ಬರಹದಲ್ಲಿ ವಿಡಂಬನೆ, ವ್ಯಂಗ್ಯ ಮಾಡುತ್ತಲೆ ಕಾಲೆಳೆದು ಚುಚ್ಚುತ್ತಿದ್ದರೂ ಅಲ್ಲಿ ವ್ಯಕ್ತಿ ದ್ವೇಷ ಇರುತ್ತಿರಲಿಲ್ಲ. ಜಗಳ, ವಿವಾದಗಳು ಅವರ ಬದುಕಿನ ಭಾಗವಾಗಿದ್ದವು. ಜಾತಿ, ಧರ್ಮದ ಮೂಲಕ ಪುರೋಹಿತರು ಮಾಡುವ ಶೋಷಣೆ ಹಾಗೂ ದುರುಪಯೋಗವನ್ನು ಖಂಡಿಸುತ್ತಿದ್ದರು.

ಚಂಪಾ ಅವರ ವಿಶೇಷ ಲೇಖನ
ಪುಟ 9ರಲ್ಲಿ



ಪ್ರಧಾನ ಸಂಪಾದಕ
ತುರುವನೂರು ಮಂಜುನಾಥ

ಪುಟ ವಿನ್ಯಾಸ
ಸೂರ್ಯಕುಮಾರ್ ಜಿ.ಎನ್.

ಅನಾವರಣ

**ಪತ್ರಿಕೆಗೆ ಚಂದಾದಾರರಾಗಿ ಮತ್ತಷ್ಟು ಬೆಳೆಯಲು ತಾವೂ ಬಾಗಿಯಾಗಿ ಚಂದಾದಾರರ ವಿವರ**

| | |
|---|---|
| ವಾರ್ಷಿಕ | 1100 |
| ಅರ್ಧವಾರ್ಷಿಕ | 600 |
| ಎರಡು ವರ್ಷ | 2200 |
| ಆರು ವರ್ಷ | 6600 |
| ಪೋಷಕರು | 10,000 |
| ಮಹಾಪೋಷಕರು | 20,000 |

# ಸರ್ಕಾರದ ಇಂತ ನಿರ್ಧಾರಗಳಿಗೆ ಲಾಕ್‌ಡೌನ್ ವಾರ್ಷಿಕೋತ್ಸವದಂತಾಗಿದೆ..!

ಲಾಕ್‌ಡೌನ್ ಎನ್ನುವುದು ಈಗ ಒಂದು ರೀತಿ ವಾರ್ಷಿಕೋತ್ಸದಂತಾಗಿದೆ. ಸಹಜವಾಗಿಯೇ ಆಡಳಿತ ಪಕ್ಷಗಳು ಮಾಡುವ ಯಡವಟ್ಟುಗಳಿಗೆ ಜನರು ಪರಿತಪಿಸುವಂತ ಸ್ಥಿತಿ ಬಂದೊದಗಿದೆ. ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಒಂದು ರೀತಿ ಆರಂಭದಲ್ಲಿ ಎಲ್ಲವನ್ನೂ ಸಲೀಸಾಗಿ ನಿಭಾಯಿಸುತ್ತಾರೆ ಎನ್ನುವಂತೆ ಅವರ ತಗೆದುಕೊಂಡ ಕೆಲ ನಿರ್ಧಾರಗಳು ಅವರು ನಡೆದುಕೊಂಡ ರೀತಿ–ನೀತಿ ಮತ್ತು ಕೊಟ್ಟ ಖಡಕ್ ಸೂಚನೆಗಳನ್ನು ನೋಡಿದರೆ ಆಡಳಿತದಲ್ಲಿ ಪಾರದರ್ಶಕತೆ ಎನ್ನುವುದು ನಿಶ್ಚಿತ ಎನಿಸಿತು ಆದರೆ ಅದು ಕೇವಲ ಎರಡು ತಿಂಗಳು ಮಾತ್ರ ಆ ನಂತರ ಅದರ ಹಾದಿ ತಪ್ಪಿತು.

ಯಾವಾಗ ಬಿಟ್ ಕಾಯಿನ್ ದಂಧೆ ಬಯಲಾಯಿತೋ ಅಲ್ಲಿಂದ ಅವರ ನಡೆಯೇ ಬದಲಾಯಿತು.. ಅವರ ಪಕ್ಷದಲ್ಲಿ ಸಚಿವ ಸಂಪುಟದ ಸಹೋದ್ಯೋಗಿಗಳೇ ಅವರ ಬಗ್ಗೆ ಅಸಹನೀಯ ಪಟ್ಟುಕೊಂಡರು ಅವರ ನಡೆಗೆ ಮುನ್ನಡೆಯಲಿಲ್ಲ ಬದಲಾಗಿ ತಮ್ಮದೇ ಹಾದಿಯಲ್ಲಿ ನಡೆಯುತ್ತಿದ್ದಾರೆ ಹೀಗಾಗಿ ಸರ್ಕಾರ ಒಂದು ರೀತಿ ಹಾದಿತಪ್ಪಿದ ಬಂಡಿಯಂತಿದೆ.

ಇಂತ ಹೊತ್ತಿನಲ್ಲಿಯೇ ಬಂದ ಒಮೈಕ್ರಾನ್ ಇಡೀ ದೇಶದಲ್ಲಿಯೇ ಬೆಂಗಳೂರಿನಲ್ಲಿ ಮೊದಲ ಬಾರಿಗೆ ಪ್ರವೇಶ ಮಾಡಿತು .ಆರಂಭದಲ್ಲಿ ಈ ಒಮೈಕ್ರಾನ್ ರೋಗಿಗಳ ಕುರಿತು ಕೊಟ್ಟ ಲೆಕ್ಕದಲ್ಲಿಯೂ ಕೂಡ ಸಾಕಷ್ಟು ಅನುಮಾನಗಳು ಮೂಡಿದವು ಓಮೈಕ್ರಾನ್ ರೋಗಿಗಳ ಟ್ರಾವೆಲ್ ಇಸ್ಟರಿ ದಾಖಲಾತಿಯಲ್ಲಿ ನಮೂದಿಸಿಲಾದ ಲೆಕ್ಕ ತಪ್ಪಿತು ಅಲ್ಲಿಂದ ಆರಂಭವಾದ ಹಾದಿ ತಪ್ಪಿದ ಲೆಕ್ಕ ಇನ್ನೂ ಕೊರೊನಾ ಲೆಕ್ಕದಲ್ಲಿ ದೊಡ್ಡಮಟ್ಟದ ಅವಾಂತರಗಳು ಸೃಷ್ಠಿಯಾಗಿವೆ ಅಸ್ಪತ್ರೆಗಳ ಬಿಲ್‌ಗಳಲ್ಲಿ, ವಸ್ತುಗಳ ಖರೀದಿಯಲ್ಲಿ ಲೆಕ್ಕಗಳು ತಮಗೇ ಬೇಕಾದ ರೀತಿಯಲ್ಲಿ ನೀಡಿ ಆಡಳಿತ ನಡೆಸುವ ಅದರಲ್ಲೂ ಆರೋಗ್ಯ ಸಚಿವರು ಜೇಬು ತುಂಬಿಗಿಳಸಿಕೊಂಡಿರುವ ವಿಷಯ ಹೊಸದೇನಲ್ಲಿ ಎಲ್ಲರಿಗೂ ಗೊತ್ತಿರುವ ವಿಷಯವೇ. ಆದರೆ ನೋಡಿ ಹೀಗೆ ಸರ್ಕಾರ ಮಾಡುತ್ತಿರುವ ಕೆಲ ನಿರ್ಧಾರಗಳಿಂದ ಈಗ ಎಂತಾ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ ದಿನ ದಿನಕ್ಕೂ ಕೊರೊನಾ ಪಾಸಿಟೀವ್ ಸಂಖ್ಯೆ ಹೆಚ್ಚಾಗುತ್ತಿದೆ ಅದೃಷ್ಟವಶಾತ್ ಸಾವು ಸಂಭವಿಸುತ್ತಿಲ್ಲ ಇದಕ್ಕೆ ಕಾರಣ ಎಲ್ಲರೂ ಎರಡು ಡೋಸ್ ವ್ಯಾಕ್ಸಿನೇಷನ್ ತಗೆದುಕೊಂಡ ಕಾರಣ ಸಾವಿನ ಸಂಖ್ಯೆ ಕಡಿಮೆಯಾಗುತ್ತಿದೆ .ಮತ್ತೊಂದು ವಿಶ್ವ ಆರೋಗ್ಯ ಮಾಹಿತಿಯ ಪ್ರಕಾರ ಮೂರನೇ ಅಲೆಯ ಕೊರೊನಾ ಸೋಂಕಿನಲ್ಲಿ ಮೊದಲಿನಷ್ಟು ಮಾರಕಾಂಶ ಇರುವುದಿಲ್ಲ ಎನ್ನುವುದನ್ನು ಹೇಳಿದೆ ಹೀಗಾಗಿ ಭಯಪಡಬೇಡಿ ಎಚ್ಚರಿಕೆಯಿಂದಿರಿ ಎನ್ನುವ ಸೂಚನೆನಯನ್ನು ನೀಡಿದೆ. ಇದೇ ಏನೇ ಇರಲಿ ಈಗ ರಾಜ್ಯದಲ್ಲಿ ಮಹುಮುಖ್ಯವಾಗಿ ಶಾಲೆ,ವಸತಿ ಶಾಲೆಗಳು ಮತ್ತು ಹಾಸ್ಟಲ್‌ಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿವೆ ಹೀಗಿದ್ದರು ಕೆಲವು ಕಾಲೇಜುಗಳು ಮುನ್ನಡೆಸುತ್ತಿವೆ ಸರ್ಕಾರ ಈ ಕುರಿತು ಒಂದು ಗಟ್ಟಿ ನಿರ್ಧಾರವನ್ನು ತಗೆದುಕೊಂಡಿಲ್ಲ ಆದರೆ ಈ ಕುರಿತಂತೆ ಮುಖ್ಯಮಂತ್ರಿಗಳು ಸಭೆ ನಡೆಸಿದ್ದಾರೆ ಈ ಸಭೆಯಲ್ಲಿ ಶಾಲೆಗಳನ್ನು ಮತ್ತು ಅಥವಾ ಪರ್ಯಾಯ ವ್ಯವಸ್ಥೆ ಮಾಡುವ ಅಧಿಕಾರವನ್ನು ಆಯಾ ಜಿಲ್ಲಾಧಿಕಾರಿಗಳಿಗೆ ನೀಡಿ ಕೈತೊಳೆದುಕೊಂಡಿದೆ. ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಬೇಕು. ಅದನ್ನು ಆಧರಿಸಿ ಆರೋಗ್ಯ ಹಾಗೂ ಶಿಕ್ಷಣ ಇಲಾಖೆ ಜತೆ ಸಮಾಲೋಚನೆ ನಡೆಸಿದ ಬಳಿಕ ಜಿಲ್ಲಾಧಿಕಾರಿಗಳು ತೀರ್ಮಾನ ಕೈಗೊಳ್ಳಬಹುದು ಎನ್ನುವುದು ಸರ್ಕಾರದ ನಿಲುವು ಇದನ್ನೇ ಎಡವಟ್ಟು ಎನ್ನುವುದು ಇಷ್ಟೊಂದು ಸಂಖ್ಯೆ ದಿನ ನಿತ್ಯ ಏರಿಕೆಯಾಗುತ್ತಲೆ ಇವೆ ಇಂತ ಹೊತ್ತಿನಲ್ಲಿ ಸರ್ಕಾರ ಗಟ್ಟಿ ನಿರ್ಧಾರ ತಗೆದುಕೊಂಡು ಶಾಲಾ–ಕಾಲೇಜುಗಳನ್ನು ಸದ್ಯದ ಮಟ್ಟಿಗೆ ಸ್ಥಗಿತಗೊಳಿಸುವ ನಿರ್ಧಾರ ತಗೆದುಕೊಳ್ಳ ಬಹುದಿತ್ತ , ಯಾಕೆಂದರೆ ಇದು ದೊಡ್ಡ ಅನಾಹುತ ಅಗುವ ಮುನ್ನ ಸರ್ಕಾರವೇ ನಿರ್ಧಾರ ತಗೆದುಕೊಳ್ಳಬೇಕಿತ್ತು ಆದರೆ ಅದರಲ್ಲೂ ಹಿಂಜರಿಕೆ ಮಾಡಿದೆ. ಇದು ಒಂದು ಕಡೆಯಾದರೆ ಮತ್ತೊಂದು ಕಡೆ ರಾಜಕೀಯ ನಾಯಕರ ಪಕ್ಷಗಳ ರ್‍ಯಾಲಿಗಳು ಸಭೆ ಸಮಾರಂಭಗಳಲ್ಲಿ ಜನ ಜಂಗುಳಿಯನ್ನು ಸೇರಿಸುತ್ತಿರುವುದನ್ನು ನೋಡಿದರೆ ಇವರಿಗೆ ತಮ್ಮ ಪಕ್ಷ ತಾವು ಅಧಿಕಾರಕ್ಕೆಬರಬೇಕು ಯಾರು ಏನಾದರೂ ನಮಗೇನು ಎನ್ನುವ ನಿರ್ಧಾರದಲ್ಲಿ ಇದ್ದಂತೆ ಕಾಣುತ್ತದೆ. ಒಂದು ಕಡೆ ಜವಾಬ್ದಾರಿ ಸ್ಥಾನದಲ್ಲಿರುವ ಕಾಂಗ್ರೆಸ್ ಪಕ್ಷ ಜನರಿಗೆ ಬುದ್ದಿ ಹೇಳಬೇಕಾದ ಪಕ್ಷದ ನಾಯಕರು ರಾಜ್ಯದಲ್ಲಿ ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಲೇ ಇವೆ ಇಂತ ಹೊತ್ತಿನಲ್ಲಿ ಕರ್ಫ್ಯೂ ಇದ್ದರೂ ಅದನ್ನು ಮೆಟ್ಟಿ ನಾವು ಹೋರಾಟ ಮಾಡುತ್ತೇವೆ ಎಂದು ಪಾದಾಯಾತ್ರೆಗೆ ದುಮುಕಿರುವುದನ್ನು ನೋಡಿದರೆ ಅದಕ್ಕಿಂತ ಮೂರ್ಖತನ ಇನ್ನೊಂದಿಲ್ಲ. ಸರ್ಕಾರಕ್ಕೆ ತಿದ್ದಿ ಬುದ್ದಿ ಹೇಳಬೇಕಾದ ಪ್ರತಿಪಕ್ಷ ಇಂತ ದೊಡ್ಡ ಅನಾಹುತ ಮಾಡಲು ಹೊರಟಿದೆ. ಸಾವಿರಾರು ಜನರನ್ನು ಸೇರಿಸಿಕೊಂಡು ಕೊರೊನಾ ನಿಯಮಗಳನ್ನು ಗಾಳಿಗೆ ತೂರಿ ಇಂತ ಪಾದಾಯಾತ್ರೆ ಇಂತ ಹೊತ್ತಿನಲ್ಲಿ ಅಗತ್ಯವಿತ್ತೇ? ನಿಮಗೆ ನಿಜವಾದ ಈ ರಾಜ್ಯದ ಬಗ್ಗೆ ಕಾಳಜಿ ಇದ್ದಿದ್ದರೆ ಇಂತ ನಿರ್ಧಾರ ತಗೆದುಕೊಳ್ಳುತ್ತಿರಲಿಲ್ಲ ಒಂದು ವೇಳೆ ಇದರಿಂದ ಏನಾದರೂ ಅನಾಹುತವಾದರೆ ಅದಕ್ಕೆ ನೇರ ಹೊಣೆ ಕಾಂಗ್ರೆಸ್ ಪಕ್ಷವೆ ಕಾರಣವಾಗುತ್ತದೆ ನೀವು ಜನರಿಗಾಗಿ ಇಂತ ಕೆಲಸ ಮಾಡಿದ್ದರೆ ಅದಕ್ಕೆ ಎಲ್ಲರು ಮೆಚ್ಚುತ್ತಿದ್ದರು ಆದರೆ ನೀವು ಮಾಡುತ್ತಿರುವುದು ಅಧಿಕಾರಕ್ಕಾಗಿ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ ನಿಮ್ಮ ಹುಚ್ಚುತನವನ್ನು ಜನರು ಗಮನಿಸುತ್ತಿದ್ದಾರೆ ಎನ್ನುವ ಪರಿಜ್ಞಾನವೂ ಇಲ್ಲದೆ ನಿಮ್ಮ ನಡವಳಿಕೆಗೆ ಏನೆನ್ನಬೇಕೋ ಗೊತ್ತಿಲ್ಲ.ಇದನ್ನು ಹತ್ತಿಕ್ಕಲು ರಾಜ್ಯ ಸರ್ಕಾರಕ್ಕೂ ತಾಕತ್ತು ಇಲ್ಲ ಅನಿಸುತ್ತದೆ ತಮ್ಮ ತಮ್ಮ ರಾಜಕಾರಣದ ವೈಷಮ್ಯಕ್ಕೆ ರಾಜ್ಯದ ಜನರ ಬಲಿ ಮಾಡಲು ಹೊರಟಿರುವುದು ನೋಡಿದರೆ ಇವರೆಲ್ಲರಿಗೂ ರಾಜ್ಯದ ಹಿತಾಸಕ್ತಿಗಿಂತ ಅಧಿಕಾರದ ಹಿತಾಸಕ್ತಿಯೇ ಹೆಚ್ಚು ಎನ್ನುವುದು ಮುಖ್ಯವಾಗುತ್ತದೆ.

ಹೀಗೆ ಆರೋಗ್ಯದ ದೃಷ್ಟಿಯಿಂದ ರಾಜ್ಯ ಸರ್ಕಾರ ಹಲವು ಯಡವಟ್ಟುಗಳನ್ನು ಮಾಡಿಕೊಳ್ಳುತ್ತಲ್ಲೇ ಬಂದಿದೆ ಹೀಗಾಗಿಯೆ ಇತ್ತೀಚೆಗೆ ನೀತಿ ಆಯೋಗ ಬಿಡುಗಡೆ ಮಾಡಿರುವ ವರದಿ ಪ್ರಕರಾರ ಕರ್ನಾಟಕ ಆರೋಗ್ಯ ಕ್ಷೇತ್ರದಲ್ಲಿ ಹಿಂದುಳಿದಿರುವುದನ್ನು ಅದರ ಅಂಕಿ– ಅಂಶವು ನಿರೂಪಿಸುತ್ತಿದೆ. ದೇಶದ ವಿವಿಧ ರಾಜ್ಯಗಳು ಆರೋಗ್ಯ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿಗೆ ಈ ವರದಿಯು ಕನ್ನಡಿ ಹಿಡಿಯುತ್ತದೆ. ದಕ್ಷಿಣ ಭಾರತದ ಬಹುತೇಕ ಎಲ್ಲ ರಾಜ್ಯಗಳು ಆರೋಗ್ಯ ಕ್ಷೇತ್ರದ ವಿವಿಧ ಸೂಚಿಗಳಲ್ಲಿ ಪ್ರಗತಿಯತ್ತ ಮುಖ ಮಾಡಿದ್ದರೆ,ಕರ್ನಾಟಕ ಮಾತ್ರ ಹಿಂದೆ ಬಿದ್ದಿರುವುದು ಕಳವಳಕಾರಿ. 24 ಸೂಚ್ಯಂಕಗಳ ಆಧಾರದ ಮೇಲೆ ರ್‍ಯಾಂಕಿಂಗ್ ನೀಡಲಾಗಿದ್ದು, ನಮ್ಮ ರಾಜ್ಯ ಒಂಬತ್ತನೇ ಸ್ಥಾನಕ್ಕೆ ಕುಸಿದಿದೆ

2018–19ನೇ ಸಾಲಿಗೆ ಹೋಲಿಸಿದರೆ, 2019–20ನೇ ಸಾಲಿನಲ್ಲಿ ಒಂದು ಸ್ಥಾನ ಕುಸಿತ ಕಂಡಿದೆ. ಅಷ್ಟೇ ಅಲ್ಲದೆ, ಆರೋಗ್ಯ ಕ್ಷೇತ್ರದಲ್ಲಿ ಒಟ್ಟಾರೆ ಆಗಿರುವ ಪ್ರಗತಿ ವಿಚಾರದಲ್ಲಿ ರಾಜ್ಯ ಕೊನೆಯ ಸ್ಥಾನದಲ್ಲಿದೆ. ಅಕ್ಕಪಕ್ಕದ ಕೇರಳ ಮತ್ತು ತಮಿಳುನಾಡು ರಾಜ್ಯಗಳು ಆರೋಗ್ಯ ಕ್ಷೇತ್ರದಲ್ಲಿ ಬಹಳಷ್ಟು ಪ್ರಗತಿ ಸಾಧಿಸುವ ಮೂಲಕ ರ್‍ಯಾಂಕಿಂಗ್ ಪಟ್ಟಿಯಲ್ಲಿ ಮೊದಲ ಎರಡು ಸ್ಥಾನದಲ್ಲಿರುವಾಗ ರಾಜ್ಯದ ಕಳಪೆ ಸಾಧನೆ ನಿರಾಸೆ ಮೂಡಿಸುತ್ತದೆ. ಆರೋಗ್ಯ ಕ್ಷೇತ್ರದತ್ತ ರಾಜ್ಯ ಎಷ್ಟೊಂದು ನಿರ್ಲಕ್ಷ್ಯ ತಾಳಿದೆ ಎನ್ನುವುದಕ್ಕೆ ಇದು ನಿದರ್ಶನ. ವರದಿಯಲ್ಲಿ ಉಲ್ಲೇಖಿಸಿರುವ ಹಲವು ಅಂಶಗಳು ಆಗಬೇಕಿರುವ ಸುಧಾರಣಾ ಕ್ರಮಗಳತ್ತ ಬೊಟ್ಟು ಮಾಡುತ್ತವೆ. ಎಲ್ಲೆಲ್ಲಿ ತಪ್ಪು ಹೆಜ್ಜೆ ಇಟ್ಟಿದ್ದೇವೆ, ಏನೆಲ್ಲ ಬದಲಾವಣೆ ಮಾಡಿಕೊಳ್ಳಬೇಕಿದೆ, ಅಗ್ರಕ್ರಮಾಂಕದಲ್ಲಿರುವ ರಾಜ್ಯಗಳಿಂದ ನಾವು ಕಲಿಯುವುದು ಏನಿದೆ ಎಂಬುದನ್ನು ತಿಳಿದುಕೊಳ್ಳಲು ಆರೋಗ್ಯ ಸೂಚ್ಯಂಕ ವರದಿ ಉಪಯುಕ್ತ. ಆರೋಗ್ಯ ಕ್ಷೇತ್ರದಲ್ಲಿ ರಾಜ್ಯ ಹಿಂದೆ ಬೀಳಲು ಹಲವು ಅಂಶಗಳು ಕಾರಣವಾಗಿವೆ. ಎಲ್ಲವನ್ನೂ ಈ ವರದಿಯಲ್ಲಿ ವಿವರಿಸಲಾಗಿದೆ. ಇದನ್ನು ಒಮ್ಮೆ ಆರೋಗ್ಯ ಸಚಿವರು ಗಮನಿಸಬೇಕು ತಾವು ಮಾಡಿರು ಗನಂದಾರಿ ಕೆಲದಲ್ಲಿ ಎಂತಾ ಸಾಧನೆ ಎನ್ನುವುದು ಇಲ್ಲಿಯೆ ತೋರಿಸುತ್ತದೆ. ಇದು ನಿಮ್ಮ ಸಾಧನೆ..ಮೆಚ್ಚಬೇಕು ಆರೋಗ್ಯ ಖಾತೆಯೆ ಬೇಕು ಎಮದು ಹಠಮಾಡಿ ತಗೆದುಕೊಂಡ ನಿಮ್ಮ ಆ ಜಾಣ್ಮೆಗೆ ಈಗ ಆರೋಗ್ಯ ಕ್ಷೇತ್ರದಲ್ಲಿ ಏನಾಗಿದೆ ಎನ್ನುವುದಕ್ಕೆ ಉತ್ತರ ನೀಡಬೇಕಾಗುತ್ತದೆ.

# ಇದೆಂತ ದುಸ್ಥಿತಿಗೆ ಬಂದು ನಿಂತಿವೆ ನೋಡಿ..

## ಹಿಟ್ & ರನ್



ಪತ್ರಿಕೋದ್ಯಮ ಎನ್ನುವುದು ಒಂದು ಪವಿತ್ರವಾದ ವೃತ್ತಿ, ಈ ವೃತ್ತಿ ಇಡೀ ಸಮಾಜಕ್ಕೆ ಮಾದರಿ ನ್ಯಾಯ ಸಿಗುವುದು ಎಲ್ಲಿ ಎಂದರೆ ಅದು ಪತ್ರಿಕೋದ್ಯಮ ಎನ್ನುವುದು ಜನಜನತಿವಾಗಿತ್ತು ಆದರೆ ಇತ್ತೀಚೆಗೆ ಅದು ಹಾದಿ ತಪ್ಪುತ್ತಿದೆ. ಇವೆಲ್ಲವೂ ಆಗುತ್ತಿರುವುದು ಎಲೆಕ್ಟ್ರಾನಿಕ್ ಮಾಧ್ಯಮಗಳ ಹಾವಳಿಯಿಂದ.

ಸರ್ಕಾರಿ ಅಧಿಕಾರಿಗಳನ್ನು, ರಾಜಕಾರಣಿಗಳ ಭ್ರಷ್ಟತೆಯನ್ನು ಬಯಲಿಗೆಳೆದು ಬೀದಿಗಿ ನಿಲ್ಲಿಸುತ್ತಿದ್ದ ಮಾಧ್ಯಮಗಳೇ ಇಂದು ಭ್ರಷ್ಟಾತಿಭ್ರಷ್ಟವಾಗಿ ಬೀದಿಗೆ ಬಂದು ನಿಂತಿವೆ. ಇತ್ತೀಚೆಗೆ ಅಂತ ಘಟನೆಗಳೇ ಜಾಸ್ತಿ ಆಗುತ್ತಿವೆ.

ಒಂದು ಚಾನೆಲ್‌ನ ವರದಿಗಾರ ಅಥವಾ ಅದರ ಮುಖ್ಯಸ್ಥರ ಹಣ ವಸೂಲಿ ಮಾಡಲು ಹೋಗಿ ಸಿಕ್ಕಿಬಿದ್ದ ಎನ್ನುವುದನ್ನು ಇನ್ನೊಂದ ಚಾನೆಲ್‌ನಲ್ಲಿ ಮುಖ್ಯಸ್ಥನೇ ಸ್ಕ್ರೀನ್‌ಮೇಲೆ ಬಂದು ಆ ಚಾನೆಲ್ ಮುಖ್ಯಸ್ಥನ ಮೇಲೆ ನಾಯಿ ಬೊಗಳಿದಂತೆ ಬೊಗಳುವ ವರ್ತನೆ ಇದೆಯಲ್ಲ ಅದು ನಿಜಕ್ಕೂ ಈ ವೃತ್ತಿಯ ಎಲ್ಲಾ ಗೌರವವನ್ನು ಬೀದಿ ಪಾಲು ಮಾಡಿದಂತಾಗಿದೆ.

ವೃತ್ತಿ ಗೊತ್ತಿಲ್ಲದ ಯಾರೋ ಉದ್ಯಮಿಗಳು ಈ ವೃತ್ತಿಗೆ ಹಣ ಮಾಡಲು ಬಂದು ಇಂತ ಬೇವರ್ಸಿ ಕೆಲಸಗಳನ್ನು ಮಾಡುವ ಮೂಲಕ ಇಡೀ ಉದ್ಯಮವೇ ತಲೆತಗ್ಗಿಸುವಂತಾಗಿದೆ.

ಒಬ್ಬ ಚಾನೆಲ್ ಎಷ್ಟು ತಿಂದ ಎನ್ನುವುದು ಅದಕ್ಕೆ ನನಗೆ ಸಿಗಲಿಲ್ಲ ಎನ್ನುವ ಕಾರಣಕ್ಕೆ ಆ ಚಾನಲ್ ವಿರುದ್ಧ ಹರಿದಾಡುವುದು ಅವನು ಭ್ರಷ್ಟ ಎನ್ನುವುದು. ಅವನೇ ದೊಡ್ಡ ಭ್ರಷ್ಟ ಭ್ರಷ್ಟತೆಗೆ ಸಾಕ್ಷಿಗಳು ಕೂಡ ಇವೆ. ಇಂತ ಹೊತ್ತಿನಲ್ಲಿ ನಾಯಿ ಕಚ್ಚಾಡಿದಂತೆ ಕಚ್ಚಾಡುತ್ತಿರುವ ಆ ಚಾನಲ್‌ಗಳನ್ನು ನೋಡುತ್ತಿರುವ ಜನರು ಆ ಎರಡು ಚಾನೆಲ್‌ಗಳ ಯೋಗ್ಯತೆಯನ್ನು ಅಳೆದಿದ್ದಾರೆ ಎನ್ನುವುದು ಬೇರೆ ಮಾತು ಆದರೆ ಇಂತ ಎಲ್ಲಾ ಘಟನೆಗಳು ನಡೆದರು ಮರ್ಯಾದೆ ಇಲ್ಲದೆ ಬೀದಿಯಲ್ಲಿ ಬಟ್ಟೆ ಬಿಚ್ಚಿಕೊಂಡಂತೆ ನಾನೇ ಸಾಚಾ ನೀನು ಭ್ರಷ್ಟ ಎನ್ನುವ ಅರಿಚಾಟದ ವರ್ತನೆಗಳಿವೆಯಲ್ಲ ಇಂತ ವರ್ತನೆಗಳಿಗೆ ಕಾರ್ಯನಿರತ ಪತ್ರಕರ್ತ ಸಂಘವೇನಾದರೂ ಮಾಡಬೇಕು..ಇಲ್ಲದಿದ್ದರೆ ವೃತ್ತಿಗೌರವಕ್ಕೆ ದಿನೇ ದಿನೇ ಅಪಚಾರವಾಗುತ್ತಲೇ ಇರುತ್ತದೆ.

ಯಾವಾಗ ಜಾಗತೀಕರಣ ಬಂದಿತೋಅಲ್ಲಿಂದಲೇ ಈ ಪತ್ರಿಕೋದ್ಯಮ ಎನ್ನುವದು ಉದ್ಯಮಿಗಳ ಕೈಗೆ ಸಿಕ್ಕು ನಲುಗುತ್ತಿತ್ತು ಅದರಲ್ಲೂ ಎಲೆಕ್ಟ್ರಾನಿಕ್ ಮಾಧ್ಯಮಗಳ ಆರಂಭದಿಂತೂ ಇನ್ನಷ್ಟು ಕುಸಿದು ಹೋಯಿತು. ತನಿಖಾ ವರದಿ ಎನ್ನುವ ಕಾನ್ಸೆಪ್ಟ್ ಹೊರಟು ಹೋಯಿತು. ಇಲ್ಲಿ ಜಾಹೀರಾತಿಗಿಂತಲೂ ಹಣಮಾಡುವ ಕಡೆಗೆ ಹೆಚ್ಚು ಗಮನಕೊಟ್ಟ ಕಾರಣ ಪತ್ರಕರ್ತನಿಗೆ ಬೆಲೆಯೇ ಇಲ್ಲದಂತಾಗಿದೆ ಹೀಗಾಗಿಯೇ ಉದ್ಯಮಿ ಹೇಳಿದಂತೆ ಕೇಳುವ ಪರಿಪಾಠ ಇರುವುದರಿಂದ ವೃತ್ತಿಧರ್ಮದ ಎಲ್ಲಾ ಸಿದ್ದಾಂತಗಳೂ ಮರೆಮಾಚಲಾಗಿದೆ ಹಣಕ್ಕಾಗಿ ಎಲ್ಲವನ್ನೂ ಮಾರಿಕೊಂಡಂತಾಗಿದೆ. ಹಾಗಗಿಯೇ ಹಣಕ್ಕಾಗಿ ಎರಡು ಚಾನೆಲ್‌ಗಳು ಕಿತ್ತಾಡಿಕೊಂಡ ಪರಿ ಇದೆಯಲ್ಲ ಅದಕ್ಕಿಂತ ದುರ್ದೈವದ ಸಂಗತಿ ಇನ್ನೊಂದಿಲ್ಲ.

ಅಲ್ಪಸಂಖ್ಯಾತರು, ಹೆಣ್ಣುಮಕ್ಕಳು, ದಲಿತ ದಮನಿತರು ಭಯದ ನೆರಳಿನಲ್ಲಿ ಬದುಕುವ ದ್ವೇಷ ರಾಜಕಾರಣದ ವಾತಾವರಣವನ್ನು ಕಳೆದ ಕೆಲವು ವರ್ಷಗಳಲ್ಲಿ ಕಟ್ಟಿ ಬೆಳೆಸಲಾಗಿದೆ. ಹೊಸ ದ್ವೇಷಗಳ ವಿಷದ ಕಳೆಗೆ ಯಥೇಚ್ಛ ನೀರು ಗೊಬ್ಬರ ನಿರ್ಭೀತಿ ನಿರ್ಲಜ್ಜೆಯನ್ನು ಎರೆಯತೊಡಗಿದೆ ಈ ವಾತಾವರಣ. ಮುಸಲ್ಮಾನರ ನರಮೇಧಕ್ಕೆ ಬಹಿರಂಗ ಕರೆ ನೀಡುವವರನ್ನು ಮುಟ್ಟಲೂ ಆಗದೆ ಅಸಹಾಯಕವಾಗಿ ಕೈ ಕಟ್ಟಿ ಕುಳಿತಿದೆ ಕಾನೂನು.

# ಮಾರಣ ಹೋಮದ ಪೂರ್ವ ತಯಾರಿ!



ದೆಹಲಿ ದೃಷ್ಟಿ

ಡಿ.ಉಮಾಪತಿ
ಹಿರಿಯ ಪತ್ರಕರ್ತರು




ಸ್ತ್ರೀ ದ್ವೇಷ ಮತ್ತು ಧರ್ಮಾಂಧತೆ ಈ ನೆಲಕ್ಕೆ ಹೊಸ ಆವಿಷ್ಕಾರಗಳೇನೂ ಅಲ್ಲ. ಆದರೆ 'ಬೇಟೀ ಬಚಾವೋ, ಬೇಟಿ ಪಢಾವೋ' (ಮಗಳನ್ನು ಕಾಪಾಡಿರಿ, ಆಕೆಗೆ ಅಕ್ಷರ ಕಲಿಸಿರಿ) ಎಂಬುದು ಖುದ್ದು ಪ್ರಧಾನಮಂತ್ರಿಯವರೇ ವರ್ಷಗಳ ಹಿಂದೆ ನೀಡಿದ ಘೋಷಣೆ. ಎಲ್ಲಿ ನಾರಿಯರು ಪೂಜಿಸಲ್ಪಡುವರೋ ಅಲ್ಲಿ ದೇವಾನುದೇವತೆಗಳೂ ರಮಿಸುವರು ಎಂದು ಅಡಿಗಡಿಗೆ ಹೇಳಿಕೊಳ್ಳಲಾಗುತ್ತದೆ. ಮುಸ್ಲಿಮ್ ನಾರಿಯರು, ದಲಿತ ದಮನಿತ ಆದಿವಾಸಿ ನಾರಿಯರು, ಕ್ರೈಸ್ತ ನಾರಿಯರು ನಾರಿಯರು, ಕಡೆಗೆ ಉಗ್ರ ಹಿಂದುತ್ವವನ್ನು ಒಪ್ಪದಿರುವ ಹಿಂದೂ ನಾರಿಯರು ನಾರಿಯರೇ ಅಲ್ಲವೇ? ಅವರನ್ನು ಹೀನಾಮಾನ ನಿಂದಿಸಲುಬಹುದೇ? ಮುಸಲ್ಮಾನರೂ ಸೇರಿದಂತೆ ಎಲ್ಲ ದೇಶವಾಸಿಗಳ ಡಿ.ಎನ್.ಎ. ಒಂದೇ ಎಂದು ಸರಸಂಘಚಾಲಕರು ನೀಡಿದ ಹೇಳಿಕೆಗೆ ಅರ್ಥವೇನು?

ಪ್ರಧಾನಿಯಾಗಲಿ, ದೇಶದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಸ್ಮೃತಿ ಇರಾನಿ ಅವರೇ ಇರಲಿ, ಮುಸಲ್ಮಾನ ಹೆಣ್ಣುಮಕ್ಕಳ ಡಿಜಿಟಲ್ ಹರಾಜಿನ ಕುರಿತು ಈತನಕ ತುಟಿ ಬಿಚ್ಚಿಲ್ಲ. ಬೆಚ್ಚಿಬೀಳಿಸುವ ಆತಂಕಕಾರಿ ಅರ್ಥಗರ್ಭಿತ ಮೌನವಿದು. ಸಮ್ಮತಿಯಲ್ಲದೆ ಇನ್ನೇನೆಂದು ಅರ್ಥೈಸಬೇಕು?

ಅಲ್ಪಸಂಖ್ಯಾತರು, ಹೆಣ್ಣುಮಕ್ಕಳು, ದಲಿತ ದಮನಿತರು ಭಯದ ನೆರಳಿನಲ್ಲಿ ಬದುಕುವ ದ್ವೇಷ ರಾಜಕಾರಣದ ವಾತಾವರಣವನ್ನು ಕಳೆದ ಕೆಲವು ವರ್ಷಗಳಲ್ಲಿ ಕಟ್ಟಿ ಬೆಳೆಸಲಾಗಿದೆ. ಹೊಸ ದ್ವೇಷಗಳ ವಿಷದ ಕಳೆಗೆ ಯಥೇಚ್ಛ ನೀರು ಗೊಬ್ಬರ ನಿರ್ಭೀತಿ ನಿರ್ಲಜ್ಜೆಯನ್ನು ಎರೆಯತೊಡಗಿದೆ ಈ ವಾತಾವರಣ. ಮುಸಲ್ಮಾನರ ನರಮೇಧಕ್ಕೆ ಬಹಿರಂಗ ಕರೆ ನೀಡುವವರನ್ನು ಮುಟ್ಟಲೂ ಆಗದೆ ಅಸಹಾಯಕವಾಗಿ ಕೈ ಕಟ್ಟಿ ಕುಳಿತಿದೆ ಕಾನೂನು.

ಮನೆಯಲ್ಲಿ ಉಳಿದು ಮಕ್ಕಳನ್ನು ಹೆತ್ತು ಪೋಷಿಸುವ ಪಾತ್ರವನ್ನು ಮಹಿಳೆ ನಿಭಾಯಿಸಬೇಕೆಂಬ ಮಾತನ್ನು ಆರೆಸ್ಸೆಸ್ ಮುಖ್ಯಸ್ಥರು ಕೂಡ ಹೇಳುತ್ತಾರೆ. ಹಿಂದೂಗಳು ಹೆಚ್ಚು ಮಕ್ಕಳನ್ನು ಹೆರಬೇಕೆಂಬ ಕರೆಯನ್ನು ವಿಶ್ವಹಿಂದೂ ಪರಿಷತ್ ನೀಡುತ್ತಲೇ ಬಂದಿದೆ. ತೀವ್ರ ಹಿಂದುತ್ವವಾದಿ ನರಸಿಂಘಾನಂದ್ ಹೆಚ್ಚು ಮಕ್ಕಳನ್ನು ಹೆರದಿರುವ ಹಿಂದೂ ಮಹಿಳೆಯರನ್ನು




ರಾಕ್ಷಸಿಯರು ಮತ್ತು ನಾಗಿಣಿಯರು ಎಂದು ಜರೆದರು. ಸಾಧು ಸಂತರು ಎರಡೆರಡು ಸಲ ಮದುವೆಯಾಗಿ 'ಶುದ್ಧ ಹಿಂದೂ ಡಿ.ಎನ್.ಎ' ವೃದ್ಧಿಸಬೇಕು ಎಂದು ಕರೆ ನೀಡಿದರು. ಕುಣಾಲ್ ಶರ್ಮ ಎಂಬ ಈತನ ಶಿಷ್ಯನೊಬ್ಬನು ಬಡತನದ ಹಿನ್ನೆಲೆಯ ಮುಸ್ಲಿಮ್ ಹೆಣ್ಣುಮಕ್ಕಳ ಮೊಬೈಲು ಫೋನು ನಂಬರುಗಳ ಪಟ್ಟಿಯೊಂದನ್ನು ಹೊರಡಿಸಿ ಅವರನ್ನು ರೇಪ್ ಮಾಡುವಂತೆ ಹಿಂದೂ ಗಂಡಸರಿಗೆ ಕರೆ ನೀಡಿದ.ಮುಸ್ಲಿಮ್ ಹುಡುಗಿಯರ ಮದುವೆ ಮಾಡಿಕೊಂಡು ಅವರನ್ನು ಸರ್ಕಾರಿ ಆಸ್ತಿಯೆಂದು ಬಳಸಿರಿ, ಖುದ್ದು ಭೋಗಿಸಿ ಇತರರಿಗೂ ಕೊಡಿಸಿರಿ. ಆಗ ಮಾತ್ರವೇ ಸಬ್ ಕಾ ಸಾಥ್ ಸಬ್ ಕಾ ವಿಕಾಸ್ (ಸರ್ವರಿಗೂ ನ್ಯಾಯ) ಸಿಕ್ಕೀತು ಎಂದು ಸಾಮಾಜಿಕ ಜಾಲತಾಣಗಳಲ್ಲಿ ಬೊಗಳಿದ್ದ. ಒಂದನ್ನೊಂದು ಮೀರಿಸುವ ಇಂತಹದೇ ಕಾರ್ಕೋಟಕ ನಂಜಿನ ಹೇಳಿಕೆಗಳಿಂದ ಕಿಕ್ಕಿರಿದಿವೆ ಸಾಮಾಜಿಕ ಜಾಲತಾಣಗಳು.

ಇಸ್ಲಾಮ್ ಕ್ಷಿಪ್ರ ವಿಷವೆಂದೂ, ಕ್ರೈಸ್ತ ಧರ್ಮ ನಿಧಾನ ವಿಷವೆಂದೂ ಎರಡನ್ನೂ ಇಳೆಯಿಂದಲೇ ಅಳಿಸಿ ಹಾಕಬೇಕೆಂದೂ, ತೀವ್ರ ಹಿಂದುತ್ವವಾದಿಗಳು ಪ್ರಚಾರ ಮಾಡುತ್ತಿದ್ದಾರೆ.

ಸಾಮಾಜಿಕ ಜಾಲತಾಣಗಳ ಕಿಕ್ಕಿರಿದಿರುವ ಧರ್ಮಾಂಧ ಖಾತೆಗಳು ತಾವು 'ಕಾಲಿಫ್ಲವರ್ ಫಾರ್ಮರ್' (ಹೂಕೋಸು ರೈತ) ಎಂಬ ಬಣ್ಣನೆ ಹೊಂದಿರುತ್ತಿದ್ದವು. ಈಗಲೂ ಇಂತಹ ಲೆಕ್ಕವಿಲ್ಲದಷ್ಟು ಖಾತೆಗಳು ಕಾಣಸಿಗುತ್ತವೆ. 1989ರ ಭಾಗಲ್ಪುರ ಕೋಮುಗಲಭೆಗಳಲ್ಲಿ ಒಂದು ಕೋಮಿನವರು ಮತ್ತೊಂದು ಕೋಮಿಗೆ ಸೇರಿದವರನ್ನು ಕೊಂದು ಹೊಲಗಳಲ್ಲಿ ಹುಗಿದು ಮೇಲೆ ಹೂಕೋಸು ಬೆಳೆಯಲಾಗಿತ್ತು. ಹೂಕೋಸು ಕೃಷಿಯ ಈ ಕ್ರೂರ ರೂಪಕ ಇದೀಗ ಪುನಃ ಚಾಲ್ತಿಗೆ ಬಂದಿದೆ.






ಅರವತ್ತು ಲಕ್ಷ ಯಹೂದಿಗಳ ನರಮೇಧ ಸರಣಿಗೆ ಮುನ್ನ ಜರ್ಮನಿ ಇಂತಹುದೇ ದ್ವೇಷದ ಕೃಷಿ ಜರ್ಮನಿಯಲ್ಲಿ ನಡೆದಿತ್ತು. ಶ್ರೇಷ್ಟ ಜರ್ಮನ್ ಜನಾಂಗೀಯ ಶುದ್ಧಿಯ ವ್ಯಸನದ ಬಲೆಗೆ ಸಿಲುಕಿದ್ದ ಹಿಟ್ಲರ್. ಅವನ ನಾಜೀವಾದವು ಕ್ರೌರ್ಯದ ಪರಮಾವಧಿಯನ್ನು ಮುಟ್ಟಿತ್ತು.

ಜರ್ಮನರ ಆರ್ಯಜನಾಂಗೀಯ 'ಶುದ್ಧ ಶ್ರೇಷ್ಠ ರಕ್ತ'ವನ್ನು ಯಹೂದಿಗಳ 'ಕೀಳು ರಕ್ತ'ದಿಂದ ಕಲುಷಿತವಾಗದಂತೆ 'ಸಂರಕ್ಷಿಸುವುದು' ನಾಜೀವಾದದ ಗುರಿಯಾಗಿತ್ತು.

ಒಬ್ಬ ಮನುಷ್ಯನ ರಕ್ತ ಶ್ರೇಷ್ಠ ಅಥವಾ ಮತ್ತೊಬ್ಬನದು ಕನಿಷ್ಠ ಎಂಬ ವಾದಕ್ಕೆ ವೈಜ್ಞಾನಿಕ ಸಮರ್ಥನೆ ಇಲ್ಲ. ಆದರೆ ಹಿಟ್ಲರ್ ಅದಕ್ಕೆಲ್ಲ ಸೊಪ್ಪು ಹಾಕಲಿಲ್ಲ. ಜರ್ಮನ್ ರಕ್ತ ಹೊಂದಿರುವವರಿಗೆ ಮಾತ್ರವೇ ಜರ್ಮನ್ ನಾಗರಿಕತೆ ಮೀಸಲು. ಹೀಗಾಗಿ ಅನ್ಯ ಜನಾಂಗವಾಗಿದ್ದ ಯಹೂದಿಗಳು ಜರ್ಮನ್ ನಾಗರಿಕತೆಗೆ ಅರ್ಹರಲ್ಲ ಎಂದು ಸಾರಲಾಯಿತು. ಅವರ ನಾಗರಿಕ ಹಕ್ಕುಗಳ ಕಿತ್ತುಕೊಳ್ಳಲಾಯಿತು. ಯಹೂದಿಗಳು ಮತ್ತು ಜರ್ಮನರ ನಡುವೆ ವಿವಾಹ ಮತ್ತು ವಿವಾಹೇತರ ಸಂಬಂಧವನ್ನು ನಿಷೇಧಿಸಲಾಯಿತು.

ಮತ ಚಲಾಯಿಸುವ ಹಕ್ಕು, ಸಾರ್ವಜನಿಕ ಸ್ಥಾನಮಾನಗಳಿಗೆ ಮತ್ತು ಚುನಾವಣೆಗಳಲ್ಲಿ ಸ್ಪರ್ಧಿಸುವ ಹಕ್ಕುಗಳನ್ನು ಯಹೂದಿಗಳಿಗೆ ನಿರಾಕರಿಸಲಾಯಿತು. ಅವರು ರಾಜ್ಯವಿಲ್ಲದ ಪ್ರಜೆಗಳಾದರು. ಪಾಸ್ಪೋರ್ಟುಗಳು ವೀಸಾಗಳನ್ನೂ ಅವರು ಹೊಂದುವಂತಿರಲಿಲ್ಲ. ಅಂತಿಮವಾಗಿ ಯಹೂದಿಗಳ ಮಾರಣಹೋಮಕ್ಕೆ ನಡೆಸಲಾದ ಪೂರ್ವಭಾವಿ ತಯಾರಿಯಾಗಿತ್ತು ಇದು.

ಹೆಚ್ಚು ಹೆಚ್ಚು ಮಕ್ಕಳ ಹೆರುವ ಮೂಲಕ ಶುದ್ಧ ಆರ್ಯ ಜರ್ಮನ್ ಜನಾಂಗದ ಸಂಖ್ಯೆಯ ವೃದ್ಧಿಸಬೇಕೆಂದು  ಜರ್ಮನ್ ಮಹಿಳೆಯರ ಮೇಲೆ ಅತೀವ ಒತ್ತಡ ಹೇರಲಾಯಿತು. ಸ್ತ್ರೀವಾದಿ ಆಂದೋಲನವನ್ನು ಹೀಗಳೆಯಲಾಯಿತು. ಮಹಿಳೆಯು ಕೇವಲ ಮಕ್ಕಳ ಹೆರುವ ಯಂತ್ರವಾಗಿ ಮನೆಯ ನಾಲ್ಕು ಗೋಡೆಗಳ ಉಳಿಯಬೇಕೆಂದು ನಿರೀಕ್ಷಿಸಲಾಯಿತು. ಹೆರಲು ಅಸಮರ್ಥರಾದ ಹೆಂಡತಿಯರಿಗೆ ವಿಚ್ಛೇದನ ನೀಡಿ ಯುವತಿಯರನ್ನು ವರಿಸಿ ಮಕ್ಕಳ ಹುಟ್ಟಿಸುವಂತೆ ಜರ್ಮನ್ ಪುರುಷರನ್ನು ಪ್ರೋತ್ಸಾಹಿಸಲಾಯಿತು.

ಜರ್ಮನಿಯಲ್ಲಿ ದಫನಾದದ್ದು ಹಿಟ್ಲರನ ಭೌತಿಕ ಶರೀರ ಮಾತ್ರ. ಕುಲೀನ ಹಸಿರು ರಕ್ತದ ಆರ್ಯ ಜನಾಂಗೀಯ ಮೇಲ್ಮೆಯನ್ನು ಮತ್ತೆ ಸ್ಥಾಪಿಸುವ ಅವನ ಧೋರಣೆಗಳು ದಫನಾಗಿಲ್ಲ. ಅವು ಗಾಳಿಯಲ್ಲಿ ನೀರಿನಲ್ಲಿ ತೇಲಿ ದೇಶ ದೇಶಗಳನ್ನು ಮುಟ್ಟಿವೆ. ಪ್ರಚಂಡ ನಾಯಕರ ಒಡಲುಗಳನ್ನು ಮೆದುಳುಗಳನ್ನು ಸೇರಿ ಹೋಗಿವೆ. ಜನಾಂಗೀಯ ಶ್ರೇಷ್ಠತೆಯ ಹುಸಿ ಹೆಮ್ಮೆಯನ್ನೂ, ಅನಾರ್ಯ ರಕ್ತದ ಮೇಲೆ ದ್ವೇಷದ ಕಿಚ್ಚನ್ನೂ ಹೊತ್ತಿಸಿ ಉರಿಸತೊಡಗಿವೆ.

**``Birth, Sex and Abuse: Women`s Vioces Under Nazi Rule''** ಎಂಬ ಹೆಸರಿನ ಹೊತ್ತಿಗೆಯೊಂದಿದೆ. ಹೊಟ್ಟೆ ತೊಳಸಿ ಬರುವ ಭಯಾನಕ ಅತ್ಯಾಚಾರಗಳ ವಿವರಗಳಿಂದ ಅದು ತುಂಬಿ ಹೋಗಿದೆ. ಓದುವುದು ಕಡುಕಠಿಣ. ಡಾ.ಬೀವರ್ಲೀ ಛಾಮರ್ಸ್ ಎಂಬಾಕೆ ಈ ಪುಸ್ತಕದ ಲೇಖಕಿ. ಯಾತನಾ ಶಿಬಿರಗಳಲ್ಲಿ ಯಹೂದಿ ಮಹಿಳೆಯರ ಮೇಲೆ ನಾಜೀಗಳು ನಡೆಸುವ ಅತ್ಯಾಚಾರಗಳನ್ನೂ ಅಮಾನುಷ ವೈದ್ಯಕೀಯ ಪ್ರಯೋಗಗಳನ್ನೂ, ಅವರನ್ನು ಸೂಳೆಗಾರಿಕೆಗೆ ಬಳಸಿ ಕೊಲ್ಲುವುದನ್ನೂ ಇಲ್ಲಿ ದಾಖಲಿಸಲಾಗಿದೆ.  ಕೌಸರ್ ಬೀಬಿಯ ಬಸಿರನ್ನು ಖಡ್ಗದಿಂದ ಬಗೆದು ಭ್ರೂಣವನ್ನು ಎತ್ತಿ ಹಿಡಿದ ಪೈಶಾಚಿಕತೆಯ ಪೂರ್ವನಿದರ್ಶನಗಳು ಇಲ್ಲಿ ಹೇರಳ. ಕೋಮು ದಂಗೆಗಳೂ ಸೇರಿದಂತೆ ಚರಿತ್ರೆ ಮತ್ತು ವರ್ತಮಾನ ಕಾಲದ ಧಾರ್ಮಿಕ, ಜನಾಂಗೀಯ, ರಾಜಕೀಯ, ಆರ್ಥಿಕ ಹಿತಾಸಕ್ತಿಯ ಕದನಗಳು, ಯುದ್ಧಗಳಿಗೆ ಲಕ್ಷ ಲಕ್ಷ ಹೆಣ್ಣು ದೇಹಗಳು ಕದನ ಭೂಮಿಗಳಾಗಿ ಪರಿಣಮಿಸಿದ್ದು ನಾಚಿಕೆಗೇಡಿನ ನಿಜ. ಬುಲ್ಲೀಬಾಯಿ ಸುಲ್ಲೀಬಾಯಿ ಹರಾಜಿನ ಅಧಮ ಕೃತ್ಯದ ಹಿಂದೆ ಈ ಬಗೆಯ ಗಂಡಾಳಿಕೆಯೂ ಹೆಡೆಯಾಡಿದೆ.

ಅಪಾಯಕಾರಿ ವ್ಯಾಧಿಯ ನಿಚ್ಚಳ ಲಕ್ಷಣಗಳು ಸಮಕಾಲೀನ ಭಾರತದಲ್ಲಿ ಭುಸುಗುಟ್ಟಿವೆ. ಸೌಹಾರ್ದ ಸಾಮರಸ್ಯದ ಬಹುಮುಖೀ ಸಂಸ್ಕೃತಿಯ ಸಾಮಾಜಿಕ ಹಂದರವನ್ನು ಛಿದ್ರಗೊಳಿಸಿ ದೇಶವನ್ನು ದುರ್ಬಲಗೊಳಿಸುವ ರೋಗ ಚಿಹ್ನೆಗಳಿವು.

ಈ ರೋಗ ಬಡಿದಿದ್ದ ಜರ್ಮನಿಯು ಕಂಡ ನೀಚಾತಿನೀಚ ನರಮೇಧಗಳ ತಾಜಾ ಉದಾಹರಣೆ ನಮ್ಮ ಕಣ್ಣಮುಂದೆಯೇ ಇದೆ. ಹಗಲು ಕಂಡ ಈ ಭಾವಿಗೆ ರಾತ್ರಿ ಬೀಳತೊಡಗಿದೆ ಭಾರ

ಉತ್ತರ ಪ್ರದೇಶ ಸೇರಿದಂತೆ ಐದು ರಾಜ್ಯ ವಿಧಾನ ಸಭೆಗಳಿಗೆ ಇಷ್ಟರಲ್ಲೆ ಚುನಾವಣೆ ನಡೆಯಲಿದೆ. ಲೋಕಸಭಾ ಚುನಾವಣೆ 2024ರಲ್ಲಿ ನಡೆಯಲಿದೆ. ಆ ಚುನಾವಣೆಗೆ ಈ ಚುನಾವಣೆ ಮುನ್ನುಡಿ. ಆಕ್ರಮಣಕಾರಿ ಆಡಳಿತ ನಡೆಸಿರುವ ನರೇಂದ್ರ ಮೋದಿ ವಿರುದ್ಧ ಮಾತಾಡುವ ವಿರೋಧ ಪಕ್ಷಗಳಲ್ಲಿ ಬಿಜೆಪಿ/ಎನ್‌ಡಿಎ ಮಣಿಸುವುದಕ್ಕೆ ಅಜೆಂಡಾ ಏನು...?


# ಮೋದಿ ಮಣಿಸಲು ವಿರೋಧಿ ಪಾಳಯದ ಅಜೆಂಡಾ ಏನು?



ರಾಜಸೂತ್ರ

ಎಂ.ಕೆ. ಭಾಸ್ಕರ ರಾವ್
ಹಿರಿಯ ಪತ್ರಕರ್ತರು

ಬರೋಬ್ಬರಿ 403 ಸ್ಥಾನಬಲದ ಭೌಗೋಳಿಕವಾಗಿ ದೇಶದಲ್ಲೇ ಅತ್ಯಂತ ವಿಸ್ತಾರವಾದ ರಾಜ್ಯ, ಬೇರೆಲ್ಲ ರಾಜ್ಯಗಳಿಗಿಂತ ಅತ್ಯಧಿಕ ಜನಸಂಖ್ಯೆಯನ್ನೂ ಹೊಂದಿರುವ ರಾಜ್ಯ ಉತ್ತರ ಪ್ರದೇಶವೂ ಸೇರಿದಂತೆ ಐದು ರಾಜ್ಯ ವಿಧಾನ ಸಭೆಗಳಿಗೆ ಚುನಾವಣೆ ಘೋಷಣೆಯಾಗಿದೆ. ಮಾರ್ಚ್ ಹತ್ತರಂದು ತಮ್ಮನ್ನು ಆಳಲು ಯಾರು ಲಾಯಕ್ಕು ಯಾರು ಲಾಯಕ್ಕಲ್ಲ ಎಂಬ ಜನರ ತೀರ್ಮಾನ ಬಹಿರಂಗವಾಗಲಿದೆ. ಉತ್ತರ ಪ್ರದೇಶವನ್ನು ಜೈಸಿದ ಪಕ್ಷ/ ಒಕ್ಕೂಟ ಕೇಂದ್ರದಲ್ಲಿ ಅಧಿಕಾರ ಹಿಡಿಯುತ್ತದೆಂಬ ಮಾತು ಇನ್ನೂ ಚಲಾವಣೆಯಲ್ಲಿ ಇರುವುದರಿಂದ ಹಣಾಹಣಿ ಅಬ್ಬರದಿಂದಲೆ ಶುರುವಾಗಿದೆ. ಅಧಿಕಾರಸ್ತ ಬಿಜೆಪಿ/ಎನ್‌ಡಿಎಗೆ ಉತ್ತರ ಪ್ರದೇಶವನ್ನು ಮತ್ತೆ ವಶಕ್ಕೆ ಪಡೆಯುವ ತವಕವಾದರೆ ಅದರ ವಿರುದ್ಧ ನಿಂತಿರುವ ಕಾಂಗ್ರೆಸ್ ಸೇರಿದಂತೆ ಹತ್ತು ಹಲವು ಪಕ್ಷಗಳಿಗೆ ಆ ರಾಜ್ಯವನ್ನು ಬಿಜೆಪಿ ಕೈಯಿಂದ ಕಿತ್ತುಕೊಳ್ಳುವ ತವಕ. ಉತ್ತರ ಪ್ರದೇಶದಲ್ಲಿ ಈಗ ನಡೆದಿರುವುದು ತವಕ ತಲ್ಲಣಗಳ ಸಂಘರ್ಷ.



ಉತ್ತರ ಪ್ರದೇಶವನ್ನು ಬಿಜೆಪಿ ಮುಕ್ತ ಮಾಡಿದರೆ ಕೇಂದ್ರದಲ್ಲಿರುವ ನರೇಂದ್ರ ಮೋದಿ ಸರ್ಕಾರವನ್ನು ಸುಲಭದಲ್ಲಿ ದುರ್ಬಲಗೊಳಿಸಬಹುದು; ಅದಾಯಿತೆಂದರೆ, 2024ರಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ/ ಎನ್‌ಡಿಎಯನ್ನು ವಿರೋಧ ಪಕ್ಷದ ಸಾಲಿಗೆ ತಳ್ಳಬಹುದೆಂಬ ಬಹುದೊಡ್ಡ ಲೆಕ್ಕಾಚಾರ ವಿರೋಧ ಪಕ್ಷಗಳಲ್ಲಿದೆ. ಅದೊಂದು ಕಾಲವಿತ್ತು, ಇಂದಿರಾ ಗಾಂಧಿ ವಿರುದ್ಧ ದೇಶದ ಬಹುತೇಕ ರಾಜಕೀಯ ಪಕ್ಷಗಳು ಪರಸ್ಪರ ಸೈದ್ಧಾಂತಿಕ ವಿರೋಧದಲ್ಲೂ ವಿರೋಧಕ್ಕೆಂದೇ ಕೈ ಜೋಡಿಸಿದ್ದವು. ಇಂದಿರಾ ಗಾಂಧಿ ಆಗ ಎದುರಿಸಿದ್ದ ರಾಜಕೀಯ ಸನ್ನಿವೇಶದ ಸ್ಥಿತಿಯೇ ಈ ಹೊತ್ತು ನರೇಂದ್ರ ಮೋದಿಗೆ ಎದುರಾಗಿದೆ. ಇಂದಿರಾ ಮತ್ತು ಅವರ ನೇತೃತ್ವದ ಸರ್ಕಾರದ ವಿರುದ್ಧ ಬಿಡಿಬಿಡಿಯಾಗಿ ಹೋರಾಡಿದ ಪಕ್ಷಗಳಿಗೆ ಕೆಲವು ಸಮಯದ ಮಟ್ಟಿಗಾದರೂ ಗೋಂದು ಅಂಟಿಸುವಲ್ಲಿ ಜಯಪ್ರಕಾಶ ನಾರಾಯಣ ಯಶಸ್ವಿಯಾಗಿದ್ದರು. ಈಗಿನ ವಿರೋಧ ಪಕ್ಷಗಳಲ್ಲಿ ಒಗ್ಗಟ್ಟಾಗಿ ಹೋರಾಡುವ ಮನಃಸ್ಥಿತಿಯೂ ಇಲ್ಲ, ಜೆಪಿಯವರಂಥ ಮೇರು ವ್ಯಕ್ತಿತ್ವವುಳ್ಳವರ ನಾಯಕತ್ವವೂ ಇಲ್ಲ. ಮೋದಿ ವಿರುದ್ಧದ ವಿರೋಧ ಪಕ್ಷಗಳದು ಅರ್ಥಹೀನ ಅಡಾವುಡಿ ಎಂಬಂತಾಗಿರುವುದು ವರ್ತಮಾನದ ವಾಸ್ತವ.



ಉತ್ತರ ಪ್ರದೇಶ (403), ಪಂಜಾಬ್ (117), ಗೋವಾ (40), ಉತ್ತರಾಖಂಡ (70) ಹಾಗೂ ಮಣಿಪುರ (60) ಹೀಗೆ ಒಟ್ಟಾರೆಯಾಗಿ 690 ವಿಧಾನ ಸಭಾ ಸೀಟುಗಳಿಗೆ ಚುನಾವಣೆ ನಡೆಯಬೇಕಿದೆ. ಕಾಂಗ್ರೆಸ್ ಆಡಳಿತವಿರುವ ಪಂಜಾಬ್ ಹೊರತುಪಡಿಸಿದರೆ ಉಳಿದ ನಾಲ್ಕೂ ರಾಜ್ಯಗಳಲ್ಲಿ ಬಿಜೆಪಿ/ಎನ್‌ಡಿಎ ಆಡಳಿತವಿದೆ. 8.5 ಕೋಟಿ ಮಹಿಳೆಯರೂ ಸೇರಿದಂತೆ ಒಟ್ಟಾರೆ 18.3 ಕೋಟಿ ಜನ ಮತ ಚಲಾಯಿಸಲಿದ್ದಾರೆ. ಕೈಯಲ್ಲಿರುವ ರಾಜ್ಯಗಳನ್ನು ಉಳಿಸಿಕೊಳ್ಳುವುದರ ಜೊತೆಗೆ ಪಂಜಾಬಿನಲ್ಲಿ ಕಾಂಗ್ರೆಸ್ಸು ಮತ್ತೆ ಅಧಿಕಾರಕ್ಕೆ ಬರದಂತೆ ನೋಡಿಕೊಳ್ಳುವುದು ಬಿಜೆಪಿಯ ಚುನಾವಣಾ ಅಜೆಂಡಾ. ಪಂಜಾಬಿನಲ್ಲಿ ತಾನು ಅಧಿಕಾರಕ್ಕೆ ಬರುವ ವಿಚಾರದಲ್ಲಿ ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳಿಗೆ ಅನುಮಾನವೇ ಹೆಚ್ಚಿನ ಪ್ರಮಾಣದಲ್ಲಿದೆ. ತನ್ನದು ಎರಡೂ ಕಣ್ಣು ಹೋದರೂ ಪರವಾ ಇಲ್ಲ, ಎದುರಾಳಿಯದು ಒಂದಾದರೂ ನಾಶವಾಗಲಿ ಎಂಬ ನೀತಿಗೆ ಬಿಜೆಪಿ ಆ ರಾಜ್ಯದ ಮಟ್ಟಿಗೆ ಬಂದು ನಿಂತಿದೆ. ದೇಶದ ಮುಖ್ಯ ವಿರೋಧ ಪಕ್ಷ ಎಂಬ ಹೆಸರನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿರುವ ಕಾಂಗ್ರೆಸ್ಸು ಈ ಮಹತ್ವದ ಚುನಾವಣೆ ಎದುರಿಸುವುದಕ್ಕೆ ಹಾಕಿಕೊಂಡಿರುವ ಅಜೆಂಡಾ ಏನು...? ಚುನಾವಣೆ ಬಾಗಿಲಲ್ಲಿ ಬಂದು ನಿಂತಿದೆ ಆದರೆ ಆ ಪಕದಲಿ ರಣೋತ್ಸಾಹವೇ ಕಾಣೆಯಾಗಿದೆ. ವೃಥಾ ವಿಳಂಬವಿಲ್ಲದೆ ಕಾಲಕಾಲಕ್ಕೆ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗದ ಪಕ್ಷ ನಾಯಕತ್ವದ ಅಸಹನೀಯ ದೌರ್ಬಲ್ಯ ಸಂಘಟನೆಯನ್ನು ದೇಶದ ಉದ್ದಗಲಕ್ಕೆ ರೋಗಗಸವನ್ನಾಗಿಸಿದೆ.



ಇಷ್ಟಾಗಿಯೂ ಉತ್ತರ ಪ್ರದೇಶದಲ್ಲಿ ಶತಾಯಗತಾಯ ಅಧಿಕಾರ ಹಿಡಿಯುವ ಮಾತನ್ನು ಕಾಂಗ್ರೆಸ್ ನಾಯಕತ್ವ ಆಡುತ್ತಿದೆ. ರಾಜ್ಯ ಕಾಂಗ್ರೆಸ್ ವಲಯದಲ್ಲಿ ಹರಿದಾಡುತ್ತಿರುವ ಮಾಹಿತಿ ರೀತ್ಯ ಪಕ್ಷ ಅಧಿಕಾರಕ್ಕೆ ಬಂದರೆ ಪ್ರಿಯಾಂಕಾ ಗಾಂಧಿಯೇ ಮುಖ್ಯಮಂತ್ರಿ(ಇದು ನಿಜವಾದರೆ ಇಂದಿರೋತ್ತರ ಗಾಂಧಿ ನೆಹರೂ ಕುಟುಂಬದ ಮೊದಲ ಮುಖ್ಯಮಂತ್ರಿ ಎನಿಸಲಿದ್ದಾರೆ) ಬಹಳ ದುಬಾರಿಯದು ಎನ್ನಬಹುದಾದ ಈ ಕನಸು ನನಸಾಗಬೇಕೆಂದರೆ ಸರಳ ಬಹುಮತಕ್ಕೆ 202 ಸ್ಥಾನಗಳನ್ನು ಕಾಂಗ್ರೆಸ್/ಯುಪಿಎ ಗೆಲ್ಲಬೇಕಿದೆ. ಹಾಲಿ ವಿಧಾನ ಸಭೆಯಲ್ಲಿ ಬಿಜೆಪಿ /ಎನ್‌ಡಿಎ 312 ಸ್ಥಾನ ಹೊಂದಿದ್ದು ಕಾಂಗ್ರೆಸ್‌ನ ಕನಸು ಅಷ್ಟೆಲ್ಲ ಸುಲಭಕ್ಕೆ ನನಸಾಗುವ ಸಾಧ್ಯತೆ ಈಗಿನ ರಾಜಕೀಯದ ಮಸೂರದಲ್ಲಿ ನೋಡಿದರೆ ಮರೀಚಿಕೆ ಎನಿಸುತ್ತದೆ. ಹಾಲಿ ವಿಧಾನ ಸಭೆಯಲ್ಲಿ ಕಾಂಗ್ರೆಸ್ಸು ಕೇವಲ ಏಳು ಶಾಸಕರನ್ನು ಹೊಂದಿದೆ. ಏಳಕ್ಕೆ ಏಳನ್ನೂ ಗೆಲ್ಲುವುದರ ಜೊತೆಗೆ ಇನ್ನು 195 ಸ್ಥಾನವನ್ನು ಅದು ಗೆದ್ದಲ್ಲಿ ಸರಳ ಬಹುಮತ ಕೈಗೆಟುಕುತ್ತದೆ. ಆ ಹರಸಾಹಸಕ್ಕೆ ಸಿದ್ಧತೆಯಾದರೂ ಏನೆನ್ನುವುದು ಜನತೆಗೆ ಗೊತ್ತಾಗಿಲ್ಲ. ಜನರನ್ನು ಕತ್ತಲಲ್ಲಿಟ್ಟು ಮಾಡುವ ರಾಜಕೀಯಕ್ಕೆ ಪ್ರಜಾಪ್ರಭುತ್ವದಲ್ಲಿ ಅವಕಾಶವಿಲ್ಲ. ಒಂದು ಮಾತಂತೂ ಸತ್ಯ, ಕನಸು ಕಾಣಲು ದುಡ್ಡು ಕೊಡಬೇಕಾಗಿಲ್ಲ.

ಮೋದಿ ಅಧಿಕಾರಕ್ಕೆ ಬಂದು ಎಂಟು ವರ್ಷವಾಗುತ್ತಿದೆ. ಎಲ್ಲ ವಿರೋಧ ಪಕ್ಷಗಳೂ ಆಪಾದಿಸುತ್ತಿರುವಂತೆ ಅವರದು ಜನವಿರೋಧಿ ಆಡಳಿತ. ಹೌದು, ಆದರೆ ಜನವಿರೋಧಿ ಆಡಳಿತದ ಅಂತ್ಯಕ್ಕೆ ವಿರೋಧಿ ಪಾಳಯದಲ್ಲಿರುವ ಕಾರ್ಯಕ್ರಮಗಳಾವವು...? ಗೊತ್ತಿಲ್ಲ. ಜನಸಾಮಾನ್ಯರಿಗೆ ಅದು ಗೊತ್ತಿಲ್ಲವಾದರೆ ಅಚ್ಚರಿಯಲ್ಲ ಆದರೆ ಸ್ವತಃ ಮೋದಿ ಬುಡವನ್ನು ಅಲ್ಲಾಡಿಸುವ ಮಾತಾಡುತ್ತಿರುವ ವಿರೋಧ ಪಕ್ಷಗಳಿಗೇ ಅದು ಗೊತ್ತಿಲ್ಲ. ವಿರೋಧಿ ಪಾಳಯದಲ್ಲಿ ಒಗ್ಗಟ್ಟಿನ ಕೊರತೆ ಇದೆ; ಏಕತೆಯ ಅಭಾವವಿದೆ; ಸಂಘಟನೆಯ ಕೊರತೆ ಇದೆ; ಅಧಿಕಾರಕ್ಕೆ ಬರಲೇಬೇಕೆಂಬ ಛಲದ ಒರತೆ ಅಗೋಚರವಾಗಿದೆ. ಇಷ್ಟನ್ನು ಹೇಳಿದ ನಂತರದಲ್ಲಿ ಎತ್ತು ಏರಿಗೆ ಎಮ್ಮೆ ನೀರಿಗೆ ಎಂದರೆ ಎಲ್ಲರಿಗೂ ಅರ್ಥವಾಗುತ್ತದೆ.




ತಾನೇ ದೊಡ್ಡಣ್ಣ, ತಾನು ಹೇಳಿದಂತೆ ಇತರ ವಿರೋಧ ಪಕ್ಷಗಳು ಕೇಳಬೇಕು ಎನ್ನುವ ಮನೋಭಾವ ಇಷ್ಟೆಲ್ಲ ವರ್ಷಗಳ ಸತತ ಸೋಲಿನ ಬಳಿಕವೂ ಕಾಂಗ್ರೆಸ್‌ನಲ್ಲಿ ಮನೆ ಮಾಡಿದೆ. ಗೌಡಿಕೆಗೆ ಈ ಕಾಲದ ರಾಜಕಾರಣದಲ್ಲಿ ಅವಕಾಶವಿಲ್ಲ ಎನ್ನುವುದು ಆ ಪಕ್ಷಕ್ಕೆ ಮನವರಿಕೆ ಆಗಿಲ್ಲ. ತಾನು ಜನಿಸಿರುವುದೆ ಪ್ರಧಾನಿಯಾಗುವುದಕ್ಕಾಗಿ ಎಂಬ ಭ್ರಮೆಯಲ್ಲೇ ಇರುವ ರಾಹುಲ್ ಗಾಂಧಿ ಮತ್ತು ಮಗನನ್ನು ಪ್ರಧಾನಿ ಸ್ಥಾನದಲ್ಲಿ ನೋಡಬೇಕೆನ್ನುವುದೇ ತಮ್ಮ ಜೀವಿತದ ಮಹತ್ವಾಕಾಂಕ್ಷೆ ಎಂದುಕೊಂಡಿರುವ ಸೋನಿಯಾ ಗಾಂಧಿ, ಸ್ವಂತ ರಾಜಕೀಯದ ವಿಚಾರಕ್ಕೆ ಕೊಟ್ಟಿರುವ ಮಹತ್ವದ ಕಾಲಂಶವನ್ನೂ ಪಕ್ಷದ ಸಂಘಟನೆಗೆ ನೀಡಿಲ್ಲ ಎನ್ನುವುದು ದೇಶ ಬಲ್ಲ ವಿದ್ಯಮಾನ. ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರವನ್ನು ಮನೆಗೆ ಕಳಿಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್/ ಯುಪಿಎ ಸರ್ಕಾರ ಮನಮೋಹನ್ ಸಿಂಗ್ ನೇತೃತ್ವದಲ್ಲಿ ಹತ್ತು ವರ್ಷ ಅಧಿಕಾರದಲ್ಲಿದ್ದು ನಿರ್ಗಮಿಸಿದಾಕ್ಷಣದಲ್ಲೆ ಅದರ ಲೋಕಸಭಾ ಸ್ಥಾನ ಬಲ 44ಕ್ಕೆ ಕುಸಿದುದು ಮತ್ತು ಐದು ವರ್ಷಾನಂತರದಲ್ಲಿ ನಡೆದ ಚುನಾವಣೆಯಲ್ಲೂ ಸೆಟೆದು ನಿಲ್ಲುವುದಕ್ಕಾಗಲಿಲ್ಲ ಎನ್ನುವುದು ಹೇಳಬೇಕಾದುದೆಲ್ಲವನ್ನೂ ಹೇಳುತ್ತದೆ. ಸೋಲಿಗೆ ಕಾರಣವಿರುತ್ತದೆ. ಅವರು ಗೆದ್ದರು ಎಂಬ ಕಾರಣಕ್ಕೆ ಇವರು ಸೋತರು ಎನ್ನುವುದಕ್ಕೆ ಇಲ್ಲಿ ಅವಕಾಶವಿಲ್ಲ. 2024ರಲ್ಲಿ ಮೋದಿ ಪಡೆ ಮತ್ತೆ ಗೆದ್ದರೆ ಕಾಂಗ್ರೆಸ್ ಗತಿ ಏನಾಗಬಹುದು ಎಂಬ ಬಗ್ಗೆ ಸೋನಿಯಾ ಮತ್ತು ಅವರನ್ನು ಸುತ್ತುವರಿದಿರುವ ವಂದಿ ಮಾಗಧರು ಯೋಚಿಸಿದಂತಿಲ್ಲ. ಪಕ್ಷದ ನಾಯಕತ್ವಕ್ಕೆ ಕಾಯಕಲ್ಪವಾಗಬೇಕೆಂದು ಪಟ್ಟು ಹಿಡಿದ ಗ್ರೂಪ್–24ರ ಸದಸ್ಯರನ್ನು ಒಬ್ಬೊಬ್ಬರನ್ನಾಗಿ ಹಣಿಯುವ ಕೆಲಸಕ್ಕೆ ಕಾಂಗ್ರೆಸ್ ಹೈಕಮಾಂಡ್ ಮುಂದಾಗಿದೆಯೇ ಹೊರತೂ ಪಕ್ಷ ಸಂಘಟನೆಗಲ್ಲ.

2014ರಲ್ಲಿ ಕಾಂಗ್ರೆಸ್ ಸೋತಾಗ "ನಾವು ಸೋತಿದ್ದೇವೆ ನಿಜ; ಆದರೆ ಸತ್ತಿಲ್ಲ" ಎಂದು ಜನರ ಮುಂದೆ ಬಂದು ಹೇಳಬೇಕಾದ ಕೆಲಸವನ್ನು ಕಾಂಗ್ರೆಸ್ ಪಕ್ಷವಾಗಲೀ ಅದರ ಸೂತ್ರಧಾರತ್ವ ವಹಿಸಿಕೊಂಡಿರುವ ತಾಯಿ ಮಗನಾಗಲಿ ಮಾಡಲಿಲ್ಲ. 2019ರಲ್ಲಿ ಸೋಲು ಪುನರಾವರ್ತನೆಯಾಯಿತು. ಆಗಲೂ ಅಷ್ಟೆ, ಜನರ ಮುಂದೆ ನಾಯಕರು ಬರಲಿಲ್ಲ. ಯಾಕೆ ಈ ಬಗೆಯ ಸೋಲುಂಟಾಯಿತು ಎನ್ನುವುದರ ಸತ್ಯಶೋಧನಾ ವರದಿ ಬಂತಾದರೂ ಅದನ್ನು ಆಧರಿಸಿ ಕ್ರಮ ಜರುಗಿಸಲಿಲ್ಲ. ಪಕ್ಷದಲ್ಲಿ ಜನ ಯಾಕೆ ವಿಶ್ವಾಸ ಕಳೆದುಕೊಂಡಿದ್ದಾರೆ ಎನ್ನುವುದಕ್ಕೆ ಕಾರಣವಿರುತ್ತದೆ. ಆದರೆ ಆ ಕಾರಣ ಪಕ್ಷದ ನಾಯಕತ್ವಕ್ಕೆ ಬೇಕಾಗಿಲ್ಲ. ತಲೆದಂಡಕ್ಕೆ ಯಾರು ಸಿದ್ಧರಿರುತ್ತಾರೆ...? ಹೀಗಿರುವಾಗ ಮಗಳನ್ನು ಮುಖ್ಯಮಂತ್ರಿ ಮಾಡುತ್ತೇನೆ, ಮಗನನ್ನು ಪ್ರಧಾನಿ ಮಾಡುತ್ತೇನೆ ಎಂದು ಜನರ ಮುಂದೆ ಹೋದರೆ ಅವರು ಉಗಿದು ಉಪ್ಪಿನಕಾಯಿ ಹಾಕದೇ ಇರುತ್ತಾರೆಯೆ...? ಈ ಕಟು ವಾಸ್ತವಕ್ಕೆ ಕಾಂಗ್ರೆಸ್ಸು ಬೆನ್ನು ಹಾಕಿ ಕೂತಿದೆ. 2017ರಲ್ಲಿ ಉತ್ತರ ಪ್ರದೇಶ ವಿಧಾನ ಸಭೆಗೆ ಚುನಾವಣೆ ನಡೆದ ಸಂದರ್ಭದಲ್ಲಿ ಅಖಿಲೇಶ್ ಯಾದವ್ ನೇತೃತ್ವದ ಸಮಾಜವಾದಿ ಪಕ್ಷದೊಂದಿಗೆ ಕಾಂಗ್ರೆಸ್ಸು ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿತ್ತು. ಅದರಿಂದ ಅಖಿಲೇಶ್‌ಗೆ ನಷ್ಟವಾಯಿತು; ಕಾಂಗ್ರೆಸ್‌ಗೆ ಲಾಭವಾಗಲಿಲ್ಲ. ಈ ಸಲ ಅಂಥ ಸಣ್ಣ ಲಕ್ಷಣವೂ ಕಾಣಿಸುತ್ತಿಲ್ಲ. ಅಖಿಲೇಶ್ ಯಾದವ್ 47 ಸೀಟು ಗಳಿಸಿದ್ದರು. ಮಯಾವತಿಯ ಬಹುಜನ ಸಮಾಜ ಪಕ್ಷ 19 ಸೀಟು ಗಳಿಸಿತ್ತು. ಎಸ್‌ಪಿ ಮತ್ತು ಬಿಎಸ್‌ಪಿ ಕಾರಣವಾಗಿ ಕಾಂಗ್ರೆಸ್‌ನ ಪರಂಪರಾಗತ ಮತ ಬ್ಯಾಂಕ್ ಛಿದ್ರಛಿದ್ರವಾಗಿ ದಶಕಗಳೇ ಕಳೆದುಹೋಗಿದೆ. ಬಿಜೆಪಿ ವಿರೋಧಿ ಮತಗಳು ಮೂರಾಗಿ ಒಡೆದು ಮೂರಾಬಟ್ಟೆಯಾಗುವ ಸಾಧ್ಯತೆ ಇರುವುದೆ ಬಿಜೆಪಿ ಲೆಕ್ಕಾಚಾರಕ್ಕೆ ಕಾರಣವಾಗಿದೆ. ಆ ಪಕ್ಷದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥರ ಪ್ರಕಾರ ಕನಿಷ್ಠ ಮೂರು ನೂರು ಸ್ಥಾನಗಳನ್ನು ಬಿಜೆಪಿ ಗೆಲ್ಲುತ್ತದೆ. ಇನ್ನು ಕೆಲವು ಮುಖಂಡರ ಪ್ರಕಾರ 312ರಿಂದ 325ಕ್ಕೆ ಸ್ಥಾನ ಬಲ ಹೆಚ್ಚಲಿದೆ. ಆ ಜಿಗಿತದ ಕನಸಿಗೂ ಅಷ್ಟೆ ಕಾಲೂ ಇಲ್ಲ ಕೈಯೂ ಇಲ್ಲ. ಆದರೇನಂತೆ ಕನಸು ಕಾಣಲು ದುಡ್ಡು ಕೊಡಬೇಕಾಗಿಲ್ಲವಲ್ಲ!



2014ರ ಲೋಕಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ಬಿಜೆಪಿ/ಎನ್‌ಡಿಎ ಅಯೋಧ್ಯಾದಲ್ಲಿ ರಾಮ ಮಂದಿರ ನಿರ್ಮಿಸುವ ಪ್ರಸ್ತಾಪ ಮಾಡಿರಲಿಲ್ಲ. 2019ರಲ್ಲೂ ಅಷ್ಟೆ. ಆದರೆ ಪಿಸು ಮಾತಿನ ಪ್ರಚಾರದಲ್ಲಿ ಅದೇ ಮುಖ್ಯವಾಗಿ ಗುಪ್ತಗಾಮಿನಿಯಂತೆ ಹರಿದಿತ್ತು. ಮಂದಿರ ನಿರ್ಮಾಣ ಈಗ ಎದ್ದು ಕಾಣಿಸುವ ಪ್ರಗತಿಯಲ್ಲಿದೆ. ಉತ್ತರ ಪ್ರದೇಶ ವಿಧಾನ ಸಭಾ ಚುನಾವಣೆಯಲ್ಲಿ ಮತ್ತೆ ಇದೇ ವಸ್ತು. ಲೋಕಸಭಾ ಚುನಾವಣೆ ವೇಳೆಗೆ ರಾಮ ಮಂದಿರ ಪೂರ್ಣವಾಗುತ್ತದೆಂಬ ನಿರೀಕ್ಷೆ ಬಿಜೆಪಿ ಮತದಾರರದು.



● 6ನೇ ಪುಟಕ್ಕೆ...

# ಸ್ವಯಂ ಸೇವಾ ಸಂಸ್ಥೆಗಳ ಮೇಲೆ ಕೇಂದ್ರದ ಕೆಂಗಣ್ಣು

ಸ್ವಯಂ ಸೇವಾ ಸಂಸ್ಥೆಗಳ ಮೇಲೆ ಕೆಂಗಣ್ಣು ಬೀರಿದ ಮೋದಿ ನೇತೃತ್ವದ ಬಿಜೆಪಿ ಸರಕಾರ ಜಾಗತಿಕವಾಗಿ ಇಕ್ಕಟ್ಟಿಗೆ ಸಿಲುಕಿದೆ.ಅಂತಾರಾಷ್ಟ್ರೀಯ ಒತ್ತಡಕ್ಕೆ ಮಣಿದು ತೀರ್ಮಾನ ಬದಲಿಸಿದೆ.

ನಾಗರೀಕ ಸಮಾಜದಲ್ಲಿ ಇಂಥ ದುಡುಕಿನ ತೀರ್ಮಾನಗಳಿಂದ ಉಂಟಾಗುವ ಅಂತಾರಾಷ್ಟ್ರೀಯ ಪರಿಣಾಮಗಳ ಅರಿವಿಲ್ಲದ, ಆಡಳಿತದ ಅನುಭವವಿಲ್ಲದ ಸರ್ಕಾರದ ಈ ಕ್ರಮದಿಂದ ಜಾಗತಿಕ ವಾಗಿ ಭಾರತದ ಹೆಸರಿಗೆ ಕಲಂಕ ಹಚ್ಚಿದಂತಾಗಿದೆ.

ಸಂವಿಧಾನ ವಿರೋಧಿಯಾದ ಕೋಮುವಾದಿ ಕಾರ್ಯಸೂಚಿಯನ್ನು ಜಾರಿಗೆ ತರಲು ಹೋಗಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ಮತ್ತೊಮ್ಮೆ ಇಕ್ಕಟ್ಟಿಗೆ ಸಿಲುಕಿದೆ.ಅಂತಾರಾಷ್ಟ್ರೀಯ ಒತ್ತಡಕ್ಕೆ ಮಣಿದು ಕೊಲ್ಕತ್ತಾದ ಮದರ್ ತೆರೆಸಾ ಅವರು ಸ್ಥಾಪಿಸಿದ ಮಿಷನರಿಸ್ ಆಫ್ ಚಾರಿಟಿಸಿ ಸಂಸ್ಥೆಗೆ ವಿದೇಶಿ ದೇಣಿಗೆ ಸಂಬಂಧ ನಿರ್ಬಂಧವನ್ನು ವಾಪಸು ಪಡೆದಿದೆ. ಇದು ತನ್ನಿಂದ ತಾನೇ ಕೈಗೊಂಡ ತೀರ್ಮಾನವಲ್ಲ.ಈ ಕುರಿತು ಬ್ರಿಟನ್ ಸಂಸತ್ತಿನಲ್ಲಿ ಪ್ರಸ್ತಾಪವಾಗಿ ತೀವ್ರ ಆಕ್ಷೇಪ ವ್ಯಕ್ತವಾದ ನಂತರ ಹಾಗೂ ಇತರ ದೇಶಗಳು ಒತ್ತಡಕ್ಕೆ ಮಣಿದ ಸರಕಾರ ಈ ತೀರ್ಮಾನ ದಿಂದ ಹಿಂದೆ ಸರಿದಿದೆ.

ಮದರ ತೆರೆಸಾ ಅವರು ಸ್ಥಾಪಿಸಿದ " ಮಿಷನರೀಸ್ ಆಫ್ ಚಾರಿಟಿ ಸೇರಿದಂತೆ ಕೆಲ ಸಂಸ್ಥೆಗಳು ಸಮಾಜದ ದಿಕ್ಕು ದೆಸೆಯಿಲ್ಲದ ನಿರ್ಲಕ್ಷಿಸಿತ ಜನ ವರ್ಗಗಳ ನಡುವೆ ಅತ್ಯಂತ ಪ್ರಾಮಾಣಿಕ ವಾಗಿ ಸೇವೆ ಸಲ್ಲಿಸುತ್ತಿವೆ.ಮದರ್ ತೆರೆಸಾ ಅವರ ಸಾವಿನ ನಂತರವೂ ಕೂಡ ಅವರು ಸ್ಥಾಪಿಸಿದ " ಮಿಷನರೀಸ್ ಆಫ್ ಚಾರಿಟಿ "ಸಂಸ್ಥೆ ಕೊಲ್ಕತ್ತಾ ಮಾತ್ರವಲ್ಲ ಭಾರತದ ಅನೇಕ ಕಡೆ ತಬ್ಬಲಿ ಮಕ್ಕಳಿಗೆ ಒಂದು ನೆಲೆ ಕಲ್ಪಿಸಲು ಹಾಗೂ ಕಡು ಬಡವರು ಮತ್ತು ನಿರ್ಗತಿಕರಿಗೆ,ವಯೋ ವೃದ್ಧರಿಗೆ ಸಲ್ಲಿಸುತ್ತ ಬಂದ ಸೇವೆಯನ್ನು ಭಾರತ ಮಾತ್ರವಲ್ಲದೆ ಇಡೀ ವಿಶ್ವವೇ ಕೊಂಡಾಡುತ್ತಿದೆ.ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿ ಯಾಗಿದ್ದ ಕಮ್ಯುನಿಸ್ಟ್ ನಾಯಕ ಜ್ಯೋತಿ ಬಸು ಅವರು ಮಾತ್ರವಲ್ಲ ಹಿಂದಿನ ಪ್ರಧಾನಿಗಳಾದ ಇಂದಿರಾ ಗಾಂಧಿ, ಅಟಲ್ ಬಿಹಾರಿ ವಾಜಪೇಯಿ ಅವರು ಕೂಡ ಮದರ್ ತೆರೆಸಾ ಅವರ ಸೇವೆಯ ಬಗ್ಗೆ ವಿಶೇಷ ಗೌರವಾದರ ಹೊಂದಿದ್ದರು.

ಕೊಲ್ಕತ್ತಾ ದಲ್ಲಿ ಮದರ್ ತೆರೆಸಾ ಅವರು ಸ್ಥಾಪಿಸಿದ " ಮಿಷನರೀಸ್ ಆಫ್ ಚಾರಿಟಿ" ಯ ನೋಂದಣಿ ಯನ್ನು ನವೀಕರಿಸಲು ಮೋದಿ ಸರ್ಕಾರ ಇತ್ತೀಚೆಗೆ ನಿರಾಕರಿಸಿತು.ಹೀಗೆ ನಿರಾಕರಿಸಲ್ಪಟ್ಟ ಸಂಸ್ಥೆಗಳಲ್ಲಿ ಲೆಪ್ರಸಿ




ಮಿಷನ್,ಭಾರತೀಯ ವೈದ್ಯಕೀಯ ಸಂಘ( ಐ.ಎಂ.ಎ) ಆಕ್ಸ್ ಫಾಮ್ ಇಂಡಿಯಾ,ಮುಂತಾದ ಸಂಸ್ಥೆಗಳು ಸೇರಿವೆ.

ಸಾಮಾನ್ಯವಾಗಿ ಎನ್.ಜಿ.ಓ ಗಳೆಂದು ಕರೆಯಲ್ಪಡುವ ಈ ಸ್ವಯಂ ಸೇವಾ ಸಂಸ್ಥೆಗಳು ಸಮಾಜದಿಂದ ಮತ್ತು ಸರಕಾರದಿಂದ ನಿರ್ಲಕ್ಷಿಸಲ್ಪಟ್ಟ ಜನ ವರ್ಗ ಗಳ ನಡುವೆ ಕೆಲಸ ಮಾಡುತ್ತವೆ.ಅನಾಥ ಮಕ್ಕಳ ಪುನರ್ವಸತಿ, ಲೈಂಗಿಕ ಕಾರ್ಯಕರ್ತೆಯರ ಬದುಕಿಗೆ ಒಂದು ಸುರಕ್ಷಿತ ನೆಲೆ ಕಲ್ಪಿಸುವದು,ಮಾನವ ಹಕ್ಕು ಗಳ ಪರವಾಗಿ ಹೋರಾಡುವದು,ಜಲ ಸಂರಕ್ಷಣೆ,ಪರಿಸರ ರಕ್ಷಣೆ,ತಳ ಸಮುದಾಯಗಳ ಏಳಿಗೆ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಎನ್.ಜಿ.ಓಗಳು ಸೇವೆ ಸಲ್ಲಿಸುತ್ತ ಬಂದಿವೆ.ಇದಕ್ಕಾಗಿ ವಿದೇಶದಿಂದ ಹರಿದು ಬರುವ ನಿಧಿಯನ್ನು ಪಡೆಯುತ್ತವೆ.ಅನೇಕ ಬಾರಿ ಸರಕಾರವೂ ಇವರ ನೆರವನ್ನು ಪಡೆಯುತ್ತದೆ.ವಿದೇಶಗಳಿಂದ ಹಣ ಪಡೆಯುವ ಸಂಸ್ಥೆಗಳು ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯ (ಎಫ್.ಸಿ.ಆರ್.ಎ) ಅಡಿಯಲ್ಲಿ ನೋಂದಣಿ ಮಾಡಿಕೊಳ್ಳುವದು ಕಡ್ಡಾಯವಾಗಿದೆ.

:ನರೇಂದ್ರ ಮೋದಿಯವರ ನೇತೃತ್ವದ ಭಾರತೀಯ ಜನತಾ ಪಕ್ಷ ಒಕ್ಕೂಟ ಸರ್ಕಾರದ ಸೂತ್ರ ಹಿಡಿದ ನಂತರ ಭಾರತದ ನಾನಾ ಕಡೆ ತಮ್ಮದೇ ಆದ ರೀತಿಯಲ್ಲಿ ನೊಂದ ಜೀವಿಗಳ ಏಳಿಗೆಗಾಗಿ ಸೇವೆ ಸಲ್ಲಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಇನ್ನಿಲ್ಲದ ಕಿರುಕುಳ ಆರಂಭವಾಗಿದೆ.ಅದರಲ್ಲೂ ಅಸಹಾಯಕ ಮಕ್ಕಳ ಕಣ್ಣೀರು ಒರೆಸುವ ಮದರ ತೆರೇಸಾ ಅವರು ಕಟ್ಟಿದ ಸಂಸ್ಥೆಯೂ ಇವರ ಕೆಂಗಣ್ಣಿಗೆ ಗುರಿಯಾಗಿದೆ.

ಇಂಥ ಮದರ್ ತರೆಸಾ ಮತ್ತು ಇತರ ಸ್ವಯಂ ಸೇವಾ ಸಂಸ್ಥೆಗಳ ಮೇಲೆ ಮೋದಿ ನೇತೃತ್ವದ ಬಿಜೆಪಿ ಸರಕಾರ ವಕ್ರ ದೃಷ್ಟಿ ಬೀರಿರುವದೇಕೆ? ಇದಕ್ಕೆ ಒಂದು ಕಾರಣ ಆರ್.ಎಸ್.ಎಸ್ ಮದರ್ ತೆರೆಸಾ ಮತ್ತು ಇತರ ಎನ್.ಜಿ ಓ ಗಳನ್ನು ಮೊದಲಿನಿಂದಲೂ ವಿರೋಧಿಸುತ್ತ ಬಂದಿದೆ.ಸೇವೆಯ ಹೆಸರಿನಲ್ಲಿ ಮತಾಂತರ ಮಾಡುತ್ತಾರೆ ಎಂಬ ಅತ್ಯಂತ ವ್ಯವಸ್ಥಿತ ಅಪಪ್ರಚಾರವನ್ನು ಕೋಮುವಾದಿ ಶಕ್ತಿಗಳು ಮಾಡುತ್ತ ಬಂದಿವೆ.ಎರಡನೆಯದಾಗಿ 2002 ರಲ್ಲಿ ಗುಜರಾತಿನಲ್ಲಿ ಅಲ್ಪಸಂಖ್ಯಾತರ ಹತ್ಯಾಕಾಂಡ ನಡೆದಾಗ ಸಾವಿರಾರು ಜನ ಬೀದಿಗೆ ಬಿದ್ದರು .ಹೀಗೆ ಬೀದಿಗೆ ಬಿದ್ದವರ ನೆರವಿಗೆ ಬಂದವರು ಸ್ವಯಂ ಸೇವಾ ಸಂಸ್ಥೆಗಳಲ್ಲಿ ಕೆಲಸ ಮಾಡುವ ಕಾರ್ಯಕರ್ತರು. ಹತ್ಯಾಕಾಂಡದ ಪ್ರಕರಣಗಳ ತನಿಖೆಗಾಗಿ ಆಗ್ರಹಿಸಿ ಕೋರ್ಟ್ ಮೆಟ್ಟಿಲೇರಿದವರು ಹೆಸರಾಂತ ನ್ಯಾಯವಾದಿ ಟಿಸ್ಟಾ ಸೆಟಲವಾಡ. (ಇವರದು ಕೂಡ ಒಂದು ಎನ್.ಜಿ.ಓ ಇದೆ) ಹೀಗಾಗಿ ಬಿಜೆಪಿ ಗೆ ವಿಶೇಷವಾಗಿ ಮೋದಿ ಮತ್ತು ಅಮಿತಶಾ ಅವರಿಗೆ ಎನ್.ಜಿ.ಓಗಳ ಮೇಲೆ ಒಳಗೊಳಗೆ ತುಂಬಾ ಸಿಟ್ಟಿದೆ.ನಾಗಪುರದ ಗುರುಗಳು ಇದನ್ನೇ ಕಾಯುತ್ತಿದ್ದರು .ಇವರೆಲ್ಲ ಸೇರಿ ತಮಗೆ ಅಡ್ಡಿಯಾದ ಸ್ವಯಂ ಸೇವಾ ಸಂಸ್ಥೆಗಳ ನೆರವಿನ ಮೂಲವನ್ನೇ ಸ್ಥಗಿತಗೊಳಿಸಲು ಈ ಅಸ್ತ್ರ ಪ್ರಯೋಗಿಸಿದ್ದಾರೆ ಎಂದು ಹೇಳಿದರೆ ಅತಿಶಯೋಕ್ತಿಯಲ್ಲ. ಬಹಳ ಚಿಕ್ಕ ವಯಸ್ಸಿನಲ್ಲಿ ಕ್ರೈಸ್ತ ಧರ್ಮದ ಗುರುಗಳ ಅಣತಿಯಂತೆ ಸೇವೆ ಸಲ್ಲಿಸಲು ವಿದೇಶದಿಂದ ಕೊಲ್ಕತ್ತಾಗೆ ಬಂದ ಮದರ್ ತೆರೆಸಾ ಆರಂಭದಲ್ಲಿ ಕುಷ್ಠರೋಗಿಗಳ ಸೇವೆಯಲ್ಲಿ ತೊಡಗಿದರು.ಆಗ ಯಾವುದೇ ವ್ಯಕ್ತಿಗೆ ಕುಷ್ಠರೋಗ ಬಂದರೆ ಯಾವುದೇ ಚಿಕಿತ್ಸೆ ನೀಡದೇ ಊರಾಚೆ ಬಿಸಾಕಿ ಬರುತ್ತಿದ್ದರು. ಅಲ್ಲಿ ಅವರು ನರಳಿ ನರಳಿ ಸಾಯುತ್ತಿದ್ದರು.ಇದನ್ನು ಗಮನಿಸಿದ ಮದರ್ ತೆರೆಸಾ ಊರಾಚೆ ಬಿಸಾಕಲ್ಪಟ್ಟವರನ್ನು ಹುಡುಕಿ ಕರೆ ತಂದು ಚಿಕಿತ್ಸೆ ನೀಡಿ ಗುಣಪಡಿಸುತ್ತಿದ್ದರು.ಮದರ್ ತೆರೆಸಾ ಅವರ ಈ ಸೇವೆಯನ್ನು ಕಂಡರೆ ಆಗದ ಸಮಾಜದ ಸಂಪ್ರದಾಯವಾದಿ ಶಕ್ತಿಗಳು ಮದರ್ ತೆರೆಸಾ ಅವರ ಮೇಲೆ ಕಲ್ಲುಗಳನ್ನು ಬಿಸಾಕಿ,ಸಗಣಿ ಎಸೆದು ಸೇವೆಗೆ ಅಡ್ಡಿಪಡಿಸುತ್ತಿದ್ದರು.ಆದರ ನಿರಾಶರಾಗದ ಮದರ್ ತರೆಸಾ ತಮ್ಮ ಸೇವೆಯನ್ನು ಮುಂದುವರಿಸಿ ಬಹು ಎತ್ತರಕ್ಕೆ ಬೆಳೆದರು .ಲಕ್ಷಾಂತರ ಮಕ್ಕಳ, ನಿರ್ಲಕ್ಷಿಸಿತರ ಬದುಕಿಗೆ ಬೆಳಕಾದರು.



ಈಗ ಉಂಟಾದ ಸಮಸ್ಯೆಯೇನಂದರೆ ಒಕ್ಕೂಟ ಸರ್ಕಾರ ಕೆಲವು ಸ್ವಯಂ ಸೇವಾ ಸಂಸ್ಥೆಗಳಿಗೆ ನೋಂದಣಿ ನಿರಾಕರಿಸಿದೆ.ಇನ್ನು ಕೆಲ ಸಂಸ್ಥೆಗಳಿಗೆ



ಸನತ್‌ಕುಮಾರ ಬೆಳಗಲಿ
ಹಿರಿಯ ಪತ್ರಕರ್ತರು

ನೋಂದಣಿ ನವೀಕರಿಸಲು ಒಪ್ಪಿಗೆ ನೀಡಿಲ್ಲ. ನೋಂದಣಿ ನಿರಾಕರಿಸಿದ ಪರಿಣಾಮವಾಗಿ ಈ ಸಂಸ್ಥೆಗಳಿಗೆ ವಿದೇಶಗಳಿಂದ ನೆರವು ಹರಿದು ಬರುವದು ಸ್ಥಗಿತಗೊಂಡಿದೆ.ಸುಮಾರು 22 ಸಾವಿರಕ್ಕಿಂತಲೂ ಹೆಚ್ಚು ನೋಂದಣಿ ಆಗಿರುವ ಸ್ವಯಂ ಸೇವಾ ಸಂಸ್ಥೆಗಳು ಭಾರತದಲ್ಲಿವೆ.ಕಳೆದ 2021 ರಲ್ಲಿ ಕೆಲವು ಸಂಸ್ಥೆಗಳು ನೋಂದಣಿ ನವೀಕರಣಕ್ಕೆ ಅರ್ಜಿ ಸಲ್ಲಿಸಿರಲಿಲ್ಲ. ಇನ್ನು 179 ಸ್ವಯಂ ಸೇವಾ ಸಂಸ್ಥೆಗಳ ನೋಂದಣಿ ನವೀಕರಣ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಆರ್ .ಎಸ.ಎಸ್ ವಿದೇಶದಿಂದ ಪಡೆಯುವ ಕೋಟ್ಯಾಂತರ ರೂಪಾಯಿಗಳ ಮೇಲೆ ಮತ್ತು ಆ ಹಣವನ್ನು ಕೋಮು ದ್ವೇಷದ ರಾಜಕೀಯಕ್ಕೆ ಬಳಸಿಕೊಳ್ಳುವದರ ಮೇಲೆ ಯಾವುದೇ ನಿರ್ಬಂಧ ವಿಧಿಸದ ಒಕ್ಕೂಟ ಸರ್ಕಾರ ನಿರ್ಗತಿಕರ ಸೇವೆಯಲ್ಲಿ ತೊಡಗಿರುವ ಸ್ವಯಂ ಸೇವಾ ಸಂಸ್ಥೆಗಳ ಕತ್ತು ಹಿಸುಕಲು ಹೊರಟಿದೆ.

ರಾಷ್ಟ್ರೀಯ ಸ್ವಯಂ ಸೇವಕ ಸಂಘ( ಆರ್. ಎಸ್.ಎಸ್) ಕೂಡ ಜಗತ್ತಿನ ಅತ್ಯಂತ ದೊಡ್ಡ ಸ್ವಯಂ ಸೇವಕ ಸಂಸ್ಥೆ ಎಂದು ಹೇಳಿಕೊಳ್ಳುತ್ತ ಬಂದಿದೆ.ಅದು ಕೂಡ ವಿದೇಶದಿಂದ ಕೋಟ್ಯಾಂತರ ರೂಪಾಯಿ ನೆರವನ್ನು ಪಡೆಯುತ್ತಿದೆ.1989 ರಲ್ಲಿ " ಭಾರತ ಅಭಿವೃದ್ಧಿ ಮತ್ತು ಪರಿಹಾರ ನಿಧಿ( ಐ.ಡಿ.ಆರ್.ಎಫ್) ಎಂಬ ಸಂಸ್ಥೆಯನ್ನು ಅಮೆರಿಕದಲ್ಲಿ ನೋಂದಣಿ ಮಾಡಿಸಲಾಗಿದೆ.2000 ನೇ ಇಸವಿಯಲ್ಲಿ ಈ ಸಂಸ್ಥೆ ಸಂಗ್ರಹಿಸಿದ ಮೊತ್ತ 3.8 ಮಿಲಿಯನ್ ಡಾಲರ್.ಈ ಸಂಸ್ಥೆಗೂ ಸಂಘ ಪರಿವಾರಕ್ಕೂ ಇರುವ ಸಂಬಂಧವನ್ನು " ಔಟ್ ಲುಕ್" (22_7_2002) ವಾರ ಪತ್ರಿಕೆ ಬಹಿರಂಗ ಪಡಿಸಿತು. ಇದನ್ನು ಐಡಿಆರ್ ಎಫ್ ನಿರಾಕರಿಸಿದರೂ ಇದಕ್ಕೂ ಸಂಘ ಪರಿವಾರಕ್ಕೂ ಇರುವ ಸಂಬಂಧವನ್ನು ದಾಖಲೆಗಳು ಖಚಿತಪಡಿಸಿವೆ.

# ಮೋದಿ ಮಣಿಸಲು ವಿರೋಧಿ ಪಾಳಯದ ಅಜೆಂಡಾ ಏನು?

● 5ನೇ ಪುಟದಿಂದ...

ಅಂದರೆ ಈಗ 403 ಕ್ಷೇತ್ರಕ್ಕೆ ನಡೆಯಲಿರುವ ಚುನಾವಣೆ ಮುಂದೆ 80 ಕ್ಷೇತ್ರದಲ್ಲಿ ಲೋಕಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ರಾಮಮಂದಿರದ ಆಚೆಗೆ ಜನ ಯೋಚಿಸದಂತೆ ಮಾಡಲು ಬಿಜೆಪಿ ತಯಾರಿ ನಡೆಸಿದೆ. ಸಿಎಂ ಆಗುವ ಪೈಪೋಟಿಗೆ ಬಿದ್ದಿರುವ ಪ್ರಿಯಾಂಕಾ, ಅಖಿಲೇಶ್ ಯಾದವ್ ಹಾಗೂ ಮಾಯಾವತಿ ಪರಸ್ಪರ ಗುದಮುರಗಿಯಲ್ಲಿ ತಮಗೆ ಅರಿವಿದ್ದೂ ಬಿಜೆಪಿ ಹಿತ ಕಾಯುವ ಕೆಲಸ ಮಾಡುತ್ತಿದ್ದಾರೆ. ಈ ಮೂವರ ಓಟು ಬ್ಯಾಂಕುಗಳಿಗೂ ಕೈ ಹಾಕುವ ಅಸಾದುದ್ದೀನ್ ಓವೈಸಿ ಹೈದರಾಬಾದಿನಲ್ಲಿ ತಣ್ಣಗೆ ಕುಳಿತು ನಗೆ ಬೀರುತ್ತಿದ್ದಾರೆ. ಓವೈಸಿಯದು ಬಿಜೆಪಿಯ ಬಿ ಟೀಂ ಎಂದು ಆರೋಪಿಸುವುದರಾಚೆಗೆ ಮೂರೂ ಪಕ್ಷಗಳಿಗೆ ಬೇರೆ ಯೋಚನೆ ಹೊಳೆಯುತ್ತಿಲ್ಲ ಎನ್ನುವುದು ವಿಚಿತ್ರ.

ಏತನ್ಮಧ್ಯೆ ಹೊಸತೇ ಆದೊಂದು ಬೆಳವಣಿಗೆ ಹೈದರಾಬಾದಿನಲ್ಲಿ ನಡೆದಿದೆ. ಕೇರಳದ ಕಮ್ಯೂನಿಸ್ಟ್ ಸರ್ಕಾರದ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ ಯಚೂರಿ, ಸಿಪಿಐ ನಾಯಕ ಡಾ.ರಾಜಾ ಮುಂತಾದ ಎಡ ಪಂಥೀಯ ಮುಖಂಡರನ್ನು ತಮ್ಮ ಅಧಿಕೃತ ನಿವಾಸಕ್ಕೆ ಬರಮಾಡಿಕೊಂಡು ಸತ್ಕರಿಸಿರುವ ತೆಲಂಗಾಣಾ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್, ಮೋದಿ ವಿರೋಧಿ ಪಾಳಯದ ಕಿವಿಯಲ್ಲಿ ಹೊಸ ಹುಳುವೊಂದನ್ನು ಬಿಟ್ಟಿದ್ದಾರೆ. ಬಿಜೆಪಿ ವಿರುದ್ಧ ಸಂಘಟಿತ ಹೋರಾಟಕ್ಕೆ ಸಮಾನ ಮನಸ್ಕ ರಾಜಕೀಯ ಪಕ್ಷಗಳು ಒಂದಾಗುವುದಕ್ಕೆ ಸೂಕ್ತ ವೇದಿಕೆಯೊಂದರ ಹುಡುಕಾಟದ ಅಗತ್ಯವನ್ನು ರಾವ್ ಪ್ರತಿಪಾದಿಸಿದ್ದಾರೆ. ಸಮಾನ ಮನಸ್ಕ ಪಕ್ಷಗಳು ಚುನಾವಣಾ ಪೂರ್ವ ಹೊಂದಾಣಿಕೆ ಮಾಡಿಕೊಳ್ಳಬೇಕೇ ಅಥವಾ ಫಲಿತಾಂಶ ಬಂದ ತರುವಾಯದಲ್ಲೇ ಎನ್ನುವುದನ್ನು ರಾವ್ ನಡೆಸಿದ ಸಭೆ ಹೇಳಿಲ್ಲ. ಗಮನಿಸಬೇಕಾದ ಅಂಶವೆಂದರೆ ಕಾಂಗ್ರೆಸ್ ನಾಯಕತ್ವಕ್ಕೆ ಕರೆಯ ಹೋಗಿಲ್ಲ ಎನ್ನುವುದು. ತೆಲಂಗಾಣಾ ಪ್ರತ್ಯೇಕ ರಾಜ್ಯದ ತಮ್ಮ ಬೇಡಿಕೆ ಈಡೇರಿದ ಬಳಿಕ ಕಾಂಗ್ರೆಸ್ ಸಂಬಂಧ ಕಡಿದುಕೊಂಡ ರಾವ್ ತಮಗೆ ದ್ರೋಹ ಬಗೆದರು ಎನ್ನುವುದು ಸೋನಿಯಾರಲ್ಲಿ ಸಿಟ್ಟು ಹೆಪ್ಪುಗಟ್ಟುವಂತೆ ಮಾಡಿದೆ. ದ್ರೋಹವನ್ನು ಇನ್ನೂ ಮರೆಯದ ಸೋನಿಯಾ ಆಹ್ವಾನ ಬಂದಿದ್ದರೂ ಒಪ್ಪಿಕೊಳ್ಳುತ್ತಿರಲಿಲ್ಲ ಎನ್ನುವುದು ಸರ್ವವೇದ್ಯ. ಸೀತಾರಾಂ ಯಚೂರಿ ಪ್ರಕಾರ ಚುನಾವಣೋತ್ತರ ಮೈತ್ರಿ ಹೆಚ್ಚು ಸೂಕ್ತ. ದಶಕಗಳಿಂದ ತೃತೀಯ ರಂಗ ಎನ್ನುವುದು ಆಗಾಗ ಪ್ರಸ್ತಾಪವಾಗುತ್ತಿರುವ ರಾಜಕೀಯ ವೇದಿಕೆ. ಲೋಕಸಭಾ ಚುನಾವಣೆ ಹತ್ತಿರ ಬರುತ್ತಿದ್ದಂತೆ ತೃತೀಯ ರಂಗದ ಪ್ರಸ್ತಾಪ ಮುಂಚೂಣಿಗೆ ಬರುತ್ತದೆ.



ಯಾರು ಪ್ರಧಾನಿಯಾಗಬೇಕು ಎಂಬ ವಿಚಾರವಾಗಿ ಆ ವೇದಿಕೆಯಲ್ಲಿ ನಡೆಯುವಷ್ಟು ಚರ್ಚೆ ಜಗಳ ಸಮೀಪದ ಶತ್ರು ದಮನವನ್ನು ಹೇಗೆ ಮಾಡಬೇಕೆಂಬ ಬಗ್ಗೆ ನಡೆದಿದ್ದು ಕಡಿಮೆ. ಬಹುಷಃ ಇದೇ ಕಾರಣವಾಗಿಯೋ ಏನೋ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ತೃತೀಯ ರಂಗದ ವಿಚಾರದಲ್ಲಿ ನಿರಾಶೆಯನ್ನು ಹೊರ ಹಾಕಿದ್ದಾರೆ. ಅವರ ಅಭಿಮತದಂತೆ ತೃತೀಯ ರಂಗವೆನ್ನುವುದು ಅರ್ಥಹೀನ ಕಸರತ್ತು. ಗೋವಾದಲ್ಲಿ ಸರ್ಕಾರ ರಚಿಸಿಯೇ ಸಿದ್ಧ ಎಂದು ಹೊರಟಿರುವ ಎರಡು ಪಕ್ಷಗಳೆಂದರೆ ಅರವಿಂದ ಕೇಜ್ರೀವಾಲಾರ ಆಮ್ ಆದ್ಮಿ ಪಾರ್ಟಿ ಹಾಗೂ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ಸು. 2017ರ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಪಡೆದಿತ್ತಾದರೂ ಸೂಕ್ತ ಸಮಯದಲ್ಲಿ ಸೂಕ್ತ ತೀರ್ಮಾನ ತೆಗೆದುಕೊಳ್ಳದೆ ಮಸಲತ್ತು ನಡೆಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿಗ್ವಿಜಯ ಸಿಂಗ್ ಕಾರಣವಾಗಿ ಸರ್ಕಾರ ಬಿಜೆಪಿ ಕೈಗೆ ಜಾರಿದ್ದು ಐದು ವರ್ಷದ ಹಿಂದಿನ ಕಥೆ. ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷ, ಕಾಂಗ್ರೆಸ್ ಮತ್ತು ಬಿಜೆಪಿ ಜೊತೆ ಈ ಚುನಾವಣೆಯಲ್ಲಿ ಟಿಎಂಸಿ ಮತ್ತು ಆಪ್ ಮತವೆಂಬ ಊಟದ ತಟ್ಟೆಗೆ ಕೈ ಹಾಕಿವೆ. ಟಿಎಂಸಿ ಆ ರಾಜ್ಯದಲ್ಲಿ ಎಷ್ಟರಮಟ್ಟಿಗಿನ



ಸಾಧನೆ ಮಾಡಲಿದೆಯೋ ಗೊತ್ತಿಲ್ಲ. ಆದರೆ ಹಿಂದಿ ಪ್ರದೇಶದಲ್ಲಿ ಬೇರೆ ಬೇರೆ ಕಾರಣಕ್ಕಾಗಿ ಕಾಂಗ್ರೆಸ್ಸಿನ ಬೆವರನ್ನಿಳಿಸುವ ಕೆಲಸವನ್ನು ಮಮತಾ ಕೈಗೆತ್ತಿಕೊಂಡಿದ್ದಾರೆ. ಒಂದು ಕಾಲದಲ್ಲಿ ಕಾಂಗ್ರೆಸ್‌ನ ಬೆಂಕಿ ಉಗುಳುವ ನಾಯಕಿ ಎನಿಸಿದ್ದ ಮಮತಾ ಈ ಹೊತ್ತು ಮಾತ್ರ ಪಕ್ಷಕ್ಕೆ ನುಂಗಲಾಗದ ಬಿಸಿಯುಂಡೆಯಾಗಿದ್ದಾರೆ. ಪಶ್ಚಿಮ ಬಂಗಾಳಾದಲ್ಲಿ ಕಾಂಗ್ರೆಸ್ಸನ್ನು ಲೆಟರ್ ಹೆಡ್ ಪಕ್ಷದ ಸ್ಥಾನಕ್ಕೆ ತಳ್ಳಿರುವ ಮಮತಾ, ರಾಹುಲ್ ನಾಯಕತ್ವವನ್ನು ಒಪ್ಪಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದಿದ್ದಾರೆ. ಹತ್ತು ವರ್ಷ ಕೇಂದ್ರ ಸರ್ಕಾರದ ಆಧಾರ ಸ್ಥಂಭವಾಗಿದ್ದ ಯುಪಿಎ ಮಮತಾ ಪ್ರಕಾರ ಈಗ ತನ್ನ ಪ್ರಸ್ತುತೆಯನ್ನು ಕಳೆದುಕೊಂಡಿದೆ. "ಯುಪಿಎ ಎಲ್ಲಿದೆ" ಎಂಬ ಅವರ ಪಶ್ನೆ ಒಡ್ಡಿರುವ ಆಘಾತವನ್ನು ತಡೆದುಕೊಳ್ಳುವುದಕ್ಕೆ ಕಾಂಗ್ರೆಸ್‌ಗೆ ಇನ್ನೂ ಸಾಧ್ಯವಾಗಿಲ್ಲ ಎನ್ನುವುದು ಮಮತಾ ಹಚ್ಚಿರುವ ಬೆಂಕಿ ಕಾವನ್ನು ವಿವರಿಸುತ್ತದೆ. ತಾನು ನಡೆದುದೇ ದಾರಿ ಎಂಬ ಭಾವನೆಯಕಲ್ಲಿರುವ ಮೋದಿ ಪಡೆ ಮತ್ತೆ ಅಧಿಕಾರ ಸೂತ್ರ ಹಿಡಿಯುವುದಕ್ಕೆ ಬೇಕಾದುದೆಲ್ಲವನ್ನೂ ಮಾಡುತ್ತದೆ. ಅದರಲ್ಲಿ ಮುಖ್ಯ ವಾದುದೆಂದರೆ ವಿರೋಧ ಪಕ್ಷಗಳು ಒಂದೇ ಸೂರಿನಡಿ ಬಾರದಂತೆ ನೋಡಿಕೊಳ್ಳುವುದು! ಖೆಡ್ಡಾಕ್ಕೆ ತಾವು ಬೀಳ ಬೇಕೇ ಬೀಳಬಾರದೆ ಎನ್ನುವುದು ವಿರೋಧ ಪಕ್ಷಗಳು ತೆಗೆದುಕೊಳ್ಳಬೇಕಾಗಿರುವ ತಕ್ಷಣದ ನಿರ್ಣಯವಾಗಬೇಕಿದೆ.

# ಪಾದಯಾತ್ರೆ ನಾಯಕರಿಗೆ ಖುಷಿ, ಆದರೆ ಜನರಿಗೆ ಸಂಕಟ..!

●ತುರುವನೂರು ಮಂಜುನಾಥ



ಸದ್ಯದ ಪರಿಸ್ಥಿತಿಯಲ್ಲಿ ಯಾಕೆ ಬೇಕಿತ್ತು ಹೇಳಿ.. ಕಳೆದ ಎರಡು ತಿಂಗಳಿನಿಂದ ಮೇಕೆದಾಟು ಯೋಜನೆಗೆ ಆಗ್ರಹಿಸಿ ಪಾದಯಾತ್ರೆಗಾಗಿ ಜನರನ್ನು ಕಾರ್ಯಕರ್ತರನ್ನು ಸಂಘಟಿಸಿದ್ದ ಕಾರಣಕ್ಕಾಗಿಯೇ ಈ ಪಾದಾಯಾತ್ರೆ ಆರಂಭವಾಗಿದೆಯೇ ಹೊರೆತು ಈಗ ನಿಜವಾಗಿಯೂ ಇದು ಜನರ ಅನುಕೂಲಕ್ಕಾಗಿ ಅಲ್ಲ ಎನ್ನುವುದು ಎಲ್ಲರಿಗೂ ಮನದಟ್ಟಾಗಿದೆ.

ಯಾವಾಗ ಯಾವ ಸಂದರ್ಭದಲ್ಲಿ ಪಾದಾಯಾತ್ರೆಗಳನ್ನು ಮಾಡಬೇಕೋ ಆ ಸಮಯದಲ್ಲಿ ಮಾಡಿದರೆ ಅದು ನಾಯಕತ್ವದ ಗುಣ ಮುಂದಿನ ಸಿಎಂ ಆಗುವ ಗುಣಗಳಿಗೆ ಕನ್ನಡಿ ಹಿಡಿದಂತೆ, ಆದರೆ ಜನರಿಗೆ ಕಿರಿಕಿರಿ ಮಾಡಿ ನಾನು ಸಿಎಂ ಆಗಲು ಇದನ್ನು ಮಾಡುತ್ತಿದ್ದೇನೆ ಎನ್ನುವುದು ಡಂಗೂರ ಹೊಡೆದುಕೊಂಡು ಕೊರೊನಾ ನಿಯಮಗಳನ್ನು ಗಾಳಿಗೆ ತೂರಿ ಗೂಂಡಾಗಳಂತೆ ವರ್ತನೆಗಳನ್ನು ಮಾಡುತ್ತಿದ್ದರೆ ಜನರು ಸಹಿಸಿಯಾರ..?

ಈ ಪಾದಯಾತ್ರೆ ನಿಜಕ್ಕೂ ಜನಪರ ಕಾಳಜಿಗಲ್ಲ ಎನ್ನುವುದನ್ನು ಬೇರೆ ಹೇಳಬೇಕಿಲ್ಲ ಯಾಕೆಂದರೆ ಕೊಕೊನಾ ಕೇಕೆ ಹಾಕುತ್ತಿದೆ ಕರ್ಫ್ಯೂ ಜಾರಿಯಾಗಿದೆ ಇಂತ ಹೊತ್ತಿನಲ್ಲಿ ನಾವು ಮಾಡಿದ್ದೇ ಸರಿ ಎನ್ನುವ ವರ್ತನೆಗಳನ್ನು ಜನರು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ ಮುಂದಿನ ಬಾರಿ ನೀವು ಅಧಿಕಾರಕ್ಕೆ ಬರಬಹುದು ಯಾಕೆಂದರೆ ವಾತಾವರಣ ಹಾಗೆ ಇದೆ ಅ ವಾತವರಣಕ್ಕೆ ಒಬ್ಬ ನಾಯಕತ್ವ ಕಾರಣ ಎನ್ನುವುದನ್ನು ಬಿಂಬಿಸಿಕೊಳ್ಳಲು ಮತ್ತು ಆ ಭಾಗದ ಜನರನ್ನು ಒಗ್ಗೂಡಿಸಿ ಪಕ್ಷ ಬಲಪಡಿಸಲು ಗೆಲುವಿಗೆ ರೂವಾರಿಯಾಗಿದ್ದು ಯಾರು ಎನ್ನುವ ಪ್ರಶ್ನೆ ಬಂದಾಗ ಅದು ಈ ವ್ಯಕ್ತಿ(ಡಿ.ಕೆ.ಶಿವಕುಮಾರ್) ಎನ್ನುವ ಹೆಸರು ಬರಬೇಕು ಆಗ ಯಾರೆ ವಿರೋಧಿಸಿದರು ಹೈಕಮಾಂಡ್ ಸಿಎಂ ಹೆಸರು ಸೂಚಿಸುತ್ತದೆ ಎನ್ನುವ ಅಚಲ ನಂಬಿಕೆಯೆ ಈ ಪಾದಾಯಾತ್ರೆ ಎನ್ನುವುದು ಗೊತ್ತಿದೆ . ಆದರೆ ಪರಿಸ್ಥಿತಿ ಮೀರಿ ನಡೆಯುತ್ತಿರುವ ಹೈಕಮಾಂಡ್ ಒಂದು ಕಡೆ ಇಂತ ಹೊತ್ತಿನಲ್ಲಿ ಸಭೆ ಸಮಾರಂಭಗಳು ಬೇಡ ಎಲ್ಲವೂ ವರ್ಚ್ಯೂಯಲ್ ಮೂಲಕವೆ ಮಾಡಿ ಎಂದು ಎಲ್ಲಾ ಕಡೆ ತಮಟೆ ಬಾರಿಸುತ್ತಿದೆ ಹೀಗಿದ್ದರೂ ಅದನ್ನೂ ಮೀರಿ ಈ  ಪಾದಾಯಾತ್ರೆ ಕೈಗೊಂಡಿದ್ದಿದೆಯಲ್ಲ ಅದು ಉದ್ದಟತನದ ಪರಮಾವಧಿಯೇ ಹೊರೆತು ಬೇರೇನೂ ಅಲ್ಲ .

ಅದರಲ್ಲೂ ಇಡೀ ಪಾದಯಾತ್ರೆಯಲ್ಲಿ ಯಾವ ನಾಯಕರು ಕಾಣಿಸುತ್ತಿಲ್ಲ ಡಿಕೆಶಿ ಮತ್ತು ಸಿದ್ದರಾಮಯ್ಯ ಇದು ಸಾರಿ  ಸಾರಿ ಹೇಳುತ್ತಿದೆ ಡಿಕೆಶಿ ಮಾಡಿರುವ ಸಂಘಟನೆ ಎನ್ನುವುದು. ಹಾಗಾಗಿ ನಾಯಕರು ಇದರಲ್ಲಿ ಕಾಣುತ್ತಿಲ್ಲ ಆರಂಭದ ದಿನಲ್ಲಿ ಒಂದಿಷ್ಟು ಜನ ಬಂದುಹೋಗಿದ್ದನ್ನು ಬಿಟ್ಟರೆ ಮತ್ತೆ ಯಾವ ನಾಯಕರು ಕಾಣುತ್ತಿಲ್ಲ ಕಂಡರು ಅವರು ಸಣ್ಣ ಪುಟ್ಟ ನಾಯಕರು ಅ ಪ್ರದೇಶದ ಕಾರ್ಯಕರ್ತರು ಕಾಣುತ್ತಿದ್ದಾರೆ ಅಷ್ಟೆ.

ಇಡೀ ಪಾದಯಾತ್ರೆಯನ್ನು ಗಮನಿಸಿದರೆ ನಾಯಕರಲ್ಲಿ ಸಮನ್ವಯತೆಯ ಕೊರತೆ ಎದ್ದು ಕಾಣುತ್ತಿದೆ. ಇಡೀ ಪಾದಯಾತ್ರೆಯ ತಯಾರಿಯನ್ನು ಡಿ.ಕೆ. ಶಿವಕುಮಾರ್ ಒಬ್ಬರೇ ನಿರ್ವಹಣೆ ಮಾಡಿರುವುದರಿಂದ 'ಡಿಕೆಶಿ ಕೇಂದ್ರಿತ'ವಾಗುತ್ತಿದೆ.

ಪಾದಯಾತ್ರೆ, ರಥಯಾತ್ರೆಯ ಮೂಲಕ ಅಧಿಕಾರ ಚುಕ್ಕಾಣಿ ಹಿಡಿಯುವುದು ರಾಜಕೀಯ ಪಕ್ಷಗಳ ಹೊಸ ತಂತ್ರವೇನಲ್ಲ. ಕಾಂಗ್ರೆಸ್‌ನಿಂದಲೇ ನಡೆದ ಪಾಂಚ ಜನ್ಯ ಯಾತ್ರೆ, ಗಣಿಧಣಿಗಳ ವಿರುದ್ಧದ ಬಳ್ಳಾರಿ ಪಾದಯಾತ್ರೆ, ನಮ್ಮ ನಡೆ ಕೃಷ್ಣೆಯ ಕಡೆ ಇರಬಹುದು ಅಥವಾ ಬಿಜೆಪಿಯ ಎಲ್.ಕೆ ಆಡ್ವಾಣಿ ಅವರ ರಾಮ ಜನ್ಮಭೂಮಿಯ ರಥಯಾತ್ರೆ ಇರಬಹುದು. ಈ ಎಲ್ಲವೂ ಒಂದಲ್ಲ ಒಂದು ಆ ಪಕ್ಷಕ್ಕೆ ಅಧಿಕಾರವನ್ನು ತಂದು ಕೊಡುವಲ್ಲಿ ಪ್ರಮುಖ ಪಾತ್ರವನ್ನೇ ವಹಿಸಿದ್ದವು. ಇದೇ ಹುಮ್ಮಸ್ಸಿನಲ್ಲಿ ಮುಂದಿನವರ್ಷದಲ್ಲಿ ಎದು ರಾಗಲಿರುವ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು, ಕಾಂಗ್ರೆಸ್ ಮೇಕೆದಾಟು ಪಾದಯಾತ್ರೆ ಯನ್ನು ಆರಂಭಿಸಿದರು.

ಆದರೆ ಇದು ನಿಜಕ್ಕೂ ಜನರಿಗೆ ತಲುಪಿದೆಯಾ ಎನ್ನುವ ಪ್ರಶ್ನೆಗಳು ಉದ್ಭವಿಸುತ್ತವೆ. ಹೌದು, ಮೇಕೆದಾಟು ಜಲಾಶಯದ ಯೋಜನೆಗೆ ಆಗ್ರಹಿಸಿ ಕಾಂಗ್ರೆಸ್ ಆರಂಭಿಸಿರುವ  ಪಾದಯಾತ್ರೆಗೆ ಆರಂಭದಿಂದಲೂ, ಪರ ಧ್ವನಿಗಿಂತ ಹೆಚ್ಚಾಗಿ ವಿರೋಧದ ಧ್ವನಿಯೇ ಕೇಳಿಬಂದಿತ್ತು.

ಆಡಳಿತರೂಢ ಬಿಜೆಪಿ, ಪ್ರತಿಪಕ್ಷದಲ್ಲಿರುವ ಜೆಡಿಎಸ್ ಸೇರಿದಂತೆ ಅನೇಕರು ಕರೋನಾ ಸಮಯದಲ್ಲಿ ಈ ಪಾದ ಯಾತ್ರೆ ಬೇಡ ಎನ್ನುವ ವಿರೋಧದ ಮಾತನ್ನೇ ಹೇರಿದರು.



ಒಂದು ಹಂತದಲ್ಲಿ ಪಾದಯಾತ್ರೆ ಆರಂಭಿಸಿದ ದಿನವೇ ಎಲ್ಲ ಕಾಂಗ್ರೆಸ್ ನಾಯಕರನ್ನು ಬಂಧಿಸಿ, ಪಾದಯಾತ್ರೆ ಕಥೆ ಮುಗಿಸುವ ಯೋಚನೆಯನ್ನು ಸರಕಾರ ಮಾಡಿತ್ತು. ಆದರೆ ಅಂತಿಮ ಕ್ಷಣದಲ್ಲಿ ಸರಕಾರ ಇದ್ಯಾವುದು ಬೇಡ, ಅವರ ಪಾದಯಾತ್ರೆ ಅವರು ಮಾಡಲಿ, ಕಾನೂನಾತ್ಮಕ ಕ್ರಮವನ್ನು ತಗೆದುಕೊಳ್ಳೋಣ ಎನ್ನುವ ನಿರ್ಧಾರಕ್ಕೆ ಬಂದಿದೆ. ಆದರೆ ಈ ನಿರ್ಧಾರದ ಹಿಂದೆ 'ಕಾಂಗ್ರೆಸ್ ಬಂಡವಾಳ ಬಯಲು ಮಾಡುವುದೇ ಆಗಿತ್ತು' ಎನ್ನುವ ವಾದಕ್ಕೆ ಇಂಬು ಸಿಗುತ್ತಿದೆ. ಅದ್ಧೂರಿ ಕಾರ್ಯಕ್ರಮದಲ್ಲಿ ಉದ್ಘಾಟನೆಯಾದ ಪಾದಯಾತ್ರೆಗೆ ಯಾವುದೇ ಅಡೆತಡೆ ಇರಬಾರದು ಎನ್ನುವ ಕಾರಣಕ್ಕೆ ಕಾಂಗ್ರೆಸ್ ಹೈಟೆಕ್ ವ್ಯವಸ್ಥೆಯನ್ನು ಮಾಡಿತ್ತು.

ಮೊದಲ ಎರಡು ದಿನ ಪಾದಯಾತ್ರೆಯಲ್ಲಿ ಸಾವಿರಾರೂ ಜನ ಸೇರಿದ್ದಾರೆ. ಆದರೂ, ಎಲ್ಲೋ ಒಂದು ಕಡೆ ಇದ್ಯಾವುದು ವರ್ಕ್‌ಔಟ್ ಆಗಿಲ್ಲ ಎಂಬ ಮಾತನ್ನು ಕಾಂಗ್ರೆಸ್‌ನವರೇ ಹೇಳುತ್ತಿದ್ದಾರೆ. ಇದಕ್ಕೆ ಕಾರಣ ನೋಡುವುದಾದರೆ, ರಾಜ್ಯದಲ್ಲಿ ಕರೋನಾ ಸೋಂಕು ಏರಿಕೆಯಾಗುತ್ತಿದೆ. ಅದರಲ್ಲಿಯೂ ಬೆಂಗಳೂರು ಭಾಗದಲ್ಲಿ ಭಾರಿ ಪ್ರಮಾಣದಲ್ಲಿ ಸೋಂಕು ಏರಿದೆ. ಆದರೂ ಜನರನ್ನು ಕಟ್ಟಿಕೊಂಡು, ಕರೋನಾದ ಎಲ್ಲ ಸಂಸ್ಕೃತಿ (ಮಾಸ್ಕ್, ಸಾಮಾಜಿಕ ಅಂತರ) ವನ್ನು ಮರೆತು ಪಾದ ಯಾತ್ರೆ ಮಾಡುತ್ತಿರುವುದು ನೋಡಿದಾಗ, 'ಮೇಕೆದಾಟು ಯೋಜನೆಗೆ ಆಗ್ರಹಿಸುವ ಉತ್ಸಾಹದಲ್ಲಿ ಸೋಂಕು ಹೆಚ್ಚಿಸಲಾಗುತ್ತಿದೆ' ಎನ್ನುವ ಮಾತುಗಳು ಜನರ ಬಾಯಲ್ಲಿ ಕೇಳಿಬರುವಂತಾಗಿದೆ.



ಈ ಹಿಂದೆ ಕಾಂಗ್ರೆಸ್ ಬಿಜೆಪಿ ಅಧಿಕಾರದಲ್ಲಿರುವಾಗಲೇ 'ಬಳ್ಳಾರಿ ಪಾದಯಾತ್ರೆ, 'ಕೃಷ್ಣೆಯ ಕಡೆ ನಮ್ಮ ನಡಿಗೆ' ಎನ್ನುವ ಬೃಹತ್ ಪ್ರಮಾಣದ ಪಾದಯಾತ್ರೆ ಗಳನ್ನು ಹಮ್ಮಿಕೊಂಡಿತ್ತು. ಈ ಪಾದಯಾತ್ರೆಗೆ ಹೋಲಿಸಿದರೆ ಅವುಗಳ ಅಂತರವೂ ಹೆಚ್ಚಿತ್ತು. ಈ ಎರಡೂ ಪಾದಯಾತ್ರೆಯಿಂದ ಕಾಂಗ್ರೆಸ್‌ಗೆ ಚುನಾವಣೆಯಲ್ಲಿ ಲಾಭವೂ ತಂದುಕೊಟ್ಟಿತ್ತು ಎಂದರೆ ತಪ್ಪಿಲ್ಲ. ಈ ಹಿಂದಿನ ಎರಡು ಪಾದಯಾತ್ರೆಯ ಲಾಭದ ಲೆಕ್ಕಾಚಾರದಲ್ಲಿಯೇ ಈ ಪಾದಯಾತ್ರೆ ಮಾಡಲು ಯೋಚಿಸಿತ್ತು. ಆದರೆ ಆ ಎರಡು ಪಾದಯಾತ್ರೆಗೆ ಹೋಲಿಸಿದರೆ, ಈ ಪಾದಯಾತ್ರೆಯಲ್ಲಿ ಹಿಂದೆ ಬೀಳಲು ಪ್ರಮುಖ ಕಾರಣ, 'ಸಮಯ, ಸಂದರ್ಭ ಹಾಗೂ ಉದ್ದೇಶ'.

ಕಾಂಗ್ರೆಸ್ ನಾಯಕರು ಮೇಕೆದಾಟು ಪಾದಯಾತ್ರೆ ಆರಂಭಿಸಿದ್ದೇ ತಪ್ಪೇ? ಎನ್ನುವ ಪ್ರಶ್ನೆಗೆ 'ಇಲ್ಲ' ಎನ್ನಬಹುದು.

ಆದರೆ ಪುನಃ ಕರೋನಾ ಮೂರನೇ ಅಲೆ ಹೆಚ್ಚುತ್ತಿರುವ ಸಮಯದಲ್ಲಿ ಬೇಕಿತ್ತೇ? ಎನ್ನುವುದು ಈಗಿರುವ ಪ್ರಶ್ನೆ. ಇನ್ನು ಉದ್ದೇಶದಲ್ಲಿರುವ ಸಮಸ್ಯೆ ಬಗ್ಗೆ ಹೇಳುವ ಮೊದಲು, ಕಾಂಗ್ರೆಸ್‌ನ ಸಿದ್ಧತೆಯ ಬಗ್ಗೆಯೂ ನೋಡಬೇಕಿದೆ. ಮೇಕೆದಾಟು ಪಾದಯಾತ್ರೆಯ ಯೋಚನೆಯೇನು ಏಕಾಏಕಿ ಬಂದಿರುವುದಲ್ಲ. ಸುಮಾರು ಒಂದು ತಿಂಗಳ ಮೊದಲೇ ಪಾದಯಾತ್ರೆಯ ಬಗ್ಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಹೇಳಿದ್ದರು. ಆದರೂ ಇಡೀ ಪಾದಯಾತ್ರೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ನಾಯಕರಯಲ್ಲಿಯೇ ಸಮನ್ವಯತೆಯ ಕೊರತೆ ಎದ್ದು ಕಾಣುತ್ತಿದೆ.

ಮೊದಲನೇ ದಿನದ ಪಾದಯಾತ್ರೆಯಲ್ಲಿ ಬಹುತೇಕ ನಾಯಕ ಅರ್ಧಕ್ಕೆ ನಿಲ್ಲಿಸುವ ಅಥವಾ ಅರ್ಧ ಹೊತ್ತು ಕಾರಲ್ಲಿ, ಇನ್ನರ್ಧ ಹೊತ್ತು ನಡಿಗೆಯ ಮೂಲಕ ದಾರಿ ಸವಿಸಿರುವುದನ್ನು ಎಲ್ಲರೂ ನೋಡಿದ್ದಾರೆ. ಈ ಮೂಲಕ ಮೊದಲ ದಿನವೇ, ನಾಯಕರು ನಿತ್ರಾಣರಾದರೂ ಎನ್ನುವ ಸಂದೇಶ ರವಾನೆಯಾಯಿತು. ಬಿಜೆಪಿ ಸರಕಾರಕ್ಕೂ ಬೇಕಿದಿದ್ದು ಇದಷ್ಟೆ. 'ರಾಜರೋಷವಾಗಿ ಶುರುವಾದ ಪಾದಯಾತ್ರೆಯಲ್ಲಿ ಜನರಿದ್ದಾರೆ, ಸೌಲಭ್ಯಗಳಿವೆ ಎಲ್ಲವೂ ಇದೆ.


ಆದರೆ ನಡೆಯಬೇಕಾದ ನಾಯಕರೇ ಇಲ್ಲ.' ಎನ್ನುವ ಸಂದೇಶವನ್ನು ವ್ಯವಸ್ಥಿತವಾಗಿ ಬಿಜೆಪಿ ನಾಯಕರು ರವಾನಿಸುವಲ್ಲಿ ಯಶಸ್ವಿಯಾದರು.

ಸಿದ್ದರಾಮಯ್ಯ ಅವರು ಜ್ವರದಿಂದ ವಾಪಸಾಗಿದ್ದು, ಡಿ.ಕೆ.ಶಿವಕುಮಾರ್ ನಿತ್ರಾಣರಾಗಿ ಕುಳಿತ ದೃಶ್ಯಗಳು 'ಬೆಂಕಿಗೆ ತುಪ್ಪ ಸುರಿದಂತಾಯಿತು' ಅಷ್ಟೇ. ಆದರೆ ಇಷ್ಟು ಪ್ರಹಸನ, ಗಲಾಟೆ, ವಿವಾದ, ಅದ್ಧೂರಿಯುತವಾಗಿ ನಡೆಯುತ್ತಿರುವ ಈ ಪಾದಯಾತ್ರೆಯ ಉದ್ದೇಶದ ಬಗ್ಗೆಯೇ ಅನೇಕರಿಗೆ ಕ್ಲಾರಿಟಿ ಸಿಗುತ್ತಿಲ್ಲ. ಏಕೆಂದರೆ, ಮೇಕೆದಾಟು ಯೋಜನೆ ಮಾಡುವುದಿಲ್ಲ ಎಂದು ರಾಜ್ಯ ಸರಕಾರ ಎಲ್ಲಿಯೂ ಹೇಳಿಲ್ಲ.

●12ನೇ ಪುಟಕ್ಕೆ...

# "ಚಂಪಾ" ಎ…
# ಕನ್ನಡದ ಸಾ…





"ಚಂಪಾ" ಎಂದೇ ಕನ್ನಡ ಸಾಹಿತ್ಯ, ಹೋರಾಟ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಚಿರಪರಿಚಿತರಾಗಿದ್ದ ಪ್ರೊ. ಚಂದ್ರಶೇಖರ ಪಾಟೀಲರು ಖಡಕ್ ಮಾತು ಹಾಗೂ ನೇರ ವಿಚಾರಗಳಿಗೆ ಹೆಸರಾಗಿದ್ದರು. ಅವರದ್ದು ಸದಾ ವ್ಯವಸ್ಥೆಯ ವಿರುದ್ಧದ ಬಂಡಾಯ ದನಿ. ಅದನ್ನು ಹೋರಾಟ ಹಾಗೂ ಸಂಘಟನೆ ಮೂಲಕವೂ ಗಟ್ಟಿಗೊಳಿಸುವ ಶಕ್ತಿ ಇತ್ತು. ನಾಡಿಗೇ ಮಾದರಿಯಾಗಿದ್ದ ಇಂಥ ವ್ಯಕ್ತಿತ್ವದ ಚಂಪಾ ತಮ್ಮ 82ನೇ ವಯಸ್ಸಿನಲ್ಲಿ ನಮ್ಮನ್ನಗಲಿದ್ದಾರೆ. ಇದು ಸಾಂಸ್ಕೃತಿಕ ಕ್ಷೇತ್ರಕ್ಕಾದ ನಷ್ಟ.

ಚಂಪಾ ಈ ನೆಲ ಕಂಡ ಅಪರೂಪದ ವೈಚಾರಿಕ ಚಿಂತಕ, ಭಾಷಾತಜ್ಞ, ಕನ್ನಡಪರ ಹೋರಾಟಗಾರ, ಕವಿ, ನಾಟಕಕಾರ, ವಿಮರ್ಶಕರಾಗಿದ್ದರು. ಮೂಲತಃ ಅವರು ಇಂಗ್ಲಿಷ್ ಪ್ರಾಧ್ಯಾಪಕರು. ಕನ್ನಡ ಭಾಷೆ, ಸಾಹಿತ್ಯ ಹಾಗೂ ನಾಡುನುಡಿಯ ಬಗ್ಗೆ ಅವರಿಗಿದ್ದ ಕಾಳಜಿ ಹಾಗೂ ಬದ್ಧತೆಯನ್ನು ಯಾರೂ ಪ್ರಶ್ನೆ ಮಾಡುವಂತಿರಲಿಲ್ಲ.

"ಚಂಪಾ" – ಎಂದರೆ ಬದ್ಧತೆ, ಖಡಕ್ ವಿಚಾರ ಹಾಗೂ ಶಿಸ್ತು. ನುಡಿದಂತೆ ನಡೆದವರು. ತಮ್ಮ ವೈಯಕ್ತಿಕ ಹಾಗೂ ಸಾರ್ವಜನಿಕ ಬದುಕಿನಲ್ಲೂ ಅದನ್ನು ಪಾಲಿಸಿದವರು. ಜೊತೆಗೆ ಚಂಪಾ ಎಂದರೆ "ಸಂಕ್ರಮಣ". ಇದು ಸಾಹಿತ್ಯ – ಸಾಂಸ್ಕೃತಿಕ ಕ್ಷೇತ್ರದಲ್ಲಿ ಜನಜನಿತ. ಐದೂವರೆ ದಶಕಗಳ ಕಾಲ ಈ ಸಾಹಿತ್ಯ ಪತ್ರಿಕೆ ನಡೆಸಿಕೊಂಡು ಬಂದುದ್ದಲ್ಲದೆ, ಮೌಲಿಕ ಬರಹಗಳನ್ನು ನೀಡಿದ ಮಹತ್ವದ ಕೊಡುಗೆ ಇವರದ್ದು. ಈ ಮೂಲಕ ಅಷ್ಟು ಕಾಲವೂ ವೈಚಾರಿಕ ಚರ್ಚೆ, ವಾದ – ವಿವಾದ, ಸಂವಾದಗಳಿಗೆ ವೇದಿಕೆ ಒದಗಿಸಿದವರು. ಕನ್ನಡ ಸಾಹಿತ್ಯದ ಕಿರು ಪತ್ರಿಕೆಗಳ ಇತಿಹಾಸದಲ್ಲಿ ಇವರ ಸಂಪಾದಕತ್ವದ ಸಂಕ್ರಮಣಕ್ಕೆ ಮೊದಲ ಸ್ಥಾನ ಇದೆ.

ಚಂಪಾ ಕವಿ, ನಾಟಕಕಾರ ಹೇಗೋ ತಮ್ಮ ಹಾಸ್ಯಪ್ರಜ್ಞೆ ಹಾಗೂ ಮೊನಚು ಮಾತಿನಿಂದ ಜನರನ್ನು ಸಮಾಜವನ್ನು ಎಚ್ಚರಿಸುತ್ತಿದ್ದರು. ಬರಹದಲ್ಲಿ ವಿಡಂಬನೆ, ವ್ಯಂಗ್ಯ ಮಾಡುತ್ತಲೆ ಕಾಲೆಳೆದು ಚುಚ್ಚುತ್ತಿದ್ದರೂ ಅಲ್ಲಿ ವ್ಯಕ್ತಿ ದ್ವೇಷ ಇರುತ್ತಿರಲಿಲ್ಲ. ಜಗಳ, ವಿವಾದಗಳು ಅವರ ಬದುಕಿನ ಭಾಗವಾಗಿದ್ದವು. ಜಾತಿ, ಧರ್ಮದ ಮೂಲಕ ಪುರೋಹಿತರು ಮಾಡುವ ಶೋಷಣೆ ಹಾಗೂ ದುರುಪಯೋಗವನ್ನು ಖಂಡಿಸುತ್ತಿದ್ದರು. ಬ್ರಾಹ್ಮಣರ ದ್ವೇಷಕ್ಕಿಂದ ಬ್ರಾಹ್ಮಣ್ಯದ ವಿರೋಧ ಅವರಿಗಿತ್ತು. ಅವರ ಜಗಳ, ವಿವಾದಗಳು ಸಮಾಜದ ಸ್ವಾಸ್ಥ್ಯಕ್ಕೆ ಹಾಗೂ ಆರೋಗ್ಯಕ್ಕೆ ಕಾರಣವಾಗಿರುತ್ತಿದ್ದವು.



## ಸಂಕ್ರಮಣದ ಹುಟ್ಟು

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದಾಗ 60ರ ದಶಕದಲ್ಲಿ ನವೋದಯ ಹಿಂದೆ ಸರಿದು, ನವ್ಯ ವಿಜೃಂಭಿಸುತ್ತಿದ್ದ ಕಾಲ. ಇಂಗ್ಲೆಂಡಿನಲ್ಲಿ ಹೆಚ್ಚಿನ ಓದು ಕಲಿತು ಬಂದಿದ್ದ ಚಂಪಾ ಅವರು ನಾಟಕ, ಕಾವ್ಯದಲ್ಲಿ ಹೊಸ ಪ್ರಯೋಗ ನಡೆಸಿದ್ದರು. ತಮ್ಮ ಸಹಪಾಠಿ ಮಿತ್ರರ ಜೊತೆ ಸೇರಿ ಮೈಸೂರಿನಿಂದ ತೇಜಸ್ವಿ – ಶ್ರೀರಾಮ ತರುತ್ತಿದ್ದ "ಲಹರಿ" ಸಾಹಿತ್ಯ ಪತ್ರಿಕೆಯಂತೆ ಒಂದು ಆರೋಗ್ಯಕರ ಮನಸ್ಸಿನ ಸಾಹಿತ್ಯ ಪತ್ರಿಕೆ ಹೊರ ತರುವ ಕನಸು ಕಂಡರು. ಆಗ ಅವರ ಜೊತೆ ಕೈ ಜೋಡಿಸಿದವರು ಸಹೋದ್ಯೋಗಿ ಇಂಗ್ಲಿಷ್ ಪ್ರಾಧ್ಯಾಪಕ, ಲೇಖಕ ಗಿರಡ್ಡಿ ಗೋವಿಂದರಾಜ, ಹಿಂದಿ ಪ್ರಾಧ್ಯಾಪಕ, ಕವಿ ಸಿದ್ಧಲಿಂಗ ಪಟ್ಟಣಶೆಟ್ಟಿ. ಈ ಮೂವರು ಮಿತ್ರರು ಸೇರಿ "ಸಂಕ್ರಮಣ" ಪತ್ರಿಕೆ ಶುರು ಮಾಡಿದಾಗ ತೊಡಗಿಸಿದ ಬಂಡವಾಳ ಕೇವಲ ರೂ.30! ತಲಾ ರೂ. 10 ಹಾಕಿ ಪತ್ರಿಕೆ ಆರಂಭಿಸಿದ ಕಾಲ 1964!


ನವ್ಯ ಸಾಹಿತ್ಯದ ಉಚ್ಛ್ರಾಯ ಸ್ಥಿತಿಯಲ್ಲಿ ಬರೆಯುತ್ತಿದ್ದ ಬರಹಗಾರರಿಗೆ ಈ ಪತ್ರಿಕೆ ವೇದಿಕೆಯಾಯಿತು. ಪಿ. ಲಂಕೇಶ, ಯು.ಆರ್. ಅನಂತಮೂರ್ತಿ, ಶ್ರೀಕೃಷ್ಣ ಆಲನಹಳ್ಳಿ, ಎಚ್. ಎಂ. ಚೆನ್ನಯ್ಯ, ರಾಮಚಂದ್ರಶರ್ಮ, ನಾಡಿಗ, ಕಣವಿ, ಕೆ.ವಿ. ತಿರುಮಲೇಶ, ಪೂರ್ಣಚಂದ್ರ ತೇಜಸ್ವಿ, ಜಿ.ಎಸ್. ಆಮೂರ ಮೊದಲಾದವರು ಒಳಗೊಂಡಂತೆ ನಾಡಿನ ಅನೇಕ ಯುವ ಲೇಖಕರು ಈ ಪತ್ರಿಕೆಗೆ ಬರೆಯತೊಡಗಿದರು.

ಸಾಹಿತ್ಯ ಚರ್ಚೆಯನ್ನು ಒಂದು ಮೌಲ್ಯವೆಂದು ಭಾವಿಸಿ, ಮುನ್ನಡೆಸಿದ ಈ ಪತ್ರಿಕೆಯ ಮೂವರು ಸಂಪಾದಕರಲ್ಲಿ ಚಂಪಾ ಉಳಿದು ಇನ್ನಿಬ್ಬರು ಬೇರೆಬೇರೆ ಕಾರಣಕ್ಕೆ ಹೊರಗುಳಿದರು. ಮುಂದೆ ಚಂಪಾ ಒಬ್ಬರೇ ಅದನ್ನು ಮುನ್ನಡೆಸಿ, ತಮ್ಮ 80ನೇ ವರ್ಷದವರೆಗೂ, ಅಂದರೆ ಸರಿ ಸುಮಾರು ಐದೂವರೆ ದಶಕಗಳ ಕಾಲ ಹೆಗಲ ನೊಗದಂತೆ ಹೊತ್ತು ನಡೆದರು. ಇಂಥ ಮೌಲಿಕ ಪತ್ರಿಕೆಗೆ ಚಂದಾದಾರರೇ ಜೀವಾಳ. ಚಂಪಾ ಇಲ್ಲಿ ವ್ಯಾವಹಾರಿಕ ಜ್ಞಾನ ಬಳಸಿ, ಚಂದಾ ವಸೂಲಿ ಮಾಡುತ್ತಲೇ ಪತ್ರಿಕೆಯ ಮೌಲ್ಯವನ್ನು ಉಳಿಸಿ ಬೆಳಸಿದರು. ಇಲ್ಲಿ ಮಹತ್ವದ ಸಾಧನೆವೊಂದರ ಬಗ್ಗೆ ಹೇಳಲೇಬೇಕು. ಆ ಕಾಲಘಟದಲ್ಲಿ "ಸಂಕ್ರಮಣ ಕಾವ್ಯ" ಎಂಬ ಕೃತಿ ಹೊರತಂದರು. ಕನ್ನಡದ ಮಹತ್ವದ ಕವಿಗಳ ಕವಿತೆಗಳು ಅದರಲ್ಲಿ ದಾಖಲಾದವು. ಅದು ಹಲವು ವಿಶ್ವವಿದ್ಯಾಲಯಗಳಿಗೆ ಪಠ್ಯವಾಯಿತು.

70ರ ದಶಕದ ಆರಂಭದಲ್ಲಿ ಮೈಸೂರಿನಲ್ಲಿ ಕುವೆಂಪು ಅವರ ಸಮ್ಮುಖದಲ್ಲಿ ಲೇಖಕ – ಕಲಾವಿದರ ಒಕ್ಕೂಟ ಸಂಘಟಿಸಿದ ಚಂಪಾ, ಪುರೋಹಿತಶಾಹಿ ಹಾಗೂ ಬ್ರಾಹ್ಮಣ್ಯಕ್ಕೆ ಸೆಡ್ಡು ಹೊಡೆದರು. ಆಗ ಬಹುತೇಕ ಸಮಾಜವಾದಿ ಚಿಂತಕರು ಅದರ ಭಾಗವಾಗಿದ್ದರು.

## ಜೆ ಪಿ ಚಳವಳಿ ಮತ್ತು ತುರ್ತು ಪರಿಸ್ಥಿತಿ

1975ರಲ್ಲಿ ಭಾರತದಲ್ಲಿ ತುರ್ತುಪರಿಸ್ಥಿತಿ ಘೋಷಣೆ ಆಯಿತು. ಅಂದಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಹೇರಿದ ತುರ್ತುಪರಿಸ್ಥಿತಿಯಿಂದಾಗಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾಯಿತು. ಮಾಧ್ಯಮಗಳ ಮೇಲೆ, ಬರಹಗಳ ಮೇಲೆ ಸೆನ್ಸಾರ್ ಜಾರಿ ಮಾಡಿದ್ದರ ಪರಿಣಾಮ ಪ್ರತಿಭಟನೆಗಳು ಶುರುವಾದವು. ಜಯಪ್ರಕಾಶ ನಾರಾಯಣ ಅವರ ಆಂದೋಲನ ಪ್ರಜಾಪ್ರಭುತ್ವದ ರಕ್ಷಣೆ ಹಾಗೂ, ಯುವ ಜನಾಂಗದ ಉದ್ಯೋಗಕ್ಕೆ ಬೆಂಬಲ ಕೊಟ್ಟಿತ್ತು. ಚಂಪಾ ಈ ಆಂದೋಲನದ ಭಾಗವಾದರು. ದೇಶದಾದ್ಯಂತ ಜೆ.ಪಿ. ಅವರ ಈ ಆಂದೋಲನಕ್ಕೆ ಭಾರೀ ಬೆಂಬಲ ವ್ಯಕ್ತವಾಯಿತು. ಚಂಪಾ, ಜೆಪಿ ಅವರ ಬೆಂಬಲಿಸಿದ್ದಲ್ಲದೆ ತುರ್ತುಪರಿಸ್ಥಿತಿ ವಿರೋಧಿಸಿ ಲೇಖನ, ಕವಿತೆ ಬರೆದು ಜನಸಾಮಾನ್ಯರನ್ನು ಸಂಘಟಿಸತೊಡಗಿದರು. ವಿದ್ಯಾರ್ಥಿ ಹಾಗೂ ಯುವ ಜನಾಂಗ ತುರ್ತುಪರಿಸ್ಥಿತಿ ವಿರುದ್ಧ ಪ್ರತಿಭಟಿಸಿತು. ಜೆ.ಪಿ. ಅವರನ್ನು ಬಂಧಿಸಿ ಜೈಲಿಗೆ ಕಳುಹಿಸಿದಂತೆ ಪ್ರೊ. ಚಂಪಾ ಅವರನ್ನೂ ಆಗಿನ ರಾಜ್ಯ ಸರ್ಕಾರ ಧಾರವಾಡದಲ್ಲಿ ಬಂಧಿಸಿ ಜೈಲಿನಲ್ಲಿ ಇರಿಸಿತು.




ಭಾರತದ ಅನೇಕ ರಾಜಕೀಯ ನಾಯಕರು, ಪ್ರಗತಿಪರ ಆಲೋಚನೆಯ ಲೇಖಕರ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ ಆಗುತ್ತಿದ್ದಂತೆ ಪ್ರತಿಭಟನೆಯ ಕಾವು ಹೆಚ್ಚಾಯಿತು. ಇದರಿಂದ ಸಾವಿರಾರು ಜನರ ಬಂಧನವಾಯಿತು. ಈ ಕಾಲಘಟದಲ್ಲಿ ಚಂಪಾ ಅವರ "ಸಂಕ್ರಮಣ" ಸ್ಥಗಿತವಾಯಿತು. ಕೆಲವು ದಿನಗಳ ಜೈಲು ವಾಸದ ನಂತರ ಹೊರಬಂದ ಚಂಪಾ, "ಸಂಕ್ರಮಣ" ಪತ್ರಿಕೆಗೆ ಹೊಸ ಜೀವ ತುಂಬಲು ಪ್ರಯತ್ನ ನಡೆಸಿದರು. ನಾಡಿನ ಪ್ರಜ್ಞಾವಂತ ಲೇಖಕ, ಚಿಂತಕರು ಪತ್ರಿಕೆಯ ಸಂಪಾದಕೀಯ ಮಂಡಳಿಗೆ ಸೇರಿದರು.

## ಜೈಲು ಅನುಭವ ದಾಖಲು

ಚಂಪಾ ಜೈಲಿಗೆ ಹೋದ ಕನ್ನಡದ ಏಕೈಕ ಲೇಖಕರು! ಅನೇಕರು ಸರ್ಕಾರದ ಕಾರ್ಯಕ್ರಮ ಒಳಗೊಳಗೇ ಟೀಕಿಸಿದರೂ, ಸಾರ್ವಜನಿಕವಾಗಿ ಖಂಡಿಸಲಿಲ್ಲ. ಹೀಗಿದ್ದೂ, ಅನೇಕ ಲೇಖಕರು ಭೂಗತರಾಗಿ ಚಟುವಟಿಕೆಯಲ್ಲಿ ಭಾಗಿಯಾಗಿದ್ದರು. ಚಂಪಾ ತಮ್ಮ ಜೈಲು ದಿನಗಳ ಅನುಭವವನ್ನು ಬರಹರೂಪಕ್ಕಿಳಿಸಿದರು. ಅದು "26 ಹಗಲು 25 ರಾತ್ರಿ" ಎಂಬ ಹೆಸರಿನಿಂದ ಪ್ರಕಟವಾಯ್ತು. ಕನ್ನಡದ ಲೇಖಕರೊಬ್ಬರು ಜೈಲು ದಿನಗಳ ಅನುಭವವನ್ನು ದಾಖಲಿಸಿದ್ದು ಅದೇ



ಮೊದಲು…
ಲೋಕ…
ಹಾಗೂ…
ಸರ್ಕಾರಗ…
ಎಂದರೆ…
ಎದುರಿಸು…
ಹೋ…
ಸಾಮಾಜಿ…
ನಿಲುವುಗ…
ಪ್ರಕಟಿಸು…
ನೀಡುವ…
ಮಾಡುತ್ತ…
ಸಾಂದರ್ಭಿ…
ಬರಹಗಾ…
ವಿಶೇಷಾ…
ವಿಶೇಷಾ…
ವಿಶೇಷಾ…
ಮಹತ್ವದ…

## ಬಂಡಾ… ರುವಾ…

ಚಂಪಾ…
ದಶಕದ…
ರುವಾರಿಗ…
ಹೊಸ ಮ…
ಸಮ್ಮೇಳನ…
ಮುಂ…
ಕಾರಣರಾ…
ಚಳವಳಿ"…
ಸ್ಥಾನ ದಕ್ಕಿ…
ಮುಖ್ಯಮ…
ರಾಜಕುಮ…
ಭಾಗವಹಿ…
ಪಾಟೀಲ…
ನಂತರ ಸ…





# ಎಂಬ
# ಕೀಪ್ರಜ್ಞೆ

. ಕನ್ನಡದ ಸಾಂಸ್ಕೃತಿಕ
ಚಂಪಾ ಅವರ ಧೈರ್ಯ
ಗಟ್ಟಿತನವನ್ನು ಸ್ವಾಗತಿಸಿತು.
ಳು ಕೂಡ ಚಂಪಾ
ಸಣ್ಣ ಆತಂಕವನ್ನೂ
ತ್ತಿದ್ದವು.
ರಾಟ ಪರಂಪರೆ,
ಕ ಕಾಳಜಿ, ವೈಚಾರಿಕ
ಳಿಂದ ಜನಪರ ವಿಚಾರ
ತ್ತ ಬಂದು, ಬುದ್ದಿಗೆ ಕಸರತ್ತು
ಕೆಲಸವನ್ನು ಸಂಕ್ರಮಣ
ತ್ತಾ ಬಂದಿರುವುದಕ್ಕೆ ಹಲವು
ರ್ಕ ವಿಶೇಷಾಂಕಗಳೇ ಸಾಕ್ಷಿ.
ರರು ಮತ್ತು ಕಲಾವಿದರ ಒಕ್ಕೂಟದ
ಂಕ, ಲೋಹಿಯಾ ವಿಶೇಷಾಂಕ, ಅಂಬೇಡ್ಕರ್
ಂಕ, ಬಂಡಾಯ ಸಾಹಿತ್ಯ ವಿಶೇಷಾಂಕ, ವಿಚಾರ ಸಾಹಿತ್ಯ
ಂಕ ಮೊದಲಾದವು ಕನ್ನಡ ಸಾಹಿತ್ಯದ ಸಂದರ್ಭದಲ್ಲಿ
ದಾಖಲೆಗಳಾಗಿವೆ.

## ಯ ಹಾಗೂ ಗೋಕಾಕ್ ಚಳವಳಿಯ ...

ಬದ್ಧತೆಯ ಬರಹಗಾರ ಹಾಗೂ ಹೋರಾಟಗಾರ. 70ರ
ೊನೆಯಲ್ಲಿ ಹುಟ್ಟಿದ "ಬಂಡಾಯ ಸಾಹಿತ್ಯ ಸಂಘಟನೆ"ಯ
ಳಲ್ಲಿ ಒಬ್ಬರು. ಆ ಸಂಘಟನೆಯ ರಾಜ್ಯ ಸಂಚಾಲಕರಾಗಿ
ನಸ್ಸುಗಳನ್ನು ಬೆಳೆಸಿದರು. ರಾಜ್ಯದ ಹಲವೆಡೆ ರಾಜ್ಯ
ನಡೆಯಲು ಇವರೂ ಕಾರಣಕರ್ತರಾದರು.
ವೆ 80ರ ದಶಕದ ಆರಂಭದಲ್ಲಿ ಭಾಷಾ ಚಳವಳಿ ಹುಟ್ಟಲು
ದವರಲ್ಲಿ ಇವರೂ ಪ್ರಮುಖರು. ಇದು "ಗೋಕಾಕ್
ಎಂದು ಕರೆಯಲ್ಪಟ್ಟಿತು. ಪ್ರೌಢಶಾಲೆಯಲ್ಲಿ ಕನ್ನಡಕ್ಕೆ ಪ್ರಥಮ
ಸಿಕೊಳ್ಳಲು ನಡೆಸಿದ ಹೋರಾಟ ಇದಾಗಿತ್ತು. ಅಂದಿನ
ಂತ್ರಿ ಗುಂಡೂರಾವ್ ಸರ್ಕಾರ ಚಳವಳಿಗೆ ಬಗ್ಗದಿದ್ದಾಗ ನಟ
ಾರ ಅವರ ಪ್ರವೇಶವಾಯಿತು. ಅವರು ಚಳವಳಿಯಲ್ಲಿ
ಸಲು ಹುಬ್ಬಳ್ಳಿ – ಧಾರವಾಡದವರೇ ಆದ ಪತ್ರಕರ್ತ
ಪುಟ್ಟಪ್ಪ, ಚಂಪಾ ಕಾರಣರಾದರು. ರಾಜಕುಮಾರ ಬಂದ
ರ್ಕಾರ ನಡುಗಿತಾದರೂ, ಅಲ್ಲಲ್ಲಿ ಹಿಂಸೆಗಳಾದವು.

ಭಾಷೆಯಂಥ ಸೆನ್ಸೇಷನಲ್ ವಿಚಾರ ಬಹು ಸೂಕ್ಷ್ಮವಾಗಿರುತ್ತದೆ ಎಂಬ ವಿಚಾರ ಮನದಟ್ಟಾಯಿತು.

ಚಂಪಾ ನಾಡಿನ ಅನೇಕ ಪತ್ರಿಕೆಗಳಿಗೆ ಅಂಕಣ ಬರೆಯುತ್ತಿದ್ದರು. ಅವರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದರೆ ಬರಹ ನಿಲ್ಲಿಸಿಬಿಡುತ್ತಿದ್ದರು. ಪಿ. ಲಂಕೇಶ್ ಅವರ ಜೊತೆ ಆತ್ಮೀಯ ಒಡನಾಟ ಇತ್ತಾದರೂ, ಅವರ ಪತ್ರಿಕೆಗೆ ಹಲವು ಬರೆದ ನಂತರ ತಾತ್ವಿಕ ಭಿನ್ನಾಭಿಪ್ರಾಯ ಬಂದಿದ್ದರಿಂದ ಬರಹ ನಿಲ್ಲಿಸಿದ್ದರು. ಹಾಗೆ ನೋಡಿದರೆ ಇವರಿಬ್ಬರೂ ಸಮಾಜವಾದಿಗಳೇ. ಹಾಗೆಂದು ತಪ್ಪುಗಳ ಜೊತೆ ಅವರೆಂದೂ ರಾಜಿ ಮಾಡಿಕೊಳ್ಳುತ್ತಿರಲಿಲ್ಲ. ಈ ನಡುವೆ ತಮ್ಮ ಸಾಹಿತ್ಯ ಪತ್ರಿಕೆ ಸಂಕ್ರಮಣವನ್ನು ವಾರಪತ್ರಿಕೆ ಮಾಡುವ ಹುಚ್ಚು ಸಾಹಸಕ್ಕೆ ಕೈ ಹಾಕಿ, ಹಣ ಸಂಗ್ರಹಕ್ಕೆ ತೊಡಗಿದರು. ಆದರೆ ಪತ್ರಿಕೆ ಹೆಚ್ಚುಕಾಲ ಬದುಕಲಾಗಲಿಲ್ಲ. ಮಾರುಕಟ್ಟೆಯಲ್ಲಿ ಇದಕ್ಕೆ ಬೇಡಿಕೆ ಕುಸಿಯಿತು. ವಾರಪತ್ರಿಕೆ ಅಲ್ಪಕಾಲದ ಉಸಿರಾಟದಿಂದ ಸ್ತಬ್ಧವಾಯಿತು. ಚಂಪಾ, ಮತ್ತೆ ಸಂಕ್ರಮಣವನ್ನು ಮಾಸಿಕ ಸಾಹಿತ್ಯ ಪತ್ರಿಕೆಯಾಗಿ ಆರಂಭಿಸಿದರು.

## ಲಾಬಿ ನಗರವೆಂದ ಬೆಂಗಳೂರಿನಲ್ಲಿ ಚಂಪಾ

ಚಂಪಾ ಧಾರವಾಡದ ವಿವಿಯಿಂದ ನಿವೃತ್ತರಾದ ನಂತರ ಬೆಂಗಳೂರು ನಿವಾಸಿ ಆದರು. ಬೆಂಗಳೂರನ್ನು "ಲಾಬಿಯ ನಗರ" ಎಂದು ಟೀಕಿಸುತ್ತಿದ್ದ ಅವರೇ ಈ ಲಾಬಿಯ ನಗರದಲ್ಲಿ ಸೇರಿ ಗುಲಾಬಿಯ ಹುಡುಕುವ ಪ್ರಯತ್ನ ಮಾಡಿದರು.

ಚಂಪಾ ಅವರಿಗೆ ಮೊದಲಿನಿಂದಲೂ ರಾಜಕೀಯದಲ್ಲಿ ಆಸಕ್ತಿ ಇತ್ತು. ಸಾಹಿತಿಗೆ ರಾಜಕೀಯಪ್ರಜ್ಞೆ ಇರಬೇಕು, ಅವಕಾಶ ಸಿಕ್ಕರೆ ರಾಜಕೀಯ ಪ್ರವೇಶ ಮಾಡಿ, ಸಮಾಜ ಸುಧಾರಣೆ ಮಾಡಿ ಮೌಲಿಕವಾದದ್ದನ್ನು ಸಾಧಿಸಬಹುದು ಎಂದು ಭಾವಿಸಿದ್ದರು. ಅದರಂತೆ ತಮ್ಮ ಸಮಾಜವಾದಿ ಮಿತ್ರರಾದ ಮುಖ್ಯಮಂತ್ರಿ ಜೆ.ಎಚ್. ಪಟೇಲ, ಎಂ.ಪಿ. ಪ್ರಕಾಶರ ಸಹಾಯದಿಂದ "ಕನ್ನಡ ಅಭಿವೃದ್ಧಿ ಪ್ರಾಧಿಕಾರ"ದ ಅಧ್ಯಕ್ಷರಾದರು. ಕನ್ನಡದ ಕೆಲಸ ಮಾಡಲು ಅವರಿಗೊಂದು ಅವಕಾಶ ಸಿಕ್ಕಿತು. ಆಡಳಿತ ಭಾಷೆ ಕನ್ನಡವಾಗಲು ಅಧಿಕಾರಿಗಳಿಗೆ, ಸಚಿವರಿಗೆ ಎಚ್ಚರಿಕೆ ಕೊಡುತ್ತಿದ್ದರು.

ಮುಂದೆ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಗೆ ನಿಂತು, ಆಜೀವ ಸದಸ್ಯರಿಂದ ಅಧ್ಯಕ್ಷರಾಗಿ ಆಯ್ಕೆ ಆದರು. ಈ ಸಂದರ್ಭ " ಪುಸ್ತಕ ಸಂತೆ" ಎಂಬ ವಾರದ ಕಾರ್ಯಕ್ರಮ ಆಯೋಜಿಸಿ, ಪರಿಷತ್ತಿನ ಆವರಣದಲ್ಲಿ ಪುಸ್ತಕ ಮಾರಾಟದ ವ್ಯವಸ್ಥೆ ಮಾಡಿದರು. ಶಿವಮೊಗ್ಗದ "ಅಖಿಲ ಭಾರತ ಸಾಹಿತ್ಯ ಸಮ್ಮೇಳನ"ದ ಸಂದರ್ಭದಲ್ಲಿ ಗೌರಿ ಲಂಕೇಶ ಹಾಗೂ ಬೆಂಬಲಿಗರನ್ನು ಆಹ್ವಾನಿಸಿದ್ದಕ್ಕೆ ಆರ್ ಎಸ್ ಎಸ್, ವಿಶ್ವ ಹಿಂದೂ ಪರಿಷತ್ ಸಂಘಟನೆಯವರು ಪ್ರತಿರೋಧ ವ್ಯಕ್ತಪಡಿಸಿ, ಗಲಾಟೆ ಮಾಡಿದ್ದರು. ಸರ್ಕಾರ ಈ ವಿಚಾರದಲ್ಲಿ ಮಧ್ಯೆ ಪ್ರವೇಶಿ, ಗೌರಿ ಹಾಗೂ ಅವರ ಬೆಂಬಲಿಗರನ್ನು ಕೈ ಬಿಡಿ, ಇಲ್ಲವಾದರೆ ಸಮ್ಮೇಳನಕ್ಕೆ ಹಣ ನೀಡುವುದಿಲ್ಲ ಎಂದು ಬೆದರಿಕೆ ಹಾಕಿತು. ಆಗ ಕೆರಳಿದ ಅಧ್ಯಕ್ಷ ಚಂಪಾ ಅವರು ಮುಖ್ಯಮಂತ್ರಿ ಅವರಿಗೇ ಸವಾಲು ಹಾಕಿ, "ಸಾಹಿತ್ಯ ಸಮ್ಮೇಳನಕ್ಕೆ ನೀವೇನು ಭಿಕ್ಷೆ ಕೊಡುವುದಿಲ್ಲ. ಅದು ಕನ್ನಡಿಗರ ಹಣ. ಸಮ್ಮೇಳನದ ಖರ್ಚು ಕೊಡುವುದು ನಿಮ್ಮ ಕರ್ತವ್ಯ. ನೀವು ಹಣ ಕೊಡದಿದ್ದರೂ ಸಮ್ಮೇಳನ ಮಾಡುತ್ತೇವೆ. ಯಾವುದೇ ಕಾರಣಕ್ಕೂ ಅತಿಥಿಗಳನ್ನು ಬದಲಾಯಿಸೊಲ್ಲ. ನೀವು ಬಾರದಿದ್ದರೂ ನಾನು ಸಮ್ಮೇಳನ ಮಾಡುತ್ತೇನೆ" ಎಂದು ಗುಟುರು ಹಾಕಿ ಸವಾಲು ಎಸೆದರು.

## ಕೊನೆಯ ಮಾತು

ಚಂಪಾ ಅವರ ಅಂತ್ಯ ಸಂಸ್ಕಾರ ಬೆಂಗಳೂರು ವಿವಿ ಆವರಣದ ಕಲಾಗ್ರಾಮದಲ್ಲಿ ಆಗಬೇಕೆಂದು ಹಲವರು ಒತ್ತಾಯಿಸಿ, ಹಠ ಮಾಡಿದ್ದರು. ಆದರೆ, ಈ ಹಿಂದೆ ಅಲ್ಲಿ ಹಲವು ಸಾಹಿತಿಗಳ ಅಂತ್ಯ ಸಂಸ್ಕಾರಕ್ಕೆ ಜಾಗ ಕೊಟ್ಟಿದ್ದಕ್ಕೆ ಭಾರಿ ಪ್ರತಿರೋಧ ವ್ಯಕ್ತವಾಗಿದ್ದರಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಒಳ್ಳೆಯ ನಿರ್ಧಾರ ತೆಗೆದುಕೊಂಡು, ಚಾಮರಾಜಪೇಟೆಯ ರುದ್ರ ಭೂಮಿಯಲ್ಲಿ ಸರ್ಕಾರದ ಸಕಲ ಗೌರವಗಳೊಂದಿಗೆ ಚಂಪಾ ಅವರ ಅಂತ್ಯ ಸಂಸ್ಕಾರಕ್ಕೆ ಅವಕಾಶ ಮಾಡಿ ಕೊಟ್ಟಿದ್ದು ಸ್ವಾಗತಾರ್ಹ.






## ಚಂಪಾರಿಗೂ ಗನ್ ಮ್ಯಾನ್

ಚಂಪಾ ಅವರ ಖಡಕ್ ಎಚ್ಚರಿಕೆಗೆ ಸರ್ಕಾರ ತಲೆಬಾಗಿ, ಸಮ್ಮೇಳನಕ್ಕೆ ಅಗತ್ಯ ಹಣ ಬಿಡುಗಡೆ ಮಾಡಿತು. ಗೌರಿ ಹಾಗೂ ಬೆಂಬಲಿಗರಿಗೆ ಪೊಲೀಸ್ ರಕ್ಷಣೆ ನೀಡಿ ಸಮಾರಂಭ ಮಾಡುವಂತಾಯಿತು. ಮುಂದೆ ಸಂಶೋಧಕ ಎಂ.ಎಂ.ಕಲಬುರ್ಗಿ, ಗೌರಿ ಅವರ ಹತ್ಯೆಯಾದ ನಂತರ ಚಂಪಾ ಹಾಗೂ ಹಲವು ವಿಚಾರವಾದಿ ಲೇಖಕರ ಬದುಕಿಗೂ ಆತಂಕ ಸೃಷ್ಟಿ ಆಯಿತು. ಆಗ ಮೈಸೂರಿನ ವಿಚಾರವಾದಿ ಭಗವಾನ್, ಚಂಪಾ, ಬರಗೂರು, ಬಂಜಗೆರೆ ಮೊದಲಾದವರಿಗೆ ಗನ್ ಮ್ಯಾನ್ ರಕ್ಷಣೆಗೆ ನೇಮಿಸಿತು.

ಚಂಪಾ ಸಾರ್ವಜನಿಕ ಸಮಾರಂಭದಲ್ಲಿ ಭಾಗಿಯಾದರೆ ಏನಾದರೂ ವಿವಾದಗಳು ಏಳುತ್ತಿದ್ದವು. ಅವರ ವ್ಯಂಗ್ಯ ಹಾಗೂ ಮೊನಚು ಮಾತುಗಳಿಂದ ರಾಜಕಾರಣಿಗಳು ಭಯಪಡುತ್ತಿದ್ದರು. ಇಷ್ಟಾಗ್ಯೂ ಚಂಪಾ, ರಾಜ್ಯಕ್ಕೆ ತನ್ನದೇ ಆದ "ಪ್ರಾದೇಶಿಕ ಪಕ್ಷ"ದ ಅಗತ್ಯ ಇದೆ ಎಂದು ಪ್ರತಿಪಾದಿಸುತ್ತಲೇ ಬಂದರು. ಆದರೆ, ಅವರ ಕನಸಿನ ಪ್ರಾದೇಶಿಕ ಪಕ್ಷ ರಾಜ್ಯದಲ್ಲಿ ಉದಯಿಸಲೇ ಇಲ್ಲ. ಅವರು ಮಗುವಿಗೆ ಪ್ರಾಥಮಿಕ 3ನೇ ವರ್ಷದಿಂದ ಇಂಗ್ಲಿಷ್ ಕಲಿಸುವ ವಿಚಾರಕ್ಕೆ ಒಲವು ತೋರಿದ್ದರು. ಆದರೆ, ಅವರ ವಿಚಾರವನ್ನು ಬಂಡಾಯದ ಸಂಗಾತಿಗಳೇ ವಿರೋಧಿಸುತ್ತಿದ್ದರು. ಅವರು ಅನೇಕರ ಜೊತೆ ಭಿನ್ನಾಭಿಪ್ರಾಯ ಹೊಂದಿದ್ದರೂ ತಮ್ಮ ಸ್ನೇಹಕ್ಕೆ ದಕ್ಕೆ ತಂದುಕೊಂಡಿರಲಿಲ್ಲ. ಸೈದ್ಧಾಂತಿಕ ಭಿನ್ನಾಭಿಪ್ರಾಯದ ನಡುವೆಯೂ ಮನುಷ್ಯ ಸಂಬಂಧ ಬೆಸೆವ ಕೆಲಸ ಮಾಡಿದ ಮಾನವತಾವಾದಿ ಆಗಿದ್ದರು.

ಚಂಪಾ ಮೂಲತಃ ಕವಿ, ನಾಟಕಕಾರರು. ವಿಮರ್ಶೆ, ಪ್ರಬಂಧಗಳನ್ನೂ ಬರೆದಿದ್ದಾರೆ. ಸಾಹಿತ್ಯದ ಸೇವೆಗೆ ಪಂಪ ಪ್ರಶಸ್ತಿ, ರಾಜ್ಯೋತ್ಸವ ಮೊದಲಾದ ಪ್ರಶಸ್ತಿ ಪಡೆದಿದ್ದಾರೆ. ಎರಡು ವರ್ಷದ ಹಿಂದೆ ಬಚ್ಚಲು ಮನೆಯಲ್ಲಿ ಜಾರಿಬಿದ್ದು ತೊಡೆಯ ಮೂಳೆಗೆ ಅಪಾಯ ಆದ ನಂತರ ಹಾಸಿಗೆ ಹಿಡಿದಿದ್ದರು. ಮತ್ತೆ ಅವರು ಮೇಲೇಳಲೇ ಇಲ್ಲ. ಜನವರಿ 10ರಂದು ನಮ್ಮನ್ನಗಲಿದರೂ, ಅವರ ಆದರ್ಶ, ಹೋರಾಟದ ಕೆಚ್ಚು, ಕನ್ನಡದ ಪ್ರೀತಿ, ಅವರ ಸಾಹಿತ್ಯ ಸೃಷ್ಟಿ ಕನ್ನಡಿಗರಿಗೆ ಸ್ಫೂರ್ತಿ ಆಗಿದೆ.




ಆರ್ ಜಿ ಹಳ್ಳಿ ನಾಗರಾಜ
ಲೇಖಕ – ಪತ್ರಕರ್ತ

# ಮಕ್ಕಳನ್ನೇಕೆ ಸೆಳೆಯುತ್ತಿದೆ ಶಾಮನಿಷಮ್ ಭೂತ!

● ಪರಶಿವ ಧನಗೂರು

ಶಾಮನಿಷಮ್! ಆತ್ಮಗಳ ಜೊತೆ ಸಂಭಾಷಣೆ ಕಲಿಸುವ ಆಧ್ಯಾತ್ಮಿಕ ಮಾರ್ಗ! ಅಲೌಕಿಕ ಜಗತ್ತಿನ ಅತಿಮಾನುಷ ಶಕ್ತಿ ಗಳನ್ನು ನಿಮ್ಮ ಕೈವಶ ಮಾಡಿಕೊಳ್ಳಲು ಆನ್ಲೈನ್ ಕ್ಲಾಸ್! ಪವರ್ ಆಫ್ ಶಮನಿಷಂ ಹೆಸರಿನಲ್ಲಿ ಟಾಪ್ ಟೀಚರ್ಸ್ ಗಳಿಂದ ಆನ್ಲೈನ್ ನಲ್ಲೇ ಆಧ್ಯಾತ್ಮಿಕ ಕ್ಲಾಸು; ಡಾಲರ್ ಲೆಕ್ಕದಲ್ಲಿದೆ ಫೀಜು! ದೈಹಿಕ-ಮಾನಸಿಕ ಕಾಯಿಲೆಯನ್ನು ಗುಣಪಡಿಸಲು ಶಮನಿಕ್ ಟ್ರೀಟ್ ಮೆಂಟ್ ಮೊರೆಹೋಗಿ! ಬನ್ನೀ ಭಾರತೀಯರೇ ಬನ್ನೀ ಶಮನಿಕ್ ಕಲ್ಚರ್ ರೆಮಿಡೀಸ್ ಹೀಲಿಂಗ್ ಥೆರಪಿಗೆ ತಲೆಬಾಗಿ! ಇದು ಈಗ ಹಲವಾರು ವೆಬ್ಸೈಟ್ ಮತ್ತು ಯೂಟ್ಯೂಬ್ ಚಾನಲ್ ಗಳಲ್ಲಿ ಹರಿದಾಡುತ್ತಿರುವ ಜಾಹಿರಾತುಗಳು!

ಮಾಟ ಮಂತ್ರ,ದೆವ್ವ ಪಿಶಾಚಿ ಎಂದು ಮಾರುದೂರ ಓಡುತ್ತಿದ್ದವರನ್ನೂ ಬೆಚ್ಚಿ ಬೀಳಿಸಲು ಈಗ ಅಂತರ್ ಜಾಲ ತಾಣಗಳಲ್ಲಿ ಹೀಲಿಂಗ್ ಥೆರಪಿ ಹೆಸರಿನಲ್ಲಿ, "ಶಮನಿಸಂ" ಹೆಸರಿನಲ್ಲಿ ಮತ್ತೆ ಆತ್ಮಸಂಭಾಷಣೆ ವಿಧ್ಯೆ ಹೇಳಿಕೊಡುತ್ತೇವೆಂದು ಮೋಸಗಾರರು ಪ್ರತ್ಯಕ್ಷವಾಗಿದ್ದಾರೆ! ಅದನ್ನೇ ನಂಬಿದ ಹದಿನೇಳು ವರ್ಷ ವಯಸ್ಸಿನ ಅಪ್ರಾಪ್ತ ಕಾಲೇಜು ಹುಡುಗಿ ಶಾಮನಿಸಂ ಸಿದ್ದಾಂತ ಅರಸುತ್ತಾ ತಂದೆತಾಯಿಯನ್ನು ತೊರೆದು ನಾಪತ್ತೆ ಯಾಗಿದ್ದಾಳೆ! ಅಕ್ಟೋಬರ್ 31ರಂದು ಬೆಂಗಳೂರಿನ ಸುಬ್ರಮಣ್ಯ ನಗರ ಪೊಲೀಸ್ ಠಾಣಾವ್ಯಾಪ್ತಿಯ ತನ್ನ ಮನೆಯಿಂದ ಕೇವಲ ಎರಡು ಜೊತೆ ಬಟ್ಟೆ ಮತ್ತು 2500ರೂಪಾಯಿ ಹಣದೊಂದಿಗೆ ನಾಪತ್ತೆಯಾದವಳು ಎರಡು ತಿಂಗಳು ಕಳೆದರೂ ಇನ್ನೂ ಪತ್ತೆಯಾಗಿಲ್ಲ! ಬೆಂಗಳೂರಿನ ಅಭಿಷೇಕ ಮತ್ತು ಅರ್ಚನಾ ದಂಪತಿಗಳ ಪುತ್ರಿಯಾದ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಅನುಷ್ಕಾ ತಾನು ಆಧ್ಯಾತ್ಮಿಕ ಮಾರ್ಗ ಶಮನಿಷಂ ನಲ್ಲಿ ಹೆಚ್ಚು ಆಸಕ್ತಿ ಹೊಂದಿರುವುದಾಗಿ ತಂದೆ ತಾಯಿಗಳ ಬಳಿ ಹೇಳಿದ್ಧಳಂತೆ! ಆತ್ಮಗಳ ಜೊತೆ ಸಂಭಾಷಣೆ ನಡೆಸುವ ವಿಧ್ಯೆ ಕಲಿಯಲು ಹಾತೋರೆಯುತ್ತಿದ್ದ ಅನುಷ್ಕಾ ರಾತ್ರಿಯೆಲ್ಲಾ ತನ್ನ ರೂಮಿನ ಬಾಗಿಲು ಹಾಕಿಕೊಂಡು ಯಾರೊಂದಿಗೋ ಮಾತನಾಡುತ್ತಿದ್ದಳಂತೆ! ಇತ್ತೀಚೆಗೆ ಒಬ್ಬಂಟಿಯಾಗಿ ಇರೋದಕ್ಕೆ ಪ್ರಯತ್ನಿಸುತ್ತಿದ್ದ ಮಗಳನ್ನು ತಂದೆತಾಯಿಗಳು ಮಾನಸಿಕ ವೈದ್ಯರ ಬಳಿ ತಪಾಸಣೆಗೆ ಕರೆದುಕೊಂಡು ಹೋಗಿ ಕೌನ್ಸಿಲಿಂಗ್ ಕೂಡ ಮಾಡಿಸಿದ್ದರಂತೇ! ಆದರೂ ತಂದೆ ತಾಯಿಗಳ ಮಾತು ಕೇಳದ ಮಗಳು ಅನುಷ್ಕಾ ತನ್ನ ಮೊಬೈಲ್ ನಲ್ಲಿ ಹಲವಾರು ಅಲೌಕಿಕ ಶಕ್ತಿಗಳ ಬಗ್ಗೆ ಮಾಹಿತಿ ಹುಡುಕುತ್ತಿದ್ದಾರಂತೆ! ಆತ್ಮಗಳ ಜೊತೆ ಸಂಭಾಷಣೆ ಕಲಿಸುವ ಆಧ್ಯಾತ್ಮಿಕ ಪಾಠಮಾಡುವ ವೆಬ್ಸೈಟ್ ಲಿಂಕ್ ಅನ್ನು ಕ್ಲಿಕ್ ಮಾಡಿ ನೋಡಿ ತಲೆಕೆಡಿಸಿಕೊಂಡು ಕುಳಿತಿರುತಿದ್ದಳಂತೆ!




## ಶಾಮನಿಷಂ ಕಮ್ಯೂನಿಟಿ ಬಲವಾಗಿ ಬೆಳೆಯುತ್ತಿದೆ

ಮಾಟ ಮಂತ್ರ, ತಾಂತ್ರಿಕ ವಿಧ್ಯೆ ದೆವ್ವಗಳ ಬಗ್ಗೆ ಗೂಗಲ್ ನಲ್ಲಿ ಸರ್ಚ್ ಮಾಡಿ ಮಾಹಿತಿ ಕಲೆಹಾಕುವ ಕೆಲಸಮಾಡುತ್ತಿದ್ದವಳಿಗೆ ಅಪ್ಪ ಅಮ್ಮಕರೆದು ಬುದ್ಧಿ ಹೇಳಿದ್ದಾರೆ. ಆದರೂ ತನ್ನ ಚಾಳಿ ಬಿಡದ ಅನುಷ್ಕಾ ಶಮನಿಸಂ ಎಂಬ ಆತ್ಮ ಸಂಭಾಷಣೆಯ ಆಧ್ಯಾತ್ಮಿಕ ಪತದ ಕುರಿತು ಆಕರ್ಶಿತಳಾಗಿ 'ನಾನು ಈ ಶಾಮನಿಸಂ ಕಮ್ಯೂನಿಟಿಯನ್ನು ಸೇರಿಕೊಳ್ಳುತ್ತೇನೆ!' ಎಂದು ಹೆತ್ತವರ ಎದುರು ಖಡಕ್ಕಾಗಿಯೇ ಹೇಳಿ ರೂಮಿನ ಬಾಗಿಲು ಹಾಕಿಕೊಂಡಿದ್ದಳು. ಅಭಿಷೇಕ್ ಮತ್ತು ಅರ್ಚನಾ ದಂಪತಿಗಳು ಕೂಡ ಅಧ್ಯಾತ್ಮಿಕ ಚಿಂತನೆಗಳ ಬಗ್ಗೆ ಪಾಠಮಾಡುವ ಅಧ್ಯಯನ ಮಾಡುವವರಾದ್ದರಿಂದ ಮಗಳು ಅನುಷ್ಕಾ ಮೇಲೆ ಈ ವಿಷಯ ಗಾಢವಾದ ಪ್ರಭಾವ ಬೀರುತ್ತದೆ. ಆದ ಕಾರಣದಿಂದಲೇ ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ಆ ಹುಡುಗಿ ಅನುಷ್ಕಾ ಕಾಣದ ಅಲೌಕಿಕ ಶಕ್ತಿಗಳ





ಜಗತ್ತಿನ ಕುರಿತು ಆಕರ್ಶಿತಳಾಗಿ ಯಾರದೋ ಪ್ರಚೋದನೆಗೆ ಒಳಗಾಗಿ ಮನೆ ತೊರೆದಿದ್ದಾಳೆ. ಈಗ ವಿಶ್ವದಾದ್ಯಂತ ಈ ಶಾಮನಿಷಂ ಕಮ್ಯೂನಿಟಿ ಬಲವಾಗಿ ಬೆಳೆಯುತ್ತಿದೆ! ನಮ್ಮದೇ ದೇಶದಲ್ಲಿ ಸಾವಿರಾರು ವರ್ಷಗಳಿಂದ ತಾಂತ್ರಿಕ ವಿಧ್ಯೆ ಹೆಸರಿನಲ್ಲಿ ನಾಗಾ ಸಾಧುಗಳು, ಅಘೋರಿಗಳ, ಮಾಟಗಾರರೆನಿಸಿಕೊಂಡವರ ಸ್ವತ್ತಾಗಿದ್ದ ಈ ಆತ್ಮಸಂಭಾಷಣೆ ವಿಧ್ಯೆಗಳು ಈಗ ಆಧುನಿಕ ಯುಗದಲ್ಲಿ ಅಂತರ್ ಜಾಲದೊಳಗೂ ಪ್ರವೇಶಿಸಿ ತನ್ನ ಆಟ ಮುಂದುವರಿಸಿವೆ! ಬ್ರಿಟನ್ ನಲ್ಲಿ ಪರ್ಯಾಯ ಸಂಸ್ಕೃತಿಯಾಗಿ ಬೆಳೆಯಲು ಪ್ರಯತ್ನಿಸುತ್ತಿರುವ ಈ ಶಾಮನಿಸಂ ಎಂಬ ಅಧ್ಯಾತ್ಮಿಕ ಮಾರ್ಗ ಇಂದು ನೆನ್ನೆಯದಲ್ಲ.

## ಇನ್ನೂ ಆತ್ಮ ಸಂಭಾಷಣೆ ಆಟ ನಿಂತಿಲ್ಲ!

ಜಗತ್ತಿನ ಎಲ್ಲ ಧರ್ಮಗಳ ಒಳಗೂ ಈ ಆತ್ಮ-ಪರಮಾತ್ಮನ ಜಿಜ್ಞಾಸೆ ಹುಟ್ಟಿಬಂದಿದೆ. ಮನುಷ್ಯನನ್ನು ಹೊರತುಪಡಿಸಿ ಈ ಭೂಮಿ ಮೇಲೆ ಬೇರೆಯ ನಕಾರಾತ್ಮಕ ಅಲೌಕಿಕ ಶಕ್ತಿಗಳಿವೆಯೇ ಎಂಬುದರ ಬಗ್ಗೆ ಈಗಲೂ ನಿರಂತರ ಹುಡುಕಾಟದಲ್ಲಿ ಮಾನವ ತೊಡಗಿದ್ದಾನೆ. ಸಾವಿನ ನಂತರದ ಲೋಕಗಳು, ಕಾಲಾನುಕಾಲಕ್ಕೆ ತೆಗೆಯುವ ಸ್ವರ್ಗದ-ನರಕದ ಹೆಬ್ಬಾಗಿಲುಗಳು ಹುಲುಮಾನವನನ್ನು ಕುತೂಹಲದಿಂದ ಆಕರ್ಷಣೆಯಿಂದ ಹಲುಬುವಂತೆ ಮಾಡಿವೆ! ತಾಂತ್ರಿಕ ಸಾದಕರು, ಮಾಟ ಮಂತ್ರ ಭಾರತಕ್ಕೇನೂ ಹೊಸದಲ್ಲಾ. ಸ್ಮಶಾನದಲ್ಲೇ ಸತ್ತವನ ನರಭಕ್ಷಣೆ ನಡೆಸುತಿದ್ದ ಭಾರತದ ಶವ ಸಂಭೋಗಿ ಅಘೋರಿಗಳ ನಾಡು ಇದು. ಆತ್ಮಸಂಭಾಷಣೆ ವಿಧ್ಯೆಗಳ ಹುಡುಕಾಟಗಳು ಸತ್ಯಾಸತ್ಯತೆ ಬಗ್ಗೆ ಹಲವಾರು ಭಿನ್ನ ಅಭಿಪ್ರಾಯಗಳಿವೆ. ವೈಜ್ಞಾನಿಕ ದೃಷ್ಟಿಯಿಂದ ಎಲ್ಲವನ್ನೂ ನೋಡುತ್ತಿರುವ ಈ ಆಧುನಿಕ ಕಾಲಘಟ್ಟದಲ್ಲಿ ಆತ್ಮಕ್ಕೆ ಮುಕ್ತಿ ನೀಡುತ್ತೇವೆನ್ನುವ ಕೆಲವು ಮೂಢ ಜ್ಯೋತಿಷಿಗಳು, ಆಧ್ಯಾತ್ಮಿಕ ಪತದ ಒಣ ಪಂಡಿತರು ಕೈತುಂಬಾ ಕಾಸು ಕಿತ್ತುಕೊಂಡು ಜನರನ್ನು ವಂಚಿಸುತ್ತಾ ಬರುತ್ತಿದ್ದಾರೆ. ಎಷ್ಟೋ ವೈಚಾರಿಕ ಪ್ರಜ್ಞೆಯ ಚಿಂತಕರು ಇವರ ನಕಲಿ ಪವಾಡಗಳನ್ನು ಬಯಲು ಮಾಡುತ್ತಿದ್ದರೂ, ಮೂಢನಂಬಿಕೆಗಳನ್ನು ಬೇಧಿಸುತಿದ್ದರೂ ಈ ಆತ್ಮಸಂಭಾಷಣೆಯ ನಾಟಕಗಳು ನಿಂತಿಲ್ಲ. ಈಗ ಅದು ಆನ್ಲೈನ್ ಕ್ಲಾಸ್ ವರೆಗೂ ವಿಸ್ತರಿಸಿವೆಯಂತೆ! ಸತ್ತವರ ಆತ್ಮವನ್ನು ಬದುಕಿರುವವರ ಮೇಲೆ ತರುತ್ತೇನೆನ್ನುವ ಸಿನಿಮಾ ನಟರಾದ ಪುನೀತ್ ರಾಜಕುಮಾರ್ ಮತ್ತು ಸುಶಾಂತ್ ಸಿಂಗ್ ರಜಪೂತ್. ರವರ ಆತ್ಮಗಳ ಜೊತೆ ಸಂಭಾಷಣೆ ನಡೆಸಿದ್ದೇವೆನ್ನುವ ನಕಲಿ ಗುರೂಜಿಗಳು ಈಗ ಎಲ್ಲಾಕಡೆ ಇದ್ದಾರೆ. ಘೋಸ್ಟ್ ಮೀಟರ್ ಯಂತ್ರಗಳನ್ನು ಬಳಸಿ ಕೊಂಡು ಆತ್ಮಗಳ ಜೊತೆ ಸಂಭಾಷಣೆ ನಡೆಸುವ ವಿಚಿತ್ರ ವಾದಗಳ ಜನಕರೂ ಈಗ ಉದ್ಭವಿಸಿದ್ದಾರೆ! ಪುನರ್ಜನ್ಮದ ಪರಿಕಲ್ಪನೆಯ ಹೆಸರಲ್ಲಿ ನಿಮ್ಮನ್ನು ಹಾಸಿಗೆ ಮೇಲೆ ಅಂಗಾತ ಮಲಗಿಸಿ ಖಾಲಿ ಆಕಾಶ ತೋರಿಸಿ ಕಾಸು ಕೀಳುವ ಕೀಳು ಸ್ವಾಮೀಜಿಗಳು ಈಗ ಮಾಧ್ಯಮಗಳಲ್ಲಿಯೂ ತಮ್ಮ ಜಾಹಿರಾತು ಪ್ರದರ್ಶಿಸಿ ಮಿಂಚುತ್ತಿದ್ದಾರೆ. 'ಪುನರಪಿ ಮರಣಂ.. ಪುನರಪಿ ಜನನಂ' ಎಂಬ ಕವಿ ಸಾಲುಗಳು ಪುನರ್ಜನ್ಮ ಕರ್ಮಫಲವೆಂಬ ಆತ್ಮಸಿದ್ಧಾಂತಗಳು ಇವರ ಹೊಟ್ಟೆ ತುಂಬಿಸುತ್ತಿವೆ.

ಸತ್ತವರ ಆತ್ಮಗಳು ಬದುಕಿರುವವರ ಮೇಲೆ ಬಂದು ಸೇಡು ತೀರಿಸಿಕೊಳ್ಳುವ ಹಾರರ್ ಸಿನಿಮಾಗಳು ಈಗ ಹೊಸ ಟ್ರೆಂಡ್ ಆಗಿ ಎಲ್ಲಾ ಭಾಷೆಗಳ ಬೆಳ್ಳಿಪರದೆಯಲ್ಲೂ ಈಗ ದೆವ್ವ ಪಿಶಾಚಿಗಳದ್ದೇ ಹಾವಳಿ! ಆತ್ಮವನ್ನು ಬೆಂಕಿಯಿಂದ ಸುಡಲಾಗದು, ಕತ್ತಿಯಿಂದ ಕತ್ತರಿಸಲಾಗದು, ನೀರಿನಿಂದ ತೋಯಿಸಲಾಗದು, ಗಾಳಿಯಿಂದ ಅಲುಗಾಡಿಸಲಾಗದು ಎಂಬ ಭಗವತ್ ಗೀತೆಯ ವಾಕ್ಯಗಳನ್ನು ಇಟ್ಟುಕೊಂಡು ಆತ್ಮಕ್ಕೆ ಅತಿಮಾನುಷ ಶಕ್ತಿ ಇದೆ. ಅದು ನಿರಾಕಾರ, ಬಣ್ಣ, ರುಚಿ ವಾಸನೆಯಿಲ್ಲದ್ದು! ಎಂದು ಅಲೌಕಿಕ ಶಕ್ತಿಗಳ ಬಗ್ಗೆ ಇಲ್ಲಸಲ್ಲದ ಉತ್ಪ್ರೇಕ್ಷೆಯ, ವೈಜ್ಞಾನಿಕ ಪುರಾವೆಗಳೇ ಇಲ್ಲದ ಸಿದ್ದಾಂತಗಳನ್ನು ಮಂಡಿಸುತ್ತಾ ಈಗ ಜನರನ್ನು ಆತ್ಮಗಳ ಹೆಸರಿನಲ್ಲಿ ಹೆದರಿಸುತ್ತಾ ಘೋಸ್ಟ್ ಮೀಟರ್ ಯಂತ್ರಗಳನ್ನು ಹಿಡಿದುಕೊಂಡು ಹೊಸ ವ್ಯಾಪಾರ ಸುರುಮಾಡಿದ್ದಾರೆ! ಪ್ರಪಂಚದಾದ್ಯಂತ ಈಗ ಕೊರೋನಾ ವೈರಸ್ ನಿಂದ ಸತ್ತವರ ಅತ್ರಪ್ತ ಆತ್ಮಗಳು ಬೀದಿ ಬೀದಿಗಳಲ್ಲಿ ಅಲೆಯುತ್ತಿವೆ! ಅವುಗಳಿಗೆ ಮುಕ್ತಿ ಕೊಡಿಸದಿದ್ದರೇ ಜನರನ್ನು ಸುಮ್ಮನೆ ಬಿಡಲ್ಲವೆಂದು, ಅದಕ್ಕೆ ಕಾಲಜ್ಞಾನಿ ವೀರಬ್ರಹ್ಮಯ್ಯ, ನಾಸ್ಟ್ರಡಮಸ್ ರ ಮಾತುಗಳನ್ನು ಡೀಕೋಡ್ ಹೆಸರಿನಲ್ಲಿ ಉಲ್ಲೇಖಿಸುತ್ತಾ ಜನರನ್ನು ಹೆದರಿಸಲಾಗುತ್ತಿದೆ! ಈಗ ಎಲ್ಲೆಡೆ ಈ ಆತ್ಮಗಳ ಸಂಭಾಷಣೆಯ ಶಮನಿಸಂ ಎಂಬ ಸಿದ್ದಾಂತ ಬೇರು ಬಿಡುತ್ತಿದೆ.



## ಮೊಬೈಲ್‌ಗಳು ಆತ್ಮಸಂಭಾಷಣೆಗಳಿಗೆ ಕನೆಕ್ಟ್ ಆಗುತ್ತಿವೆ

ಮ್ಯಾಜಿಕ್ ಹೆಸರಿನಲ್ಲಿ ದೇವಮಾನವರಾದ ಬಾಬಾಗಳಿದ್ದ ಈ ನಾಡಿನಲ್ಲಿ ನಮ್ಮ ಮೂಢ ಜನರನ್ನು ಕಾಲಕ್ಕೆ ತಕ್ಕಂತೆ ವಂಚಿಸುತ್ತಾ ಬರುವುದು ಸಹಜವಾದ ವಿಚಾರವಾಗಿದೆ. ನಮ್ಮ ಮಕ್ಕಳು ಈಗ ಈ ಹಾಳು ಕೋವಿಡ್ ಕಾರಣದಿಂದ ಮನೆಯಲ್ಲಿಯೇ ಉಳಿದು ಆನ್ಲೈನ್ ಕ್ಲಾಸ್ ಎಂಬ ಹೊಸ ಟಾಸ್ಕಿಗೇ ಮುಖಮಾಡಿ ಕೈಯಲ್ಲಿ ಮೊಬೈಲ್ ಫೋನ್ ಹಿಡಿದಿದ್ದಾರೆ. ಮಾನಸಿಕವಾಗಿ ವಿದ್ಯಾರ್ಥಿಗಳನ್ನು ಖಿನ್ನತೆಗೆ ದೂಡುತ್ತಿರುವ ಈ



ಆನ್ಲೈನ್ ಕ್ಲಾಸ್ ಗಳಿಂದ ಯುವಕರು ವೀಡಿಯೋ ಗೇಮ್ ಗಳ ಚಟಕ್ಕೆ ಬಲಿಯಾಗುತ್ತಿರುವುದು ದುರಂತ. ಕೆಲವು ವಿದ್ಯಾರ್ಥಿಗಳು ಎರಡು ವರ್ಷಗಳ ಶಾಲೆಯ ವಾತಾವರಣವನ್ನು ಮಿಸ್ ಮಾಡಿಕೊಂಡು ತಲೆಗೆ ವಿಧ್ಯೆ ಹತ್ತದೆ ಹಲವಾರು ಚಟಗಳ ದಾಸರಾಗುತಿದ್ದರಾರೆ. ಹಲವು ಮಕ್ಕಳು ಮೊಬೈಲ್ ಫೋನ್ ಹಿಡಿದು ರೂಮ್ ಸೇರಿಕೊಂಡು ಸಿಕ್ಕ ಸಿಕ್ಕ ವೆಬ್ಸೈಟ್ ಗಳಿಗೆ ಎಡತಾಕಿ ಈ ಶಾಮನಿಸಂ ನಂತ ಹುಚ್ಚಾಟಗಳಿಗೆ ಬದುಕು ಬಲಿ ಕೋಡುತಿದ್ದಾರೆ. ಇತ್ತೀಚೆಗೆ ಒಬ್ಬಂಟಿಯಾಗಿ ಇದ್ದ ಮಕ್ಕಳು ಪರೀಕ್ಷೆಯಲ್ಲಿ ಫೇಲ್ ಆಗುವ ಭಯದಿಂದ ಮನೆಬಿಟ್ಟು ಓಡಿ ಹೋಗಿದ್ದ ಸುದ್ದಿಗಳು ವರದಿಯಾಗಿದ್ದವು. ಈ ಕೊರೋನಾ ಕಾಲಘಟ್ಟದಲ್ಲಿ ನಮ್ಮ ಮಕ್ಕಳನ್ನು ನಾವು ತುಂಬಾ ಎಚ್ಚರಿಕೆಯಿಂದ ಕಣ್ಣಿಟ್ಟು ಕಾಯುತ್ತಿದ್ದರೆ ನಮಗೇ ಲಾಭ. ಕಂಪ್ಯೂಟರು-ಮೊಬೈಲೂ ಈಗ ಆತ್ಮ ಸಂಭಾಷಣೆಗಳಿಗೂ ಕನೆಕ್ಟ್ ಆಗುತ್ತಿವೆ! ಶಾಮನಿಷಂ ಎಂಬ ಅತಿಮಾನುಷ ಶಕ್ತಿಗಳ ಜೊತೆ ಸಂಭಾಷಣೆ ಕಲಿಸುವ ಆನ್ಲೈನ್ ಕ್ಲಾಸುಗಳು ಕೈಬೀಸಿ ಕರೆಯುತ್ತಿವೆ! ಪುರಾತನ ಆಧ್ಯಾತ್ಮಿಕ ಸಂಪ್ರದಾಯವಾದ ಈ ಶಾಮನಿಸಂ ಮಂಗೊಲಿನ್ ಬುಡಕಟ್ಟು ಜನಾಂಗದ ನಂಬಿಕೆಯ ಆಧಾರದ ಮೇಲೆ ನಿಂತಿದೆ. ಒಂದೇ ದೇಹದಲ್ಲಿ ಹಲವು ಆತ್ಮಗಳನ್ನು ಆಹ್ವಾನಿಸುವ, ಯಾವುದೋ ಆತ್ಮವನ್ನು ಕೈವಶ ಮಾಡಿಕೊಂಡು ಅದರಿಂದ ಕೆಲಸ ಮಾಡಿಸುವ, ವಿಚಿತ್ರ ಆತ್ಮವಿಧ್ಯೆ ಯನ್ನು ಹೇಳಿಕೊಡುತ್ತೇವೆಂದು ಹಲವಾರು ವೆಬ್ಸೈಟ್ ಗಳು ಅಂಗಡಿ ತೆರೆದು ಕುಂತಿವೆ! ಅದ್ರಶ್ಯ ಜಗತ್ತಿನ ಹೆಸರಿನಲ್ಲಿ ಬಿಸಿನೆಸ್ ಮಾಡಲು ಹೊರಟಿರುವ ಈ ಆನ್ಲೈನ್ ಮನೆಹಾಳರು ಬೆಂಗಳೂರಿನ ಅನುಷ್ಕಾಳಂತ ಅಮಾಯಕ ಅಪ್ರಾಪ್ತ ವಯಸ್ಸಿನ ಹುಡುಗಿಯರ ಬ್ರೈನ್ ವಾಶ್ ಮಾಡಿ, ಆ ವಿದ್ಯಾರ್ಥಿನಿಯನ್ನು ಭಾವಪರವಶತೆ ಯಲ್ಲಿ ಮುಳುಗಿಸಿ, ಹಾದಿ ತಪ್ಪಿಸಿ ತಮ್ಮತ್ತ ಸೆಳೆದುಕೊಂಡಿದ್ದಾರೆ. ಮನಃಶಾಸ್ತ್ರದ ವಿಷಯ ಈಗ ಆತ್ಮಗಳ ಬೇಟೆಯಲ್ಲಿ ಹಾದಿ ತಪ್ಪಿದೆ. ಪಿರಮಿಡ್ಡಿನ



ಮಮ್ಮಿ ಗಳ ಪಕ್ಕ, ಸತ್ತ ಶವದ ಬಗಲಲ್ಲಿ ಮಲಗಿ ಆತ್ಮ ಆವಾಗನೆ ನಡೆಸುತ್ತೇವೆನ್ನುವ ಈ ಶಾಮನಿಸಂ ಎಂಬ ಸಾವಿರಾರು ವರ್ಷಗಳ ಹಳೆಯದಾದ ವಿಲಕ್ಷಣ ಬುಡಕಟ್ಟು ಪಂತ ಈಗ ಯೋಗ, ಆಕ್ಯುಪ್ರೆಷರ್ ಆಯುರ್ವೇದಗಳ ರೆಮಿಡಿಸ್ ಹೆಸರಿನಲ್ಲಿ ಮಾನವರ ಮೆಂಟಲ್ ಹಿಲ್ ನೆಸ್ ಗೆ ಆಧ್ಯಾತ್ಮಿಕ ಮಾರ್ಗದ ಮೂಲಕ ಹೀಲಿಂಗ್ ಥೆರಪಿ ನಡೆಸುವ 'ಮಾಡ್ರನ್ ಶಾಮನಿಷಂ!' ಆಗಿ ಬದಲಾಗುತ್ತಿದೆಯಂತೆ. ಈ ಶಾಮನಿಕ್ ಫಾತ್ ಪುರಾತನ ಬುಡಕಟ್ಟುಗಳ ಜೊತೆಗೆ ಈಗ ಆಧುನಿಕ ಯುವಜನರೂ ಪ್ರಯಾಣ ಮಾಡುತ್ತಿದ್ದಾರೆ.ಈ ಶಾಮನಿಸಂ ಬಗ್ಗೆ ಈಗ ಹಲವಾರು ಪುಸ್ತಕಗಳು ಹೊರಬಂದಿವೆ. ಸಂಶೋಧನೆಗಳಾಗಿವೆ. ತಮ್ಮನ್ನು ತಾವು ಶಾಂತಿ ದೂತರು, ಸತ್ಯದ ಆರಾಧಕರು, ಸ್ವಾಂತಂತ್ರ್ಯದ ರಕ್ಷಕರು, ರೋಗ ನಿರೋಧಕರು, ಮಾನವಶಾಸ್ತ್ರಜ್ಞರು ಎಂದು ಕರೆದುಕೊಳ್ಳುವ ಇವರ ನಿಜವಾದ ಉದ್ದೇಶ ಇನ್ನೂ ಜಗತ್ತಿಗೆ ಅರ್ಥವಾಗಿಲ್ಲ. ತಮ್ಮದು ಸ್ಪಿರಿಟ್ ವರ್ಡ್! ಆತ್ಮಗಳ ಜಗತ್ತು! ಇಲ್ಲಿ ಶಾಮನಿಸಂ ವೈಯಕ್ತಿಕವಾಗಿ,ಆಧ್ಯಾತ್ಮಿಕವಾಗಿಭಾವನಾತ್ಮಕವಾಗಿ ಮನುಷ್ಯ ಬೆಳೆಯಲು ಸಹಕಾರಿಯಾಗುತ್ತದೆ. ಪ್ರಜ್ಞೆಯ ವಿಸ್ತರಣೆಯ ಜೊತೆಗೆ, ಆಧುನಿಕ ಮಾನವನ ಖಿನ್ನತೆಗೆ ಮದ್ದನ್ನು ಹೀಲಿಂಗ್ ಥೆರಪಿ ಮೂಲಕ ನೀಡುತ್ತೇವೆ. ಎಂದು ವಿಶ್ವ ಆರೋಗ್ಯ ವಿಜ್ಞಾನ ಜಗತ್ತಿಗೆ ಸವಾಲೆಸೆದಿದ್ದಾರೆ! ಶ್ಮಶಾದಲ್ಲಿ

# ಸಂಶೋಧನೆಗೆ ಹೀಗೊಂದು ಅವಕಾಶ





ಪರಿಶೋಧನೆ

ಡಾ.ಎಸ್.ವೈ.ಸೋಮಶೇಖರ್
ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಾಷ್ಟ್ರೀಯ ಸೇವಾ ಯೋಜನೆ ಅಥವಾ ಎನ್.ಎಸ್.ಎಸ್. ಎಂಬುದು ಕಾಲೇಜು ವಿದ್ಯಾರ್ಥಿಗಳಿಗೆ ಸಾಮಾಜಿಕ ಸೇವೆಯಲ್ಲಿ ತೊಡಗಿಕೊಳ್ಳುವಿಕೆಯ ಅರಿವನ್ನು ಮೂಡಿಸುವ ಮಹತ್ವಾಕಾಂಕ್ಷೆಯ ಯೋಜನೆ. ಇದು ಕೊಠಡಿಗಳ ಮಧ್ಯೆ ಕಲಿಯುವ ವಿದ್ಯೆಯ ಜೊತೆಗೆ ಪರಿಸರ, ಆರೋಗ್ಯ, ಸೇವೆ ಮತ್ತು ಶ್ರಮಸಂಸ್ಕೃತಿಗಳ ಮೂಲಕ ಸಾಮಾಜಿಕ ಮೌಲ್ಯಗಳನ್ನು ಅರ್ಥಮಾಡಿಕೊಳ್ಳುವ ಪ್ರಯೋಗಶಾಲೆ. ಇಂತಹ ಶಿಬಿರವೊಂದರಲ್ಲಿ ಭಾಗವಹಿಸುವ ಅವಕಾಶವೂ ಪದವಿ ವಿದ್ಯಾಭ್ಯಾಸದ ಅವಧಿಯಲ್ಲಿ ನನ್ನದಾಗಿತ್ತು. ಅಲ್ಲಿ ಈ ಮೇಲಿನ ಚಟುವಟಿಕೆಗಳಲ್ಲಿ ತೊಡಗಿದ ಅನುಭವ ಅಪರಿಮಿತವಾದದ್ದು. ಅಂತೆಯೇ ಚಿತ್ರದುರ್ಗ ಬಾಲಕರ ಪದವಿಪೂರ್ವ ವಿದ್ಯಾಲಯವು ಎನ್.ಎಸ್.ಎಸ್. ಶಿಬಿರವನ್ನು 2007ರಲ್ಲಿ ಹದಿನೆಂಟು ಕಿ.ಮೀ. ದೂರದ ನೆರೇನಾಳು ಎಂಬಲ್ಲಿ ಏರ್ಪಡಿಸಿತ್ತು. ಈ ಶಿಬಿರದಲ್ಲಿ ಸ್ಥಳೀಯ ಇತಿಹಾಸ ಕುರಿತು ವಿದ್ಯಾರ್ಥಿಗಳು ಮತ್ತು ಊರಿನ ಜನರಿಗೆ ಉಪನ್ಯಾಸ ನೀಡುವುದಕ್ಕಾಗಿ ಗೆಳೆಯ ಡಾ.ಎಸ್. ತಿಪ್ಪೇಸ್ವಾಮಿ ಆಹ್ವಾನಿಸಿದ್ದರು. ಏನನ್ನು ಕುರಿತು ಹೇಳುವುದು ಎಂದು ಯೋಚಿಸಿ ಉಪನ್ಯಾಸದ ಮುನ್ನಾ ದಿನ ಗ್ರಾಮಕ್ಕೆ ಭೇಟಿನೀಡಿ ಅಲ್ಲಿನ ಎಲ್ಲ ಬಗೆಯ ಚಾರಿತ್ರಿಕ ಕುರುಹುಗಳನ್ನು ಶಿಬಿರಾರ್ಥಿಗಳು ಮತ್ತು ಗ್ರಾಮಸ್ಥರ ನೆರವಿನಿಂದ ದಾಖಲಿಸುತ್ತಾ ಸ್ಥಳ ಪರಿಶೀಲನೆಯನ್ನು ಒಂದು ದಿನದ ಮಟ್ಟಿಗೆ ನಡೆಸಿದೆ. ಒಂದು ಸುಳಿವಂತೂ ಗ್ರಾಮದ ಹೆಸರಿನಲ್ಲೇ ಇತ್ತು. ಅದು ನೆರೇನಾಳು. ಊರಿನ ಹೆಸರಿನಲ್ಲಿದ್ದ ಉತ್ತರಪದವಾದ 'ಹಾಳು' ಎಂಬ ಪದವು ನನ್ನ ಗಮನ ಸೆಳೆದಿತ್ತು. ಇದು ಪ್ರಾಚೀನ ಗ್ರಾಮವೇ ಆಗಿರಬೇಕೆಂಬ ದೃಢಸಂಕಲ್ಪದಿಂದ ಹಿರಿಯರಿಂದ ಸ್ಥಳೀಯ ಮಾಹಿತಿಗಳನ್ನು ಪಡೆದೆ. ಅಲ್ಲದೆ ಅಲ್ಲಿನ ಪ್ರಾಚೀನ ಅವಶೇಷಗಳ ಮಾಹಿತಿಯನ್ನು ಪಡೆದು ಅವಶೇಷಗಳಿಗಾಗಿ ತಡಕಾಡಿದೆ. ಕೊನೆಗೆ ಗ್ರಾಮಕ್ಕೆ ಹೊಂದಿದ ಬೂದುಮಣ್ಣಿನ ಹೊಲಗಳಲ್ಲಿ ಮಡಕೆ–ಕುಡಿಕೆಗಳ ಅವಶೇಷಗಳು ದೊರೆತವು. ಅಲ್ಲದೆ ಊರಿನ ಉತ್ತರಕ್ಕೆ ಹೊಲದಲ್ಲಿ ಮಡಕೆಗಳ ಚೂರುಗಳು ಇದ್ದುದನ್ನು ಕೇಳಿ ತಿಳಿದೆ. ಸಿಕ್ಕ ಅವಶೇಷಗಳನ್ನಾಧರಿಸಿ ಅಂದು ಸಂಜೆಯ ಉಪನ್ಯಾಸದಲ್ಲಿ ನೆರೇನಹಾಳಿನ ಸ್ಥಳೀಯ ಇತಿಹಾಸದ ಸಂಗತಿಗಳನ್ನು ಇತರೆ ಚಾರಿತ್ರಿಕ ವಿಷಯಗಳೊಂದಿಗೆ ಸಮೀಕರಿಸಿ, ಗ್ರಾಮದ ಪ್ರಾಚೀನತೆಯತ್ತ ಗಮನಸೆಳೆದೆ. ಎನ್.ಎಸ್.ಎಸ್. ಶಿಬಿರದ ಕಾರ್ಯಕ್ರಮ ಮತ್ತು ಉಪನ್ಯಾಸಗಳೆಂದರೆ ಶಿಬಿರಾರ್ಥಿಗಳಲ್ಲದೆ ಗ್ರಾಮದ ಸರ್ವಸದಸ್ಯರೂ ಪಾಲ್ಗೊಳ್ಳುವುದು ವಿಶೇಷ. ಶಿಬಿರದ ಚಟುವಟಿಕೆಗಳು ಅರಿವಿನ ಜೊತೆಗೆ ಜನರಿಗೆ ಮನರಂಜನೆಯ ಕಾರ್ಯಕ್ರಮಗಳೇ ಆಗಿದ್ದವು. ಗ್ರಾಮಸ್ಥರೆಲ್ಲರೂ ಸೇರಿದ ಶಿಬಿರದ ಕಾರ್ಯಕ್ರಮದಲ್ಲಿ ನೀಡಿದ ಇತಿಹಾಸಕ್ಕೆ ಸಂಬಂಧಿಸಿದ ನನ್ನ ಉಪನ್ಯಾಸದಲ್ಲಿ ಗ್ರಾಮದ ದೇಗುಲ, ಮೂರ್ತಿಶಿಲ್ಪ, ಶಾಸನ, ಶಿಲಾ ಸಮಾಧಿ, ಮಡಕೆಕುಡಿಕೆಗಳ ಕುರಿತು ಮಾತನಾಡಿದ್ದೆನು. ಅದನ್ನು ಕೇಳಿದ ಗ್ರಾಮಸ್ಥರು ಉಪನ್ಯಾಸ ಮುಗಿದಿದ್ದೇ ತಡ, ನನ್ನ ಬಳಿಗೆ ಬಂದು ನೆರೇನಹಾಳು ಗ್ರಾಮದ ಮೂಲೆಮೂಲೆಯಲ್ಲಿದ್ದ ಹೊಲ, ಬೆಟ್ಟಗುಡ್ಡ, ಹಳ್ಳಕೊಳ್ಳಗಳಲ್ಲಿ ತಾವು ನೋಡಿ, ಕೇಳಿದ ಚಾರಿತ್ರಿಕ ಕುರುಹು ಮತ್ತು ಸ್ಥಳವಿವರವುಳ್ಳ ಸ್ಥಳಪುರಾಣ, ಐತಿಹ್ಯಗಳ ಸುರಿಮಳೆಯನ್ನೇ ಸುರಿಸಿದರು. ಅಲ್ಲಿನ ಶಿಲ್ಪ, ದೇಗುಲ, ವೀರಗಲ್ಲು, ಮಾಸ್ತಿಗಲ್ಲುಗಳನ್ನು, ಹಾಳೂರಿನ ಅವಶೇಷಗಳನ್ನು, ಊರಿನ ಸರಹದ್ದಿನಲ್ಲಿರುವ ಲಿಂಗಮುದ್ರೆ, ವಾಮನಮುದ್ರೆಯುಳ್ಳ ಮೇರೆಗಲ್ಲುಗಳನ್ನು, ಹೊಲಗಳನ್ನು ಹೂಳುವಾಗ ದೊರೆತ ಮಡಕೆಕುಡಿಕೆಗಳ ವಿವರಗಳ ಸರಮಾಲೆಯನ್ನೇ ಉಣಬಡಿಸ ಹತ್ತಿದರು.


ಸಂಶೋಧಕನಿಗೆ ಕ್ಷೇತ್ರಕಾರ್ಯವೆಂಬುದು ಬಹುದೊಡ್ಡ ಸವಾಲಿನ ಸಂಗತಿ. ಸ್ಥಳವನ್ನು ಖುದ್ದಾಗಿ ಭೇಟಿನೀಡಿ ಪರಿಶೀಲಿಸಿ ಅಲ್ಲಿಂದ ಮಾಹಿತಿಯನ್ನು ಸಂಗ್ರಹಿಸುವುದು ಎಷ್ಟು ಕಷ್ಟವೆಂಬುದು ತಿಳಿದ ವಿಷಯವೇ. ಆದರೆ ಇಂತಹ ಎನ್.ಎಸ್.ಎಸ್. ಶಿಬಿರಗಳಲ್ಲಿ ಏರ್ಪಡಿಸಿದ ಉಪನ್ಯಾಸಗಳು ಸಂಶೋಧಕನಿಗೆ ಕೊಡುವ ಮಾಹಿತಿ ಅಪರಿಮಿತವಾದದ್ದೆನಿಸಿತು. ಕ್ಷೇತ್ರಕಾರ್ಯಕ್ಕೂ ಮುನ್ನ ಊರಿನ ಜನರೊಂದಿಗೆ ನಡೆಸುವ ಇಂತಹ ಸಂವಾದಗಳು ಗ್ರಾಮದ ಸಮಗ್ರ ಇತಿಹಾಸದ ಅನಾವರಣವೇ ಅದಂತಾಯಿತು. ಕ್ಷೇತ್ರಕಾರ್ಯಕ್ಕೂ ಮುನ್ನ ಕೈಗೊಳ್ಳುವ ಇಂತಹ ಉಪನ್ಯಾಸಗಳು ಮಾಹಿತಿ ಕ್ರೋಢೀಕರಣದ ಅತ್ಯಂತ ಸರಳ ಮತ್ತು ಅಧಿಕೃತ ಸಂಶೋಧನಾ ಮಾರ್ಗವೆನಿಸಿದ್ದು ಸಹಜವೇ. ಸ್ಥಳೀಯರು ಬೃಹತ್ ಶಿಲಾಯುಗದ ಸಮಾಧಿಗಳನ್ನು ಕರೆದ ಪರಿಭಾಷೆ ಆಶ್ಚರ್ಯವನ್ನು ಉಂಟುಮಾಡಿತು. ಅದುವರೆಗೆ 2500 ವರ್ಷಗಳಷ್ಟು ಹಿಂದಿನ ಬೃಹತ್ ಶಿಲಾಸಮಾಧಿಗಳನ್ನು ಪಾಂಡವರ ಮನೆ, ಮೋರೇರ ಮನೆ, ಕಲ್ಗೋರಿಗಳೆಂದು ಕರೆಯುತ್ತಿದ್ದುದು ಸಾಮಾನ್ಯವಾಗಿತ್ತು. ಆದರೆ ಓದುಬಾರದ ವ್ಯಕ್ತಿಯೊಬ್ಬ ಹಳ್ಳದ ದಂಡೆಯಲ್ಲಿ 'ಕಲ್ಲುಗ್ಚಿಗಳಿವೆ' ಎಂದು ಹೇಳಿದ್ದು ನನ್ನ ಆಸಕ್ತಿಯನ್ನು ಕೆರಳಿಸಿತು. ಕಲ್ಲುಗ್ಚಿ ಪದ ಕೇಳಿದ್ದ ನನಗೆ ಅವುಗಳನ್ನು ನೋಡುವ ತವಕ ಹೆಚ್ಚಾಯಿತು. ಬೆಳಗಾಗುವುದನ್ನೇ ಕಾಯುತ್ತಿದ್ದ ನನಗೆ ಶಿಬಿರದ ನಿರ್ದೇಶಕ ತಿಪ್ಪೇಸ್ವಾಮಿ ಮತ್ತು ಶಿಬಿರಾರ್ಥಿಗಳೊಂದಿಗೆ ಹೊರಟೆವು. ಮರಡಿಹಳ್ಳಿ ರಸ್ತೆಯಲ್ಲಿ ಹಳ್ಳದ ಬಲದಂಡೆಯ ಮೇಲೆ ಬಂಡೆಗಲ್ಲುಗಳ ಸಮೂಹವೇ ಗೋಚರಿಸಿತು. ಅದೂ ವೃತ್ತಾಕಾರದಲ್ಲಿ ಒಪ್ಪವಾಗಿ ಜೋಡಿಸಿಟ್ಟ ಸ್ಥಳೀಯವಾಗಿ ದೊರೆಯುವ ಬೃಹತ್ತಾದ ಕರಿಯ ಬಂಡೆಗಲ್ಲುಗಳು. ಎಲ್ಲೆಂದರಲ್ಲಿ ಹರಡಿದ್ದ ನೂರಾರು ಶಿಲಾಸಮಾಧಿಗಳಿವು. ಅವುಗಳಲ್ಲಿ ಕೆಲವು ಚಿಕ್ಕವೃತ್ತದವು, ಮತ್ತೆಕೆಲವು ದೊಡ್ಡ ವೃತ್ತದವುಗಳಾಗಿದ್ದು. ಆದರೆ ಅವುಗಳಲ್ಲಿ ಮೂರು ವೃತ್ತಾಕಾರದ ಸಮಾಧಿಗಳನ್ನು ತ್ರಿಕೋನಾಕಾರದಲ್ಲಿ ಒಂದಕ್ಕೊಂದು ಅಂಟಿದಂತೆ ಜೋಡಿಸಿಟ್ಟಿದ್ದುದು ವಿಶೇಷವೆನಿಸಿದೆ. ಇವು ಒಂದೇ ಕುಟುಂಬ ಸಮಾಧಿಗಳೇ ಇರಬೇಕು.

ಇವುಗಳನ್ನು ನೋಡಿ ದಾಖಲಿಸುತ್ತಿರುವ ಹೊತ್ತಿನಲ್ಲೇ ಜೊತೆಗಿದ್ದ ವ್ಯಕ್ತಿ ಇದೇ ರೀತಿಯ ಸಮಾಧಿಗಳು ಗುಡ್ಡದ ಬಳಿಯಿರುವುದನ್ನು ತಿಳಿಸಿದ. ಅಲ್ಲದೆ ಊರ ಉತ್ತರಕ್ಕಿರುವ ಹೊಲದಲ್ಲೂ ಬೇಸಾಯ ಮಾಡುವಾಗ ಇಂತಹ ಸಮಾಧಿ ಮತ್ತು ಮಡಕೆಕುಡಿಕೆಗಳು ಸಿಕ್ಕ ದೊಡ್ಡ ವರದಿಯನ್ನೇ ಒಬ್ಬೊಬ್ಬರು ಒಂದೊಂದು ರೀತಿ ಹೇಳಲೆತ್ನಿಸಿದರು. ಇದರಿಂದ ನೆರೇನಹಾಳು ಶಿಲಾಯುಗದ ಬಹುದೊಡ್ಡ ತಾಣವೇ ಇರಬೇಕೆಂದಿನಿಸಿದ್ದು ಆಶ್ಚರ್ಯವಲ್ಲ. ಕಾಕತಾಳೀಯವೆಂಬಂತೆ ತ್ರಿಕೋನಾಕಾರದಲ್ಲಿ ಜೋಡಿಸಿಟ್ಟ ಮೂರು ಸಮಾಧಿಗಳಂತೆ ಮೂರು ದಿಕ್ಕುಗಳಲ್ಲೂ ಸಮಾಧಿ ನೆಲೆಗಳಿರುವುದು ಗಮನಾರ್ಹ. ಈಜಿಪ್ಟಿನ ಪಿರಮಿಡುಗಳಂತೆ ಈ ಸಮಾಧಿಗಳು ನಮ್ಮ ಪ್ರಾಚೀನರ ಪಿರಮಿಡ್ಡುಗಳೇ ಆಗಿವೆ. ಊರಿನ ಮೂರು ದಿಕ್ಕುಗಳಲ್ಲೂ ಮೂರು ಶಿಲಾಸಮಾಧಿಗಳಿದ್ದ ಎಡೆಗಳನ್ನು ಜನರಿಂದ ಗುರುತಿಸಿ ಸ್ವತಃ ಕಣ್ತುಂಬಿ ನೋಡುವ ಮತ್ತು ಕೇಳು ಅವಕಾಶ ನಿಜಕ್ಕೂ ಆಹ್ಲಾದಕರ ಸಂಗತಿಯೇ ಆಗಿತ್ತು. ಆದರೆ ಈ ಮೂರು ಸಮಾಧಿ ನೆಲೆಗಳನ್ನು ಕಣ್ಣಾರ ಕಂಡ ನಮಗೆ ಮತ್ತೊಂದು ಪ್ರಶ್ನೆ ಎದುರಾಯಿತು. ಅದೇಂದರೆ ಗ್ರಾಮದಲ್ಲಿ ಕಂಡುಬಂದ ಮೂರು ನೆಲೆಗಳು ಸಮಾಧಿನೆಲೆಗಳೇ ಆಗಿವೆ. ಆದರೆ ಅವರ ವಾಸಿಸುತ್ತಿದ್ದ ಸ್ಥಳವೆಲ್ಲಿ ಎಂಬುದು. ಕೊನೆಗೆ ಜನರನ್ನು ವಿವಿಧ ರೀತಿಯ ಸೂಚನೆಗಳ ಮೂಲಕ ಅದರ ಮಾಹಿತಿಗಳನ್ನು ನೀಡಿದೆ. ಕೊನೆಗೆ ಈಗ ಇರುವ ಗ್ರಾಮವೇ ಪೂರ್ವಜರ ನೆಲೆ ಎಂಬ ತೀರ್ಮಾನಕ್ಕೆ ಬಂದೆವು. ಆದರೆ ಮೂರು ನೆಲೆಗಳು ಮೂರು ದಿಕ್ಕುಗಳಲ್ಲಿದ್ದು ಅವರೆಲ್ಲರೂ ಒಂದೆಡೆ ಸೇರಲು ಹೇಗೆ ಸಾಧ್ಯ ಎಂದು ಯೋಚಿಸುವಾಗಲೇ ಜೊತೆಯಲ್ಲಿದ್ದ ಹಿರಿಯ ವ್ಯಕ್ತಿ ಹಾಳೂರಿನ ಮತ್ತೊಂದು ನೆಲೆಯನ್ನು ಅನಾವರಣ ಮಾಡಿದ. ಅದೂ ಊರಿನಿಂದ ಎರಡು ಕಿ.ಮೀ. ದೂರದಲ್ಲಿ ಪಾಲವ್ವನಹಳ್ಳಿ ವ್ಯಾಪ್ತಿಗೆ ಸೇರಿದ ನೆಲೆಯಾಗಿತ್ತು. ಅಲ್ಲಿ ಶಿಲಾಯುಗದಿಂದ ಇತ್ತೀಚಿನವರೆಗೂ ಜನರು ಬಾಳಿಬದುಕಿದ್ದುದಕ್ಕೆ ಶಿಲಾಯುಗದ ಬೂದಿದಿಬ್ಬ, ಕಲ್ಲಿನ ಕೊಡಲಿ, ಮಡಕೆ–ಕುಡಿಕೆಗಳಿಂದ ಹಿಡಿದು ವೀರಗಲ್ಲು, ದೇವಾಲಯಗಳವರೆಗೆ ಎಲ್ಲ ಬಗೆಯ ಜನರ ವಾಸ್ತವ್ಯದ ಕುರುಹುಗಳಿದ್ದವು. ಆದರೆ ಇಂದು ಈ ನೆಲೆಯು ರಾಷ್ಟ್ರೀಯ ಹೆದ್ದಾರಿ 4ಕ್ಕೆ ಬೇಕಾದ ಜಲ್ಲಿಕಲ್ಲಿನ ಕ್ವಾರಿಯಾಗಿ ಸಂಪೂರ್ಣ ಧ್ವಂಸಗೊಂಡದ್ದು ವಿಪರ್ಯಾಸ. ನೆಲೆಯ ಇಂದಿನ ಸ್ಥಿತಿ ನೋಡಿದರೆ ಪ್ರಾಚೀನ ಸಂಸ್ಕೃತಿಯೊಂದರ ಹೊಟ್ಟೆಯನ್ನೇ ಬಗೆದಂತಾಗಿದೆ. ಆಧುನಿಕ ಕಾಮಗಾರಿಗಳು ಇಂದು ಪ್ರಾಚೀನ ಕುರುಹುಗಳ ಮೇಲೆ ನಡೆಸುವ ಗಧಾಪ್ರಹಾರಕ್ಕೆ ಇದು ಪ್ರಮುಖ ಸಾಕ್ಷಿಯಾಗಿದೆ.

ಒಟ್ಟಿನಲ್ಲಿ ಇತಿಹಾಸದ ಕೊಂಡಿಗಳನ್ನು ಸ್ಥಳೀಯ ಪರಿಭಾಷೆಯಲ್ಲಿ ಅರ್ಥಮಾಡಿಕೊಳ್ಳಲು, ಸ್ಥಳೀಯ ಚರಿತ್ರೆಯ ಅನಾವರಣಕ್ಕೆ, ಸ್ಥಳೀಯರಲ್ಲಿ ಇತಿಹಾಸದ ಅರಿವನ್ನು ಮೂಡಿಸುವಲ್ಲಿ ಅಲ್ಲದೆ ಭವಿಷ್ಯದ ಇತಿಹಾಸಕಾರರನ್ನು ರೂಪಿಸುವಲ್ಲಿ ಎನ್.ಎಸ್.ಎಸ್. ನಂತಹ ಶಿಬಿರಗಳು ಅಗತ್ಯವೆಂಬುದಂತೂ ಸತ್ಯ.

---

ಆತ್ಮ ಆವಾಗನೆ–ಸಂಭಾಷಣೆಯ ಅಧ್ಯಯನದಲ್ಲಿದ್ದ ಶಾಮನಿಸಂ ಈಗ ಆಧುನಿಕ ಮಾಂತ್ರಿಕರ ಜಾಡಿನಲ್ಲಿ ತನ್ನದೇ ಅಧ್ಯಾಯವನ್ನು ಬರೆಯುತ್ತಿದೆ. ವಿಶ್ವದ ಎಲ್ಲಾ ರಾಷ್ಟ್ರಗಳ ಯುವಜನರನ್ನು,, ಅದರಲ್ಲೂ ವಿದ್ಯಾರ್ಥಿಗಳನ್ನು ಬಲೆಗೆ ಕೆಡವುತ್ತಿದೆ.ಪೌರಾಣಿಕ ಆಚರಣೆಗಳನ್ನು ಮೈಗೂಡಿಸಿಕೊಂಡು ತನ್ನದೇ ವಿಲಕ್ಷಣ ಸಿದ್ಧಾಂತದೊಂದಿಗೆ ಪ್ರಪಂಚದಾದ್ಯಂತ ಮುನ್ನುಗ್ಗುತ್ತಿರುವ  ಈ ಶಾಮನಿಸಂ ಮೂಲ ವಿಶ್ವ ವಿಜ್ಞಾನವನ್ನೂ ತನ್ನೊಳಗೆ ಇದೆ ಎಂದು ಹೇಳಿಕೊಳ್ಳುತ್ತಿದೆ! ಈಗಾಗಲೇ 10ಸಾವಿರ ಆನ್ಲೈನ್ ವಿದ್ಯಾರ್ಥಿಗಳನ್ನು ಹೊಂದಿರುವ ಶಾಮನಿಸಂ ಭೂತ






ಕಳೆದ 50 ವರ್ಷಗಳಲ್ಲಿ ತನ್ನ ಸಾಮ್ರಾಜ್ಯವನ್ನು ವಿಸ್ತರಣೆ ಮಾಡಿಕೊಂಡು ಬರುತ್ತಿದೆ.ಸತ್ತವರ ಆತ್ಮಗಳ ಜೊತೆ ಸಂಭಾಷಣೆ ವಿಧ್ಯೆ ಪ್ರಾಕ್ಟೀಸ್ ಮಾಡುವ ಮಂಗೋಲಿಯನ್, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ, ಇಂಡಿಯಾ, ಸ್ಥಳೀಯ ಅಮೆರಿಕನ್ನರ ಕೆಲವು ಬುಡಕಟ್ಟು ಪೂರ್ವಜರ ಪುರಾತನ ಆಧ್ಯಾತ್ಮಿಕ ಆಚರಣೆಯಾದ ಶಾಮನಿಸಂ ಆ ನಂತರ ಸೈಬೀರಿಯನ್ ಶಾಮನಿಸಂ, ಟಿಬೇಟಿಯನ್ ಶಾಮನಿಸಂ, ಕೊರಿಯನ್ ಶಾಮನಿಸಂ ಹೆಸರಿನಲ್ಲಿಯೂ ಚಾಲ್ತಿಗೆ ಬಂತು. ತೈವಾ ರಿಪಬ್ಲಿಕ್ ಎಂಬ ದೇಶದಲ್ಲಿ ಒಂದೆಡೆ ಸೇರುವ ಈ 'ಶಮನ್' ಗಳು " ಕಾಲ್ ಆಫ್ 13 ಶಮನ್ಸ್_ ಎಂಬ ಹೆಸರಿನಲ್ಲಿ ಹಬ್ಬ ಆಚರಿಸುತ್ತಾರೆ. ಚರ್ಮ ವಾದ್ಯ ಬಾರಿಸುತ್ತಾ, ಹಾಡು ನ್ರತ್ಯ, ಧ್ಯಾನದ ಮುಖೇನ 4 ದಿನಗಳ ಕಾಲ ಅಲ್ಲಿ ತಮ್ಮ ಸಾಂಪ್ರದಾಯಿಕ ಆಚರಣೆಗಳನ್ನು ಕೈಗೊಂಡು, ಆತ್ಮಗಳ ಜೊತೆಗೆ ಮಾತನಾಡಲು ರಾತ್ರಿಗಳಲ್ಲಿ ಪ್ರಯತ್ನಿಸುತ್ತಾರಂತೆ! ಜಗತ್ತಿನ ವಿವಿಧೆಡೆಗಳಿಂದ ಅಲ್ಲಿಗೆ ಆಗಮೀಸುವ ಆಧ್ಯಾತ್ಮಿಕ ನಾಯಕರುಗಳು ಅಲ್ಲಿನ ಸೈಬೀರಿಯನ್ ಪರ್ವತದಲ್ಲಿ ಒಂದೆಡೆ ಸೇರಿ 'ಕೊರುಮ್ ಢಗ್' ಎಂಬ ಹಳ್ಳಿಯ ಬಳಿ ಬ್ರಹ್ಮಾಂಡದ ಚಕ್ರಗಳು ಸೇರುವ ಘಳಿಗೆಯಲ್ಲಿ, ಈ ಶಾಮನಿಸಂ ಆತ್ಮಸಂಭಾಷಣೆಯ ಪೂಜಾ ಪದ್ಧತಿ ನಡೆಯುತ್ತದಂತೆ! ಮೆಕ್ಸಿಕೋ ಗ್ರೀನ್ ಲ್ಯಾಂಡ್, ರಷ್ಯಾ, ಕೋರಿಯಾ, ಮಂಗೋಲಿಯಾ ಕಡೆಗಳಿಂದ ಕಾಲ್ನಡಿಗೆಯಲ್ಲಿ ಆ ಬೆಟ್ಟಕ್ಕೆ ಬಂದು ಸೇರುವ ವಾಮನ್ ಗಳು ಏಷ್ಯಾಖಂಡದ ತುಂಬಾ ಪವರ್ ಫುಲ್ ಪರ್ವತವೆಂದು ನಂಬಿರುವ ತೈವಾ



ರಿಪಬ್ಲಿಕ್ ನ ಕೊರುಮ್ ಡಗ್ ಹಳ್ಳಿಯ ಪರ್ವತದಲ್ಲಿ ಶಾಮಿಕ್ ಮಿಸ್ಟರಿ ಸ್ರಷ್ಟಿಸಲು ಶಮನ್ ಗಳು ರಾತ್ರಿಯೆಲ್ಲಾ ನಿದ್ದೆಗೆಟ್ಟು ಜಪಮಾಡುತ್ತಾರಂತೆ! ಇಂತಹ ವಿಚಿತ್ರ–ವಿಲಕ್ಷಢ ಆತ್ಮವಿಧ್ಯೆಯ ಈ ಶಾಮನಿಸಂ ಭೂತದ ಸೆಳೆತಕ್ಕೆ ನಮ್ಮ ನಾಡಿನ ಹೆಣ್ಣು ಮಕ್ಕಳು ಸಿಕ್ಕು ನಾಪತ್ತೆಯಾಗುತ್ತಿರುವುದು ಆತಂಕಕಾರಿಯಾಗಿದೆ. ಫಿಸಿಕಲ್ ಹೀಲಿಂಗ್ ಹೆಸರಿನಲ್ಲಿ ಹಿಪ್ಪಿ ಸೆಕ್ಸ್ ಸಂಸ್ಕೃತಿ ತಲೆಯೆತ್ತಿರುವ ಅನುಮಾನಗಳೂ ದಟ್ಟವಾಗಿವೆ!

ನಾಯಿ ಬೆಕ್ಕುಗಳೀಗ ಅತೀಂದ್ರೀಯ ಶಕ್ತಿ ಇದೆಯೆಂದು ನಂಬುವ ಮನುಷ್ಯರು, ಆತ್ಮಗಳ ಸಂಭಾಷಣೆಯ ಶೋಕಿಗೆ ಸಾವಿರಾರು ವರ್ಷಗಳಿಂದಲೂ ಪ್ರಯತ್ನಿಸುತ್ತಲೇ ಇದ್ದಾರೆ. ಆದುನಿಕ ಯುಗದಲ್ಲಿ ಆತ್ಮಸಂಭಾಷಣೆ ನಡೆಸಲು ಈಗ ಕಾಲಕ್ಕೆ ತಕ್ಕಂತೆ ಮನುಷ್ಯನ ಕೈಗೆ ಘೋಸ್ಟ್ ಮೀಟರ್ ಯಂತ್ರಗಳು ಬಂದಿವೆ ಅಷ್ಟೇ! ಈ ಜಗತ್ತಿನಲ್ಲಿ  ಹಲವು ನಿಗೂಢಗಳೂ ಇನ್ನೂ ಇವೆ!  ಇದೇ ವಿಸ್ಮಯ ಜಗತ್ತಿನ ಸೌಂದರ್ಯ!

# ಇನ್ನು ರಾಜಕೀಯ ನಾಯಕರ ಪಕ್ಷಾಂತರ ಪರ್ವ ಆರಂಭ

● ವತಿಮ

ರಾಜ್ಯ ವಿಧಾನಸಭೆ ಚುನಾವಣೆಗೆ ಇನ್ನು ಒಂದು ವರ್ಷ ಇದೆ.ಈಗಿನಿಂದಲೇ ಮೂರು ರಾಜಕೀಯ ಪಕ್ಷಗಳು ಚುನಾವಣೆಗೆ ಎಲ್ಲಾ ರೀತಿಯ ಸಿದ್ದತೆಗಳನ್ನು ಮಾಡಿಕೊಳ್ಳುತ್ತಿವೆ. ಇದರ ಭಾಗವಾಗಿಯೇ ಈಗ ಕಾಂಗ್ರೆಸ್ ಮೇಕೆದಾಟು ಯೋಜನೆಗೆ ಆಗ್ರಹಿಸಿ ಪಾದಯಾತ್ರೆ ಕೈಗೊಂಡಿದೆ. ಜೆಡಿಎಸ್ ಇದಕ್ಕೆ ಪರ್ಯಾಯವಾಗಿ ಜನತಾ ಜಲಧಾರೆ ಎಂಬ ಯಾತ್ರೆಯನ್ನು ಕೈಗೊಂಡಿದೆ .

ಆದರೆ ಬಿಜೆಪಿಯಲ್ಲಿ ಯಡಿಯೂರಪ್ಪ ಇಲ್ಲದೆ ಪಕ್ಷ ಅಧಿಕಾರಕ್ಕೆ ಬರುವುದು ಅನುಮಾನ ಎನ್ನುವುದು ಬಹುತೇಕ ನಾಯಕರ ಅಭಿಪ್ರಾಯಗಳಾಗಿವೆ ಈಗ ಸದ್ಯ ಬಿಜೆಪಿಗೆ ಪರ್ಯಾಯ ನಾಯಕನಿಲ್ಲದೆ ಇರುವುದು ಒಂದು ರೀತಿ ಅನಾಥ ಪ್ರಜ್ಞೆ ಕಾಡುತ್ತಿದೆ ಹೀಗಾಗಿ ಹಲವಾರು ನಾಯಕರು ಈಗ ಕೈನತ್ತ ತೆರಳು ಸಿದ್ದರಾಗಿದ್ದಾರೆ.

ಬಹುತೇಕ ಮುಂದಿನ ಎರಡು ತಿಂಗಳಲ್ಲಿ ಹಲವಾರು ನಾಯಕರು ಪಕ್ಷಾಂತರ ಮಾಡಲು ಸಿದ್ದರಾಗಿದ್ದಾರೆ.

ಸಂಕ್ರಾಂತಿ ನಂತರ ಕಾಂಗ್ರೆಸ್ ಹಾಗೂ ಜೆಡಿಎಸ್‌ನಿಂದ ಬಿಜೆಪಿಗೆ, ಬಿಜೆಪಿ ಹಾಗೂ ಜೆಡಿಎಸ್‌ನಿಂದ ಕಾಂಗ್ರೆಸ್‌ಗೆ, ಕಾಂಗ್ರೆಸ್ ಮತ್ತು ಬಿಜೆಪಿಯಿಂದ ಜೆಡಿಎಸ್‌ಗೆ ಒಂದಷ್ಟು ಶಾಸಕರು, ಮುಖಂಡರ ವಲಸೆಗೆ ಮಹೂರ್ತ ನಿಗದಿಯಾಗಿದೆ. ಮೂರೂ ಪಕ್ಷಗಳಲ್ಲಿ ಜಿಗಿತ ಆಗಲಿದೆ. ಇದು ಪಕ್ಷಗಳ ಗೆಲುವಿನ ಲೆಕ್ಕಾಚಾರದ ಮೇಲೆ ಬೀರುವ ಪರಿಣಾಮ ಸಣ್ಣಮಟ್ಟದ್ದೇನಲ್ಲ. ಇದೆಲ್ಲವನ್ನೂ ತಣಿಸಿ ಬಂಡಾಯದ ಬಿಸಿ ತಟ್ಟದಂತೆ ನೋಡಿಕೊಂಡು ಒಳಗೊಳಗೆ ಪ್ರಾರಂಭವಾಗುವ ಸಿಟ್ಟು ಶಮನ ಮಾಡಿ, ಒಳ ಏಟು ಬೀಳದಂತೆ ಜಾಗ್ರತೆ ವಹಿಸಿ ಚುನಾವಣೆ ನಡೆಸುವುದು ಒಂದು ದೊಡ್ಡ ಸವಾಲೇ ಸರಿ.

2023ರ ವಿಧಾನಸಭೆ ಚುನಾವಣೆ ಮಾರ್ಚ್, ಏಪ್ರಿಲ್ ತಿಂಗಳ ಮಧ್ಯಭಾಗದಲ್ಲಿ ನಡೆಯುವ ಸಂಭವವಿದೆ. ಆಗಲೇ ಹಾಲಿ, ಮಾಜಿ ಶಾಸಕರು ಸುರಕ್ಷಿತ ಕ್ಷೇತ್ರಗಳತ್ತ ಚಿತ್ತ ಹರಿಸಿದ್ದಾರೆ. ತತ್ವ, ಸಿದ್ಧಾಂತ ಯಾವುದನ್ನೂ ಲೆಕ್ಕಿಸದೇ ಗೆಲ್ಲುವುದೇ ಮಾನದಂಡವಾಗಿಟ್ಟುಕೊಂಡಿರುವ ಅನೇಕರು ತಮಗೆ ಸುರಕ್ಷಿತ ಎನಿಸಿದ ಪಕ್ಷಗಳತ್ತ ವಲಸೆ ಹೋಗುತ್ತಿದ್ದಾರೆ. ರಾಜಕೀಯ ಪಕ್ಷಗಳ ಕಾರ್ಯಕರ್ತರು, ಸ್ಥಳೀಯ ಮುಖಂಡರು ಮತ್ತು ಜನಪ್ರತಿನಿಧಿಗಳ ಪಕ್ಷಾಂತರ ಪರ್ವ ಜೋರಾಗಿದೆ. ಈ ಬಾರಿ ಅಧಿಕಾರ ಹಿಡಿಯಲೇಬೇಕೆಂದು ಪಣತೊಟ್ಟಿರುವ ಪ್ರತಿಪಕ್ಷ ಕಾಂಗ್ರೆಸ್‌ನತ್ತ ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು ವಲಸೆ ಹೋಗುತ್ತಿದ್ದರೆ, ತೆನೆ ಹೊತ್ತ ಮಹಿಳೆ ಕೂಡ ಅನ್ಯ ಪಕ್ಷಗಳ ಅತೃಪ್ತರಿಗೆ ಗಾಳ ಹಾಕಿದೆ. ಇದ್ದುದ್ದರಲ್ಲೇ ಪ್ರತಿಪಕ್ಷವಾಗಿರುವ ಕಾಂಗ್ರೆಸ್ ಕಡೆ ಬರುವವರ ಸಂಖ್ಯೆ ಹೆಚ್ಚಾಗಿದೆ. ಚುನಾವಣೆ ಇನ್ನು ಒಂದು ವರ್ಷ ಇರುವಾಗಲೇ ಟಿಕೆಟ್ ಖಾತರಿಪಡಿಸಿಕೊಂಡು ಕ್ಷೇತ್ರದಲ್ಲಿ ಮತದಾರರ ಮನಗೆಲ್ಲುವುದು ಇವರ ಉದ್ದೇಶವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಕಡೆ ವಲಸಿಗರ ಸಂಖ್ಯೆ ಹೆಚ್ಚುತ್ತಿದೆಯಾದರೂ ಮುಂದಿನ ದಿನಗಳಲ್ಲಿ ಯಾರ್ಯಾರು, ಯಾವ ಕಡೆ ಹೋಗುತ್ತಾರೆ? ಎಂಬುದನ್ನು ಊಹಿಸಲು ಸಾಧ್ಯವಿಲ್ಲ. ಬಿಜೆಪಿಯಲ್ಲಿ ಎಲ್ಲಾ ಶಾಸಕರಿಗೂ ಟಿಕೆಟ್ ಸಿಗುವ ಸಂಭವವಿದ್ದರೂ ಕೆಲವರು ಸೋಲಿನ ಭೀತಿಯಿಂದಾಗಿ ಕಾಂಗ್ರೆಸ್ ಕಡೆ ಜಿಗಿಯಲು ಹಾತೊರೆಯುತ್ತಿದ್ದಾರೆ. ಚುನಾವಣೆ ಸಮೀಪಿಸುವವರೆಗೂ ಗುಟ್ಟು ರಟ್ಟು ಮಾಡದೆ ಕೊನೆ ಕ್ಷಣದಲ್ಲಿ ಟಿಕೆಟ್ ಖಚಿತವಾಗುತ್ತಿದ್ದಂತೆ ಪಕ್ಷ ಬದಲಿಸುವುದು ಇವರ ಮುಖ್ಯ ಉದ್ದೇಶ. ಜೆಡಿಎಸ್ ಪಕ್ಷಕ್ಕೆ ದೊಡ್ಡ ನಷ್ಟ 2018ರ ವಿಧಾನಸಭೆ ಚುನಾವಣೆಯಲ್ಲಿ ಕಿಂಗ್‌ಮೇಕರ್ ಸ್ಥಾನ ಗಳಿಸಿದ ಜೆಡಿಎಸ್‌ಗೆ ಮುಂಬರುವ ಚುನಾವಣೆಯಲ್ಲಿ ಭಾರೀ ಹೊಡೆತ ಕೊಡುವ ಲಕ್ಷಣಗಳು ಗೋಚರಿಸಿವೆ. 2019ರ ಲೋಕಸಭೆ ಚುನಾವಣೆಯಿಂದ ಆರಂಭವಾಗಿರುವ ದಳಪತಿಗಳ ಅಧಃಪತನ ಈಗಲೂ ಕೂಡ ಮುಂದುವರೆದಿದೆ. ಮಂಡ್ಯದಲ್ಲಿ ಸುಮಲತಾ ಅಂಬರೀಶ್ ವಿರುದ್ಧ ನಿಖಿಲ್ ಕುಮಾರಸ್ವಾಮಿ ಸೋತು ಪಕ್ಷ ಕೈ ಸುಟ್ಟುಕೊಂಡ ನಂತರ ಜೆಡಿಎಸ್‌ಗೆ ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆ ಚುನಾವಣೆವರೆಗೂ ಸಿಹಿಗಿಂತ ಕಹಿಯೇ ಜಾಸ್ತಿಯಾಗಿದೆ. ಪಕ್ಷದ ವರಿಷ್ಠ ದೇವೇಗೌಡ ಒಂದು ಕಡೆಯಾದರೆ, ಅಧಿಕಾರದ ಹಾಪಹಪಿಗೆ ಬಿದ್ದಿರುವ ಕುಮಾರಸ್ವಾಮಿ ತಪ್ಪು ನಿರ್ಧಾರಗಳಿಂದಾಗಿ ಅನೇಕ ಶಾಸಕರು ಬೇರೆ ಬೇರೆ ಪಕ್ಷಗಳತ್ತ ಮುಖ ಮಾಡಿದ್ದಾರೆ. ಈ ಹಿಂದಿನ ಚುನಾವಣೆಯಲ್ಲಿ ಜೆಡಿಎಸ್ ಮೈಸೂರು ಭಾಗದಲ್ಲಿ ಭರ್ಜರಿ ಬೆಳೆ ಬೆಳೆದಿತ್ತು. ಕಾವೇರಿ ಜಲಾನಯನ ತೀರಾ ಪ್ರದೇಶಗಳಲ್ಲೇ ಜೆಡಿಎಸ್ ನಿರೀಕ್ಷೆಗೂ ಮೀರಿದ ಹೆಚ್ಚಿನ ಸ್ಥಾನಗಳನ್ನು ಗಳಿಸಿದ ಪರಿಣಾಮ ಕಾಂಗ್ರೆಸ್ ಲೆಕ್ಕಾಚಾರ ಬುಡಮೇಲಾಗಿ ಅಧಿಕಾರ ಕಳೆದುಕೊಳ್ಳುವಂತಾಯಿತು. ಸಾಲು–ಸಾಲು ನಾಯಕರು ಪಕ್ಷ ಬಿಡುತ್ತಿದ್ದಾರೆ ಇದೀಗ ಜೆಡಿಎಸ್‌ನ ಎಡವಟ್ಟಿನಿಂದಾಗಿ ಆ ಪಕ್ಷದ ಸಾಲು ಸಾಲು ನಾಯಕರು ಜೆಡಿಎಸ್ ಬಿಟ್ಟು ಹೊರಟಿದ್ದಾರೆ. ಈಗಾಗಲೇ ಬಹುತೇಕ ಜೆಡಿಎಸ್‌ನಿಂದ ಸಂಬಂಧ ಕಳೆದುಕೊಂಡಿರುವ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ. ಟಿ. ದೇವೇಗೌಡ, ಟಿ. ನರಸೀಪುರದ ಅಶ್ವಿನ್‌ಕುಮಾರ್, ಪಿರಿಯಾಪಟ್ಟಣದ ಮಹದೇವು, ಅರಕಲಗೂಡಿನ ಎ. ಟಿ. ರಾಮಸ್ವಾಮಿ, ಅರಸೀಕೆರೆ ಶಿವಲಿಂಗೇಗೌಡ, ಬೇಲೂರಿನ ಲಿಂಗೇಶ್ ಸೇರಿದಂತೆ ಅನೇಕರು ದಳಪತಿಗಳಿಗೆ ಶಾಕ್ ನೀಡಲು ಮುಂದಾಗಿದ್ದಾರೆ.

ವಿಶೇಷವೆಂದರೆ ಹಳೆ ಮೈಸೂರು ಭಾಗದಲ್ಲಿ ಜೆಡಿಎಸ್‌ಗೆ ಏಟಿನ ಮೇಲೆ ಏಟು ಕೊಡುತ್ತಿರುವುದು ಕಾಂಗ್ರೆಸ್. ಬಿಜೆಪಿಗೆ ಈ ಭಾಗದಲ್ಲಿ ಹೇಳಿಕೊಳ್ಳುವಂತಹ ನೆಲೆ ಇಲ್ಲ. ಹೀಗಾಗಿ ದಳಪತಿಗಳು ಹಳೆ ಮೈಸೂರಿನಲ್ಲಿ ಸಾಧ್ಯವಾದಷ್ಟು ಹೈಜಾಕ್ ಮಾಡಲು ಮಾಜಿ ಸಿಎಂ ಸಿದ್ದರಾಮಯ್ಯ ಮತ್ತು ಡಿ. ಕೆ. ಶಿವಕುಮಾರ್ ಅಖಾಡಕ್ಕಿಳಿದಿದ್ದಾರೆ. ಹಳೇ ಮೈಸೂರಿನಲ್ಲಿ ಜೆಡಿಎಸ್ ಶಕ್ತಿಯನ್ನು ಕುಂದಿಸಿದರೆ ಸಹಜವಾಗಿ ಅದರ ಲಾಭ ಕಾಂಗ್ರೆಸ್‌ಗೆ ಸಿಗಲಿದೆ ಎಂಬ ಲೆಕ್ಕಾಚಾರಿದಂದಲೇ ಕೈ ಪಡೆ ಜೆಡಿಎಸ್‌ಗೆ ಏಟಿನ ಮೇಲೆ ಏಟು ನೀಡುತ್ತಿದೆ. ಬಿಜೆಪಿಯಲ್ಲೂ ಇದೇ ಕಥೆ ಆಡಳಿತಾರೂಢ ಬಿಜೆಪಿಯಲ್ಲು ಪರಿಸ್ಥಿತಿ ಭಿನ್ನವಾಗಿಲ್ಲ. ಆಪರೇಷನ್ ಕಮಲದಿಂದ ಪಕ್ಷ ತೊರೆದಿದ್ದ ಅನೇಕರು ಮತ್ತೆ ಮಾತೃಪಕ್ಷದತ್ತ ಮುಖ ಮಾಡುವ ಹವಣಿಕೆಯಲ್ಲಿದ್ದಾರೆ. ಎಸ್. ಟಿ. ಸೋಮಶೇಖರ್, ಬೈರತಿ ಬಸವರಾಜ್, ನಾರಾಯಣಗೌಡ, ಬಿ. ಸಿ. ಪಾಟೀಲ್, ಡಾ. ಕೆ. ಸುಧಾಕರ್, ಕೆ. ಗೋಪಾಲಯ್ಯ ಸೇರಿದಂತೆ ಅನೇಕರು ಮತ್ತೆ ಕಾಂಗ್ರೆಸ್‌ನತ್ತ ಮುಖ ಮಾಡುತ್ತಿದ್ದಾರೆ. ಮಾಜಿ ಶಾಸಕ ಎ. ಮಂಜು ಈಗಾಗಲೇ ಕಾಂಗ್ರೆಸ್ ಬಾಗಿಲು ಬಡಿದಿದ್ದಾರೆ.

ಆಪರೇಷನ್ ಕಮಲ ತಂತ್ರ 2008ರ ವಿಧಾನಸಭಾ ಚುನಾವಣೆಯಲ್ಲಿ 110 ವಿಧಾನಸಭಾ ಕ್ಷೇತ್ರಗಳಲ್ಲಿ ಜಯಗಳಿಸಿದ್ದ ಬಿಜೆಪಿ ಸಿದ್ದರಾಮಯ್ಯ ಬಳಸಿದ್ದ ತಂತ್ರವನ್ನೇ ಅನುಸರಿಸಿತ್ತು. ತನ್ನ ಶಾಸಕರ ಬೆಂಬಲದ ನೆಲೆ ವಿಸ್ತರಿಸಿಕೊಳ್ಳಲು, ಜೆಡಿಎಸ್–ಕಾಂಗ್ರೆಸ್ ಶಾಸಕರಿಂದ ರಾಜೀನಾಮೆ ಕೊಡಿಸಿ ಅವರನ್ನು ಬಿಜೆಪಿ ಅಭ್ಯರ್ಥಿಯಾಗಿ ಚುನಾವಣಾ ಅಖಾಡಕ್ಕಿಳಿಸಿತ್ತು. ಇದು ಆಪರೇಷನ್ ಕಮಲ ಎಂದು ಕುಖ್ಯಾತಿ ಪಡೆಯಿತು. ಹೆಚ್ಚೂ ಕಡಿಮೆ 20ಕ್ಕೂ ಹೆಚ್ಚು ಶಾಸಕರು ಆಪರೇಷನ್ ಕಮಲಕ್ಕೆ ಗುರಿಯಾದರು. ಇದು ಪಕ್ಷಾಂತರ ನಿಷೇಧ ಕಾಯಿದೆ ಜಾರಿಗೊಂಡ ನಂತರ ವಿಭಿನ್ನ ರೀತಿಯ ಪಕ್ಷಾಂತರ ಎನ್ನುವ ಗಂಭೀರ ಟೀಕೆಗೆ ಗುರಿಯಾಯಿತು. ಈ ಪಕ್ಷಾಂತರದಲ್ಲಿ ಅಧಿಕ ಸಂಖ್ಯೆಯ ಪಕ್ಷಾಂತರಿಗಳು ಗೆಲುವು ಸಾಧಿಸಿದ್ದರು. 60ರ ದಶಕದ ಉತ್ತರಾರ್ಧದಲ್ಲಿ ಆರಂಭಗೊಂಡ ಪಕ್ಷಾಂತರ ಪರ್ವ, ಪಕ್ಷಾಂತರ ನಿಷೇಧ ಕಾಯಿದೆ ಎನ್ನುವ ಪ್ರಬಲ ಅಂಕುಶದ ನಡುವೆಯೂ ತನ್ನ ಕರಾಳ ಮುಖವನ್ನು ಪ್ರದರ್ಶಿಸುತ್ತಲೇ ಇದೆ. ಇದೆಲ್ಲವನ್ನೂ ಮೂರೂ ಪಕ್ಷಗಳು ಹೇಗೆ ನಿಭಾಯಿಸಲಿವೆ? ಎಂಬುದನ್ನು ಕಾದು ನೋಡಬೇಕಾಗಿದೆ.

---

● 5ನೇ ಪುಟದಿಂದ

# ಪಾದಯಾತ್ರೆ ನಾಯಕರಿಗೆ ಖುಷಿ ಆದರೆ, ಜನರಿಗೆ ಸಂಕಟ..!

ಕೇಂದ್ರ ಸರಕಾರದ ಬಳಿಯಿರುವ ಈ ಯೋಜನೆಯ ಕಡತಕ್ಕೆ ಮೊದಲು ಅಡ್ಡಗಾಲು ಹಾಕಿರುವುದು ತಮಿಳುನಾಡು ಸರಕಾರ.

ಹಸಿರು ನ್ಯಾಯಾಧೀಕರಣದಲ್ಲಿ ಇದೇ ವಿಷಯವನ್ನು ಇಟ್ಟುಕೊಂಡು ತಮಿಳುನಾಡು ಸರಕಾರ

ಕ್ಯಾತೆ ತಗೆಯುವುದರಲ್ಲಿ ಅನುಮಾನವೇ ಇಲ್ಲ. ಅವರಿಗೆ ಈ ಯೋಜನೆಯಿಂದ ನಷ್ಟವಾಗದಿದ್ದರೂ, ರಾಜಕೀಯ ಲಾಭಕ್ಕಾಗಿ ವಿರೋಧಿಸುವುದು ಸಹಜ. ವಿರೋಧಿಸಲೇಬೇಕು. ಅದನ್ನು ಮಾಡುತ್ತಿದೆ. ಸರಕಾರ ಯೋಜನೆ ಕೈಗೆತ್ತಿಕೊಳ್ಳಲು ಸಿದ್ಧವಿದ್ದು, ತಾಂತ್ರಿಕ ಸಮಸ್ಯೆಗಳಿರುವುದರಿಂದ ತಡವಾಗುತ್ತಿದೆ ಎಂದು ಒಪ್ಪಿಕೊಂಡಿರುವಾಗ, ಈ ಯೋಜನೆಗೆ ವೇಗ ಕೊಡಿ ಎಂದು ಒತ್ತಾಯಿಸಲು ಈ ಪಾದಯಾತ್ರೆ ನಡೆಸಬೇಕಿತ್ತೇ? ಈ ಪಾದಯಾತ್ರೆಯಿಂದ ಸುಪ್ರೀಂ ಕೋರ್ಟ್ ತನ್ನ ನಿಲುವನ್ನು ಬದಲಾಯಿಸಿಕೊಂಡಿದ್ದರೆ ಅಥವಾ ಹಸಿರು ನ್ಯಾಯಾಧೀಕರಣ ಒಪ್ಪಿಕೊಂಡಿದ್ದರೆ





ಇಲ್ಲವೇ ಕೇಂದ್ರ ಸರಕಾರ ಕೂಡಲೇ ಗೆಜೆಟೆ ನೊಟಿಫಿಕೇಷನ್ ಹೊರಡಿಸಿದ್ದರೆ ಇದ್ಯಾವುದು ಅಲ್ಲದೇ ತಮಿಳುನಾಡು ಸರಕಾರ ಈ ಯೋಜನೆ ತಮ್ಮ ಅಭ್ಯಂತರವಿಲ್ಲ ಎಂದು ಹೇಳುವುದಾದರೆ ಕರೋನಾ ಸಂಕಷ್ಟದ ಸಮಯ ದಲ್ಲಿಯೂ ಪಾದಯಾತ್ರೆ ಮಾಡುವುದರಲ್ಲಿ ಅರ್ಥವಿತ್ತು.

ಆದರೆ ಇದ್ಯಾವುದು ಆಗುವುದಿಲ್ಲ ಎನ್ನುವುದು ಗೊತ್ತಿದ್ದರೂ ಈ ಆತಂಕದ ಸಮಯದಲ್ಲಿ ಮಾಡುವ ಅವಸರವೇನಿತ್ತು ಎನ್ನುವುದೇ ಅನೇಕರ ಪ್ರಶ್ನೆ. ಈ ಎಲ್ಲ ಸವಾಲುಗಳ ಬಗ್ಗೆ ಕಾಂಗ್ರೆಸ್ ನಾಯಕರಿಗೆ ಗೊತ್ತಿಲ್ಲರಲಿಲ್ಲ ಎಂದಲ್ಲ. ಆದರೆ ಸರಕಾರದ ವಿರುದ್ಧ ಹಳೇ ಮೈಸೂರು ಭಾಗದಲ್ಲಿ ವಿರೋಧಿ ಅಲೆ ಸೃಷ್ಟಿಸಬಹುದು ಹಾಗೂ ಪ್ರತಿಪಕ್ಷವಾಗಿ ಕಾಂಗ್ರೆಸ್ ಐಡೆಂಟಿಟಿಯನ್ನು ಹೇಳುವ ಒಂದೇ ಕಾರಣಕ್ಕೆ ಪಾದಯಾತ್ರೆ ಆರಂಭಿಸಿದ್ದಾರೆ.

ಕಾವೇರಿಗಾಗಿ ಹೋರಾಟ ಮಾಡಿದವರಲ್ಲಿ ಮದಲಿಗರು ದೇವೇಗೌಡರು ಹಾಗಾಗಿ ಆ ಭಾಗದ ಜನರನ್ನು ಹಿಡಿದಿಟ್ಟುಕೊಂಡಿದ್ದರು ಇಲ್ಲಿವರೆಗೂ ಜೆಡಿಎಸ್ ಪಕ್ಷದತ್ತಲೆ ಹೆಚ್ಚು ಆ ಭಾಗದ ಜನರು ಒಲವು ತೋರಿಸುತ್ತಿದ್ದರು ಆದರೆ ಈಗ ಕಾಲ ಬದಲಾಗಿದೆ ಪಕ್ಷದ ನಡೆಗಳು ಬದಲಾಗಿವೆ ಇದೆ ಸಂದರ್ಭವನ್ನು ನೋಡಿಕೊಂಡು ಮಂಡ್ಯ ಮೈಸೂರು ರಾಮನಗರ ಜನರನ್ನು ಕಾಂಗ್ರೆಸ್ ತನ್ನತ್ತ ಸೆಳೆಯುವ ಪ್ರಯತ್ನವೇ ಈ ಪಾದಾಯಾತ್ರೆ ಸಹಜವಾಗಿಯೇ ಈಗ ಜೆಡಿಎಸ್ ಮತಗಳು ಕಾಮಗ್ರೆಸ್‌ಗೆ ಬರುತ್ತವೆ ಎನ್ನುವುದು ಆದರೆ ಡಿಕೆಶಿವಕುಮಾರ್ ಅವರು ಈ  ಪಾದಯಾತ್ರೆ



ಮಾಡದೆ ಆ ಮತಗಳನ್ನು ಪಡೆಯಬಹುದಿತ್ತು ಆದರೆ ಹಾಗೆ ಮತ ಪಡೆಯುವುದು ಮುಖ್ಯವಲ್ಲ ತನ್ನ ನೇತೃತ್ವದಲ್ಲಿ ನಡೆದ ಪಾದಾಯಾತ್ರೆಯಿಂದ ಪಕ್ಷ ಅಧಿಕಾರಕ್ಕೆ ಬಂತು ಎನ್ನುವ ಮೆಸೇಜ್ ಹೈಕಮಾಂಡ್‌ಗೆ ಪಾಸ್ ಆಗಬೇಕು ಆಗ ತಮ್ಮ ನಾಯಕತ್ವವನ್ನು ಯಾರು ವಿರೋಧಿಸಲು ಸಾಧ್ಯವಿಲ್ಲ ಎನ್ನುವ ಲೆಕ್ಕಾಚಾರದಲ್ಲಿ ಈ ಪಾದಾಯಾತ್ರೆ ಆರಂಭವಾಗಿದ್ದು ಈ ಎಲ್ಲ ಸಂಘಟನೆ ಮಾಡಿದ್ದು ಡಿಕೆಶಿಯೇ ಎನ್ನುವುದು  ಅಲ್ಲಿಗೆ ಹೋಗಬೇಕಿದೆ ಅಷ್ಟೆ ಆದರೆ ಡಿ.ಕೆ,ಶಿವಕುಮಾರ್ ಅವರನ್ನು ಅಷ್ಟು ಸುಲಭವಾಗಿ ಸಿಎಂ ಆಗಿ ಬಿಡಲು ಸಾಧ್ಯವಿಲ್ಲ .ಸಿದ್ದರಾಮಯ್ಯ ನ ತಂತ್ರಗಾರಿಕೆಯೆ ಬೇರೆ ಇದೆ ಅವರು ಅಂತ ಸಂದರ್ಭಗಳನ್ನು ಚನ್ನಾಗಿ ಎದುರಿಸಬಲ್ಲ ರಾಜಕೀಯ ತಂತ್ರಗಾರ ಎನ್ನುವುದು ಎಲ್ಲರಿಗೂ ಗೊತ್ತಿದೆ ಹಾಗಾಗಿಯೇ ಸಿದ್ದು ಸದ್ಯ ಪಾದಾಯಾತ್ರೆಯಲ್ಲಿ ಪಾಲ್ಗೊಂಡಿದ್ದಾರೆ ಆದರೆ ಅವರ ತಂತ್ರಗಾರಿಕೆಯೇ ಬೇರೆ..

# ಸಂಗೀತ ಎಂಬ ಒಲುಮೆ ಮತ್ತು ವಿರಸದ ಲೋಕ

ಸ್ಥಿತಿಬಿಂಬ

ಡಾ.ಶಿವಕುಮಾರ್ ಕಂಪ್ಲಿ



ಸಂಗೀತ ಕಿವಿಯ ಮೂಲಕ ನಮ್ಮನ್ನ ಪರಮಾನಂದಗೊಳಿಸುವುದು. ಭಾರತದೊಳಗೆ ಸಂಗೀತ ಚರಿತ್ರೆಯೂ ಮಾನವ ಚರಿತ್ರೆಯಂತೆಯೇ ವಿಕಾಸ ಕ್ರಮವನ್ನ ಅನುಸರಿಸಿದೆ.ನಾದವು ಆದಿಮಾನವನ ಕಾಲದಿಂದಲೇ ಆವಿಷ್ಕರಿಸಲ್ಪಟ್ಟಿತು ನಾದದ ಮೂಲವನ್ನ ಜನರು ಪಶು ಪಕ್ಷಿಗಳಿಂದಲೇ ಕಲಿತರೆಂದು ಹೇಳುತ್ತಾರೆ.ನಿಸರ್ಗ ಮೂಲದಿಂದಲೇ ಸಂಗೀತದ ಸ್ವರಗಳ ಲಯಗಳನ್ನ ಅರಿಯಲಾಗಿದೆ ಎಂದು ಹೇಳಲಾಗಿದೆ. ಸಂಗೀತ ಮನೋರಂಜನೆಯ ಕಲೆಯಾಗಿ ಮಾತ್ರ ಉಳಿಯದೇ ಅದೂ ವಿದ್ವತ್ ಪ್ರದರ್ಶನದ ನಿಲುವಾಗಿಯೂ ಚಲಾವಣೆಯಲ್ಲಿದೆ. ಇಂತಹ ಮಾದರಿಯನ್ನ ವಿದ್ವದ್ ಜನರ ಸಂಗೀತದಿಂದಲೇ ಗುರುತಿಸಲಾಗುತ್ತದೆ.ಕೆಲವರು ಸಂಗೀತವನ್ನ ಮಾರ್ಗ ದೇಶೀ ಎಂದು ಕರೆದು ಮಾರ್ಗವು ಋಷಿಮುನಿಗಳಿಂದ ಗಂಧರ್ವ,ದೇವತೆಗಳಿಂದ ಹಾಡಲ್ಪಟ್ಟಿದ್ದು ಎನ್ನುತ್ತಾರೆ.ಸಂಗೀತ ದೇವ ಸಾಕ್ಷಾತ್ಕಾರಕ್ಕೆ ಮೋಕ್ಷ ಸಾಧನೆಗೆ ವಿಶೇಷ ಶಕ್ತಿಯ ಸಾಕ್ಷಾತ್ಕಾರಕ್ಕೆ ಮೂಲವೆಂದು ಭಾವಿಸಿ ಸಾಧನೆಗಳಲ್ಲಿ ಮುಳುಗುತ್ತಾರೆ.ಅದರಂತೆಯೇ ದೇಶೀ ಸಂಗೀತ ಮಾನವ ಮಾತ್ರದವರಿಂದಲೇ ಹುಟ್ಟಿದ್ದು.ಜನಮನ ರಂಜನೆಗೆ ಮಾತ್ರ ಸೀಮಿತವಾಗಿದ್ದು ಎಂದೂ ಭಾವಿಸುತ್ತಾರೆ.

ಕಲೆಯ ಮೂಲವನ್ನ ನೋಡುವ ಕ್ರಮಯಾವುದು? ಹೊರ ರೂಪಿಯಾದ ಕಲೆಯ ಪರಿಣಾಮ ಮೂಲದಿಂದಲೇ? ಅಥವಾ ಒಳರೂಪಿಯಾದ ಕಲಾವಿದನ ಬದುಕಿನ ಮೂಲಕವೇ? ಪರಿಣಾಮದ ಮೂಲಕ ನೋಡುವುದಾದರೆ ಕಲೆ ಮುಖ್ಯವಾಗುವುದೇ ವಿನಃ ಕಲಾವಿದ ಮುಖ್ಯವಾಗಲಾರ.ಇದನ್ನೇ ಕಲಾ ಮೂಲವೆಂದೂ ಕಲಾ ಪಂಡಿತರು ಕರೆದರೆ ಈ ಬಗೆಯನ್ನ ಜೀವವಿರೋಧಿ ಮೂಲವೆಂದು ಜನಪರರು ಕರೆಯುತ್ತಾರೆ. ಇದಕ್ಕೆ ಕಾರಣ ನಮ್ಮ ಪರಂಪರೆಗಳಲ್ಲಿ ಕಲೆಗಳು ವಿಜೃಂಭಿಸಿವೆಯೇ ವಿನಹ ಕಲಾವಿದರ ಬದುಕಲ್ಲ. ಅದರಲ್ಲೂ ಹಳ್ಳಿಯ ಕಲಾವಿದರೆಂದು ಕರೆಸಿಕೊಳ್ಳುವ ಜನಪದ ಕಲೆಗಾರರು ಯಾರು? ಬಹುತೇಕ ದುಡಿವವರು,ಕೂಲಿಕಾರರು ಮತ್ತು ತಳವರ್ಗದವರು.ರಾಜ ಪ್ರಭುತ್ವಗಳಿಂದ ಪ್ರಜಾ ಪ್ರಭುತ್ವದ ತನಕ ಇವರು ಹರಿದು ಬಂದಿದ್ದರೂ ಇವರ ಬದುಕು ಮಾತ್ರ ಮೂರಾ ಬಟ್ಟೆಯಾಗಿರುವುದು ಗಮನಾರ್ಹ.ತಕ್ಷಣದ ಉದಾಹರಣೆಯನ್ನ ನೋಡಬಹುದಾದರೆ ದರೋಜಿಯ ಬುರ್ರ ಕಥಾ ಈರಮ್ಮ ರಾಜ್ಯ ಪ್ರಶಸ್ತಿ ಪಡೆದರೂ ಕೊನೆಗೂ ಒಂದು ಒಳ್ಳೆ ಮನೆ ಕಾಣಲಿಲ್ಲ. ಜನಪದ, ತತ್ವಪದ, ವಚನ, ಕೀರ್ತನ ಹೀಗೆ ಪುಂಕಾನು ಪುಂಕವಾಗಿ ಹಾಡುತ್ತಿದ್ದ ಹಂಪಿಯ ಲಕ್ಷ್ಮಣದಾಸ ಬೀದಿಯ ಹೆಣವಾಗಿಯೇ ತೀರಿಕೊಂಡರು. ಇವು ಪರಂಪರೆ ಕಲಾವಿದರನ್ನ ಕಾಣುವುದಕ್ಕೆ ಸಿಗುವ ತಕ್ಷಣದ ಉದಾಹರಣೆಗಳು. ಈ ನೆಲೆಯಲ್ಲಿ ಹುಡುಕುತ್ತಾ ಹೋದರೆ ಗ್ರಾಮೀಣ ನಿರಕ್ಷರಿಗಳಾದ ಕಲಾವಿದರ ಬಾಳು ಅಲ್ಪ ಮಾಶಾಸನಕ್ಕೂ ನಿರಂತರ ತಬರನಂತೆ ಅಲೆವ ಗೋಳಿನ ಕಥೆಗಳಂತೆಯೇ ಕಾಣುತ್ತವೆ.ಇವಕ್ಕೆ ವಿರುದ್ಧ ಪದದಂತೆ ನಗರ ಶಾಸ್ತ್ರೀಯ ಕಲಾವಿದರ ಬದುಕು ಯಾಕೆ ಕಾಣುತ್ತದೆ? ತರಮದ ಈ ಕಲಾ ತಾರತಮ್ಯಕ್ಕೆ ಕಾರಣವೇನು?



ಬೇಟೆಗಾರಿಕೆ,ಪಶುಪಾಲನೆ,ಕೃಷಿಯ ನೆಲೆಗಳಲ್ಲಿ ಕಾಣುವ ಜನಪದ ಸಂಗೀತ ಉದ್ದಕ್ಕೂತಮಗಾದ ಶ್ರಮದ ದಣಿವಿನ ಪರಿಹಾರಕ್ಕಾಗಿಯೇ ಹಾಡಿ ಕುಣಿವ ಹಾದಿ ಹಿಡಿದದ್ದನ್ನ ಕಾಣಬಹುದು. ಹುಟ್ಟು ಹಾಕುವಾಗ,ಬಟ್ಟೆ ಒಗೆಯುವಾಗ,ಉಳುವಾಗ,ಒಕ್ಕುವಾಗ,ತೂರುವಾಗ ,ರಾಶಿಹಾಕುವಾಗ,ಕುಟ್ಟುವ,ಬೀಸುವ ಕೆಲಸಗಳ ನಡುವೆ ಇವರ ಸಂಗೀತದ ಬಹು ಬಗೆಯ ಲಯಗಳನ್ನ ಕಾಣಬಹುದಾಗಿದೆ.ಇವನ್ನ ವಿದ್ವಾಂಸರು ನಿಸರ್ಗ ಮೂಲವೆಂದೂ ಪ್ರಾಕೃತಿಕ ಮೂಲವೆಂದೂ ಕರೆಯುತ್ತಾರೆ.ಮುಸ್ಲಿಂರ ಆಳ್ವಿಕೆ ಭಾರತದಲ್ಲಿ ಆರಂಭವಾದ ನಂತರವೇ ಪರ್ಷಿಯಾ ದೇಶದಿಂದ ಆರ್ಯ ಮೂಲವಾದ ಹಿಂದೂಸ್ಥಾನಿ ಸಂಗೀತವು ಭಾರತಕ್ಕೆ ಪರಿಚಯವಾಯಿತು.

ವಾದ್ಯ ಕಲೆಗಳ ಅಂತಿಮ ಧ್ಯೇಯ ಮಾನಸಿಕ ನೆಮ್ಮದಿಯಾದರೂ ಇವಕ್ಕೆ ದೈವ ಭಕ್ತಿಯ ಸುಖವೂ ತಳುಕು ಹಾಕಿಕೊಂಡಿದೆ.ಆಧ್ಯಾತ್ಮ ಮತ್ತು ಪವಾಡದ ಮೂಲಗಳು ಸಂಗೀತದ ಮೂಲಕ ನಡೆದದ್ದು ಸಂಗೀತ ಎಂಬ ಅಕ್ಷರ ಮೂಲದ ಶಾಸ್ತ್ರೀಯ ನೆಲೆಗಳಿಂದಲೇ.ಮಳೆ ತರಿಸುವ,ಬೆಂಕಿ ಉರಿಸುವ,ಜೀವ ಕಳೆವ ಜೀವ ಉಳಿಸುವ,ಅನೇಕರ ಸಾಧನೆಯ ಕಥೆಗಳು ಈ ಸಂಗೀತದೊಳಗೆ ಕಾಣುತ್ತದೆ ಈ ನೆಲೆಯು ಗುರು ಶೀಷ್ಯತ್ವದ ಬಹುದೊಡ್ಡ ಕಷ್ಟದ ಹಾದಿಯೂ ಆಗಿದೆ. ಆನಂದ ಮೂಲವಾದ ದೇಶಿ ಸಂಗೀತಕ್ಕೆ ಗುರು ಶಿಷ್ಯ ಪರಂಪರೆ ಇರುವುದಾದರೂ ಇದು ಶಾಸ್ತ್ರೀಯ ಸಂಗೀತದಂತೆ ಕಷ್ಟದ ಹಾದಿಯಲ್ಲ. ವೃತ್ತಿಯ ಬಳಗದಿಂದಲೇ ಕಲಿಯ ಬಹುದಾದ ಸುಲಭದ ಹಾದಿ ಇದು. ಜನಪದ ಸಂಗೀತವನ್ನ ಜಾತಿಮೂಲಗಳೆಂದು ಪರಿಗಣಿಸಿ ಅವರು ನಿರಂತರ ಕೂಲಿ ಕಾರ್ಮಿಕರಾಗಿಯೇ ಉಳಿಸುವ ಕಥನದಂತೆಯೇ (ಚೋಮನ ದುಡಿ) ನಮ್ಮ ಎದುರಲ್ಲೇ ಕಂಡರೆ ಶಾಸ್ತ್ರೀಯ ಸಂಗೀತದ ಜೀವನ ಚರಿತ್ರೆಗಳು ಇದಕ್ಕೆ ವಿರುದ್ಧವಾಗಿ ಕೀರ್ತಿ ಹಣ ಗಳಿಕೆಯ ಜನಪ್ರಿಯತೆಯನ್ನ ಪಡೆದ ಕಥನಗಳಂತೆ ಕಾಣುತ್ತವೆ.

ಇದಕ್ಕೆ ಉದಾಹರಣೆಯಂತೆ ಮಾಸ್ತಿಯವರ ಸುಬ್ಬಣ್ಣ ,ತರಾಸು ಅವರ ಹಂಸಗೀತ , ಅನಕೃ ಅವರ ಸಂಧ್ಯಾರಾಗವನ್ನ ನೋಡಬಹುದು.ಆದರೆ ಜನಪದ ಕೂಲಿಕಾರರಾದ ಚೌಡಿಕೆಯವರು,ಜೋಗೇರರು,ವೇಷಗಾರರು, ಕೊಂಡೆ ಮಾಮಗಳು, ತಮ್ಮ ಸಂಗೀತ ವೃತ್ತಿಯಿಂದಲೇ ಸೇವೆಯವರು, ಕೂಲಿಕಾರರೂ, ಬಿಕ್ಷುಕರೂ ಆದ ಘಟನೆಗಳನ್ನ ವರ್ತಮಾನದ ಸಮಾಜವೂ ಅನೇಕ ಉದಾಹರಣೆಗಳನ್ನ ತೋರುತ್ತದೆ. ಜನಪದ ಸಂಗೀತಗಾರರ ಬದುಕು ಸಂಗ್ರಹಿಸಿದವರು ಗೂಗಲ್ ನಲ್ಲಿ ಸಿಗುತ್ತಾರೆ.ಆ ಹಾಡುಗಳನ್ನ ನುಡಿಸುವ ಕಲಾವಿದರ ಬದುಕು ಏನಾಗಿದೆ?ಯಾಕೋ ಏನೋ ಗೂಗಲ್ ಗೂ ಗೊತ್ತಿಲ್ಲ.

ಗ್ರಾಮಗಳ ಒಡಲೊಳಗೆ ವರ್ಗ, ವರ್ಣ, ತಾರತಮ್ಯವಿರುವಂತೆಯೇ ವಾದ್ಯ ಕಲೆಗಳಿಗೂ ಇಂತಹ ತಾರಮ್ಯಗಳಿವೆ.ವಾದ್ಯ ಕಲೆ ದೈವ ಕೇಂದ್ರಿತ ಎನ್ನಬಹುದಾದರೆ ಶೂದ್ರರ ಮತ್ತು ದಲಿತರ ವಾದ್ಯಕಲೆಗಳು ಬಹುತೇಕ ಹಳ್ಳಿ ದೈವಗಳ ಕಥನಗಳನ್ನ ಒಳಗೊಂಡಿವೆ.ಅದರಲ್ಲೂ ಅಲಕ್ಷಿತ ಹೆಣ್ಣು ದೈವ ಪ್ರಧಾನವಾಗಿವೆ.ಈ ಕಲೆಯ ಪ್ರದರ್ಶನಗಳಲ್ಲೂ ಸೂಕ್ಷ್ಮ ಲಿಂಗತಾರತಮ್ಯಗಳೂ ಕಾಣುತ್ತವೆ.ಜನಪದ ಕಲಾ ಪ್ರದರ್ಶನಗಳಲ್ಲಿ ಬಹುತೇಕ  ವಿದೇಶ ಸುತ್ತುವ ಅವಕಾಶ ಗಂಡು ಕಲಾವಿದರಿಗೆ ದೊರಕಿದೆ ಹೆಣ್ಣು ಕಲಾವಿದರಿಗಲ್ಲ ಎಂಬುದೂ ಗಮನಾರ್ಹ.

ಹಲಗೆ,ಡೊಳ್ಳು,ಡಪ್ಪು,ಕೊಳಲು,ಚೌಡಿಕೆ,ಕಹಳೆ,ತಂಬೂರಿ,ಮದ್ದಳೆ ಜಗ್ಗಲಿಗೆ ತಂಬೂರಿ,ಶಂಖ ಜಾಗಟೆ ಮೊದಲಾದ ಶ್ರಮಿಕರ ವಾದ್ಯಗಳಿಗೂ ದುಡಿಯದ ಶಾಸ್ತ್ರೀಯ ಕಲಾಕಾರರ ವಾದ್ಯಗಳಿಗೂ ಭಿನ್ನತೆಗಳಿವೆ.ಶಾಸ್ತ್ರೀಯ ಕಲೆಗಳ ವೀಣೆ,ಡೋಲಕ್, ತಬಲ,ಹಾರ್ಮೋನಿಯಂಗಳು ದುಡಿವ ಜನರಿಂದ ನಿರ್ಮಾಣವಾದರೂ ಇವಕ್ಕೆ ಗೌರವ ಶಾಸ್ತ್ರೀಯ ಕಲೆಗಾರರ ಸ್ಪರ್ಶವಾದಾಗಲೇ.


ಪ್ರಚೀನ ಕಾಲದಿಂದಲೂ ಆದ್ಯತೆಯ ಸ್ಥಾನ ಮಾನಗಳು ಅರಮನೆ ಗುರುಮನೆಗಳಾದಿಯಾಗಿ ಶಾಸ್ತ್ರೀಯ ಕಲೆಗಳಿಗೇ ದಕ್ಕಿವೆ. ಅವು ಸಾಮಾಜಿಕ ಶ್ರೇಷ್ಟತೆಯ ಪ್ರಧಾನ ಭಾಗ ಎನಿಸಿವೆ.  ಪ್ರದರ್ಶನದ ದೃಷ್ಟಿಯಲ್ಲಿ ಜನಪದರ ಕಲೆಗಳು ತಮ್ಮ ಕಲೆಯ ಚೌಕಟ್ಟಿಗೇ ಸೀಮಿತವಾಗಿಲ್ಲ. ಇವು ನಿರಂತರ ಪ್ರಯೋಗ ಶಕ್ತಿಯ ಜೊತೆ ಜೊತೆಗೇ ಪಾರಂಪರಿಕವಾಗಿ ಪ್ರತಿಭಟನೆಯ ಮಾದರಿಗೂ ಬಳಕೆಯಾಗಿವೆ (ಲಾವಣಿಗಳು,ಹಾಡುಗಳು ಸ್ವತಂತ್ರ್ಯ ಸಂಗ್ರಾಮದಲ್ಲಿ ಬಳಕೆಯಾಗಿರುವುದು). ಹಾಗಾಗಿ ಇವು ಉದ್ದಕ್ಕೂ ಸಾಂಸ್ಕೃತಿಕ ಚಹರೆಗಳ ಆಚೆಗೂ ರಾಜಕೀಯ,  ಪರ ವಿರೋದಗಳ ಚಲನಶೀಲ ನಡೆಯಾಗಿಯೂ ಕಾಣಬಲ್ಲವು.

ಜನಪದರ ಪಾರಂಪರಿಕ ಕಲೆಗಳು ಜನ ರಂಜಿಸುವುದು ಮಾತ್ರವಲ್ಲ ಜನರನ್ನ ಉತ್ತೇಜಿಸುತ್ತಾ ತಮ್ಮ ನಾದ ತಾಳ ಲಯಗಳ ಜೊತೆಗೆ ಜನರನ್ನೂ ಒಡನೊಡನೆ ಬೆರಸಿಕೊಳ್ಳುತ್ತವೆ ಹಾಗಾಗಿ ಈ ಕಲೆಗಳು ತಮ್ಮ ಪ್ರದರ್ಶನಗಳಲ್ಲಿ ವ್ಯಕ್ತಿಗಳಿಂದ ಶುರುವಾಗಿ ಅವು ಪ್ರಯೋಗ ಗೊಳ್ಳುತ್ತಾ ಕೊನೆಗೆ ದೊಡ್ಡ ಸಮೂಹಗಳಾಗಿ ಪ್ರಯೋಗಶೀಲಗೊಳ್ಳುತ್ತವೆ. ಶಾಸ್ತ್ರೀಯ ಕಲೆಗಳ ಪ್ರಯೋಗ ಕೆಲವರನ್ನೇ ಒಳಗೊಂಡು  ಪ್ರೇಕ್ಷರನ್ನ ನಿದಿ9ಷ್ಟ ಅಂತರದಲ್ಲಿಟ್ಟೇ ಪ್ರದರ್ಶನಗೊಳ್ಳುತ್ತವೆ.ತಮ್ಮ ಪ್ರಯೋಗದ ಶುರು ಹಾಗೂ ಕೊನೆಗಳಲ್ಲಿ ಅವು ವ್ಯಕ್ತಿ ಪ್ರದಶ9ನವಾಗೇ ಉಳಿದುಕೊಳ್ಳುತ್ತವೆ.

**ವಾದ್ಯ ಕಲೆಗಳ ಮೇಲಿನ ತಿರಸ್ಕಾರ:**

**ಸಂಗೀತದ ಸೆಕ್ಯುಲರ್ ಲೋಕ:** ಸಂಗೀತವು  ಧರ್ಮಾತೀತ ನೆಲೆಯಿಂದ ಹೇಗೆ ಆರ್ಯ ಮತ್ತು ದ್ರಾವಿಡವನ್ನ ಹಿಂದೂ ಮತ್ತು ಮುಸ್ಲಿಂ ಧರ್ಮವನ್ನ ದೇಶ ಮತ್ತು ಪಾಶ್ವಾತ್ಯ ವನ್ನ ಒಂದು ಮಾಡಿದೆ ಎಂಬ ವಿವರಗಳಿಂದ ವಿರಸದ ವಿಷಕ್ಕೆ ಜೀವಸೆಲೆಯ ಅಮೃತದಂತೆ ಕಂಡು ಬಿಡುತ್ತದೆ. ಬೌದ್ಧ,ಜೈನ ಮತ್ತು ವೈದಿಕ ಅವೈದಿಕ ಸಂಗೀತದ ನಂತರ ಭಾರತೀಯರನ್ನ ಬೆಸೆದುಕೊಂಡದ್ದು ಮುಸ್ಲಿಂ ಸಂಗೀತ.1296 ರಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದ ಅಲ್ಲಾ ವುದ್ದೀನ್ ಖಿಲ್ಜಿ ಮಹಾನ್ ಸಂಗೀತ ಪ್ರೇಮಿಯಾಗಿದ್ದ ಈತ ತನ್ನ ದರ್ಬಾರ್ ನಲ್ಲಿ ಅಮೀರ್ ಖುಸ್ರೋ ಎಂಬ ಪಾರ್ಸಿ ಕವಿಗೆ ಆಶ್ರಯ ನೀಡಿದ್ದ.ಭಾರತೀಯ ಸಂಗೀತದಲ್ಲಿ ತನ್ನ ಹೊಸ ರಾಗಗಳಿಂದ ಬದಲಾವಣೆ ತಂದವನೇ ಅಮೀರ್ ಖುಸ್ರು. ಇಂದು ಎಲ್ಲರೂ ನುಡಿಸುವ 'ತಬಲಾ' ಕಂಡು ಹಿಡಿದವನೇ ಅಮೀರ್ ಖುಸ್ರು. ಭಾರತೀಯ ಸಂಗೀತಕ್ಕೆ ಖ್ಯಾಲ್ ಹಾಗೂ ಕವ್ವಾಲಿ ಪದ್ಧತಿಯನ್ನ ಪ್ರಚಾರಕ್ಕೆ ತಂದವನೀತ. ಹುಮಾಯೂನ್ ಕಾಲದಲ್ಲಿ ಪ್ರಚಾರಕ್ಕೆ ಬಂದ ಭಜನ್ ಗಾಯನ ಪ್ರಕಾರವು ಜನಸಾಮಾನ್ಯರನ್ನ ಸಂಗೀತದ ಕಡೆಗೆ ಆಕರ್ಷಿಸಿತು. ಅಕ್ಬರ್ ನ ಕಾಲವನ್ನ ಹಿಂದೂ ಸ್ಥಾನೀ ಸಂಗೀತದ ಸುವರ್ಣ ಯುಗ ಎನ್ನಲಾಗುತ್ತದೆ. ಗ್ವಾಲಿಯರ್ ನ ತಾನ್ ಸೇನ್ ಈತನ ಆಸ್ಥಾನದಲ್ಲಿದ್ದನು. ಸ್ವತಃ ಅಕ್ಬರ್ 'ನಕ್ಕಾರ'ಎಂಬ ವಾದ್ಯವನ್ನ ನುಡಿಸುವಲ್ಲಿ ಪ್ರಾವಿಣ್ಯತೆಯನ್ನ ಪಡೆದಿದ್ದನು. ಆತನ ಮಗ ಜಹಂಗೀರ್ ಅಪರೂಪದ 'ಸಿತಾರ್'ವಾದಕನಾಗಿದ್ದ. ಹಮಾಯೂನನ ಪತ್ನಿ ನೂರ್ ಜಹಾನ್ ಸಂಗೀತ ಜ್ಞಾನವುಳ್ಳ ಕವಯತ್ರಿಯಾಗಿದ್ದಳು. ಈತನ ಆಸ್ಥಾನದಲ್ಲಿ ಶ್ರೇಷ್ಟ ಹಿಂದೂ ಮುಸ್ಲಿಂ ಗಾಯಕರಿದ್ದರು.(ಬಿಲಾಸ್ ಖಾನ್, ಪರವೇಜದಾದ್,ಖುರಂದಾದ್,ಹಮಖಾನ್,ಪತ್ತರ್ ಖಾನ್, ಪಂಡಿತ್ ಸೋಮನಾಥ,ಪಂಡಿತ್ ದಾಮೋದರ) ಜಹಂಗೀರನ ನಂತರ ಬಂದ ಷಹಜಹಾನನೂ ಸಂಗೀತ ಪ್ರೇಮಿಯಾಗಿದ್ದ,ದ್ರುಪದ ಗಾಯನ ಶಾಯಿರಿ, ಭಜನ್ ಗಳು ಈತನಿಗೆ ಅತ್ಯಂತ ಪ್ರಿಯವಾಗಿದ್ದವು. ಈತನ ಕಾಲದಲ್ಲಿ ಶ್ರೇಷ್ಟ ಹಿಂದೂ ಮುಸ್ಲಿಂ ಗಾಯಕರು ಮತ್ತು ನೃತ್ಯಗಾರರಿದ್ದರು.

## ದೀಪ



ದೀಪ ಹಚ್ಚಿಟ್ಟು ಹೋದರು
ನಾ ಬೆಳಗುತ್ತಲೇ ಇರಬೇಕಲ್ಲ

ನನಗೆ ಇಷ್ಟವೋ ಕಷ್ಟವೋ
ಗೊತ್ತಿಲ್ಲ ಬೆಳಗುವುದೊಂದು
ಕರ್ತವ್ಯ

ನನ್ನ ಹಾಡು ನನ್ನ ಮಾತು
ಇನ್ನೇನಿದ್ದರೂ ನೀರವ ಮೌನ

ಅರಿಶಿನದಲ್ಲಿ ಅದ್ದಿದ ಕೈಯ ಹಸಿ
ಒಣಗುವುದಕ್ಕಿನ್ನೂ ಸಮಯವಿದೆ

ಮುಡಿದ ಮಲ್ಲಿಗೆಯ ಪರಿಮಳ
ಇನ್ನೂ ಸುಳಿದಾಡುತ್ತಿದೆ ಬಹಳ

ಇತರರ ಸಂತೈಸುವ ಪರಿಯಲ್ಲಿ
ಕೇಳಲಿಲ್ಲ ನನ್ನೆದೆಯ ಪಿಸು ಮಾತು

ಆವರಿಸಿದೆ ಕತ್ತಲು ಪದತಲದಲ್ಲಿ
ಅವರಿವರ ಭಾವಕ್ಕೆ ಬೆಳಕು ಚೆಲ್ಲಿ

ಎಲ್ಲಿಯವರೆಗೆ ಈ ಬೆಳಕು
ನೀಡುವೆ ಎಣ್ಣೆ ತೀರುವವರೆಗೂ

ಬೆಳಗಲೇ ಬೇಕಲ್ಲ ಅದು ಕರ್ತವ್ಯ
ಬೆಳಗುವೆ ಗಾಳಿ ಬೀಸುವವರೆಗೂ

ಕರೆದಿದ್ದಾರಲ್ಲವೇ ನನ್ನನು
ಮನೆಯ ನಂದಾದೀಪ ಗೃಹಿಣಿ
ಎಂದು



•ಡಾ. ಟಿ. ನಿರಂಜನ
ಪ್ರಭು, ಚಿಪ್ಪಿನಕೆರೆ

ಚಿತ್ರದುರ್ಗ

# ಜಿ.ಪಂ ಸಿಇಓ ಅಸಮರ್ಥ ಆಡಳಿತಕ್ಕೆ ಪಂಚಾಯಿತಿಗಳಲ್ಲಿ ಮಿತಿಮೀರಿದ ಭ್ರಷ್ಟಾಚಾರ

● ಹೆಚ್.ಲಕ್ಷ್ಮಣ್.

ಚಿತ್ರದುರ್ಗಜಿಲ್ಲಾ ಪಂಚಾಯಿತಿಯ ಸಿ.ಇ.ಓ. ಡಾ. ನಂದಿನಿದೇವಿಯ ಅಸಮರ್ಥ ಆಡಳಿತ ಎಷ್ಟರ ಮಟ್ಟಿಗೆ ಬಂದುತಲುಪಿದೆ ಎಂದರೆ ಚಳ್ಳಕೆರೆ ತಾಲ್ಲೂಕಿನ ಗ್ರಾಮಪಂಚಾಯಿತಿಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದರಂಪಾಟವು ಬೀದಿ ಬೀದಿಗಳಲ್ಲಿ ನಿಂತು ಮಾತನಾಡಿಕೊಳ್ಳುವಂತಾಗಿದೆ.

ಜಿಲ್ಲಾ ಪಂಚಾಯತ್ ಸಿ.ಇ.ಓ. ಡಾ.ನಂದಿನಿದೇವಿ ಇಲ್ಲಿಗೆ ವಕ್ಕರಿಸಿಕೊಂಡಾಗಿನಿಂದಲೂ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು, ರಸ್ತೆ, ಚರಂಡಿ, ಬೀದಿ ದೀಪಗಳ ಸಮಸ್ಯೆ ದಿನೇ ದಿನೇ ಉಲ್ಭಣಗೊಂಡು ಪಂಚಾಯಿತಿ ಸದಸ್ಯರು ಮತ್ತು ಪಿಡಿಓಗಳ ಮಧ್ಯೆ ಹಾದಿಬೀದಿ ರಂಪಾಟವಾಗಿ ಮಾರ್ಪಟ್ಟಿದೆ.

ಹೊರಗುತ್ತಿಗೆಆಧಾರದ ಮೇಲೆ ಕೆಲಸ ಮಾಡುತ್ತಿರುವ ಹಲವು ಜನ ನೌಕರರು ತಮ್ಮ ಇತಿಮಿತಿಗಳನ್ನು ಮೀರಿ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡುವ ಮೂಲಕ ಜಿಲ್ಲಾ ಪಂಚಾಯಿತಿಯನ್ನೇ ಹರಾಜಿಗಿಟ್ಟವರಂತೆ ನಡೆದುಕೊಳ್ಳುತ್ತಿರುವುದು ಅತಿ ಹೆಚ್ಚಾಗಿ ನಂದಿನಿ ದೇವಿಯವರ ಆಡಳಿತದಲ್ಲಿ ಕಂಡು ಬರುತ್ತಿದೆ. ಹೊರಗುತ್ತಿಗೆಆಧಾರದ ಮೇಲೆ ಕಳೆದ ಹತ್ತು-ಹದಿನೈದು ವರ್ಷಗಳಿಂದ ಕೆಲಸ ಮಾಡುತ್ತಿರುವ ಹಲವು ನೌಕರರು ನಂದಿನಿ ದೇವಿಯ ಸುತ್ತ ಸುತ್ತಿಕೊಂಡಿದ್ದು, ಅವರು ಹೇಳಿದ್ದೇ ಕಾನೂನು ಮಾಡಿದ್ದೇ ಆಡಳಿತ ಎಂಬಂತೆ ನಡೆಯುತ್ತಿದ್ದು, ನಂದಿನಿದೇವಿ ನಾಮಕವಸ್ಥೆ ಸಿ.ಇ.ಓ. ಎಂಬಂತೆಕಾಣುತ್ತಿದ್ದಾರೆ.



ಜಿಲ್ಲಾ ಪಂಚಾಯತ್‌ಕಛೇರಿಯದ್ದೇ ಒಂದುಕಥೆಯಾದರೆ, ಗ್ರಾಮಪಂಚಾಯಿತಿ ಕಛೇರಿಗಳದ್ದೇ ಮತ್ತೊಂದುಕಥೆ.ಪಿ.ಡಿ.ಓ., ಇ.ಓ., ಕಾರ್ಯದರ್ಶಿ, ಬಿಲ್ ಕಲೆಕ್ಟರ್, ಹೀಗೆ ನಾನಾ ಹುದ್ದೆಗಳಿದ್ದು, ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳ ಮಾತಿಗೆಕಿಮ್ಮತ್ತಿನ ಬೆಲೆ ಇಲ್ಲದಂತೆ ನಡೆದುಕೊಳ್ಳುವುದು ಇಲ್ಲಿ ಸಾಮಾನ್ಯ.ಪಿ.ಡಿ.ಓ. ಹೇಳಿದಂತೆ ಕೇಳಿಸಿಕೊಂಡು ಬರುವ ಪರಿಸ್ಥಿತಿ ಸಿ.ಇ.ಓ. ಅವರದ್ದಾಗಿದೆ.ಕಾನೂನುಗಳು, ಸರ್ಕಾರಿ ಸುತ್ತೋಲೆಗಳು, ಆದೇಶಗಳನ್ನು ಉಲ್ಟಾಪಲ್ಟಾ ಮಾಡುವ ಪಿ.ಡಿ.ಓ.ಗಳು ತಮಗೆ ತಿಳಿದಂತೆ ನಡೆದುಕೊಳ್ಳುತ್ತಾರೆ.ಸರ್ಕಾರಿ ಕಾನೂನುಗಳನ್ನಾಗಲಿ, ಸಿ.ಇ.ಓ. ಆದೇಶಗಳನ್ನಾಗಲಿ ಲೆಕ್ಕಕ್ಕೆ ತೆಗೆದುಕೊಳ್ಳದೇ ಗಾಳಿಗೆ ತೂರುವ ಪ್ರಸಂಗಗಳೇ ಹೆಚ್ಚು, ಚಳ್ಳಕೆರೆ ತಾಲ್ಲೂಕಿನಒಂದೆರೆಡು ಪಂಚಾಯಿತಿಗಳಲ್ಲ, ತಾಲ್ಲೂಕಿನಇಡೀ ಗ್ರಾಮಪಂಚಾಯಿತಿಗಳೇ ಭ್ರಷ್ಟಾಚಾರದ ಕೂಪಗಳಾಗಿ ಕಾಣಬರುತ್ತಿವೆ.

ಗ್ರಾಮಪಂಚಾಯಿತಿಗಳು ಗ್ರಾಮೀಣ ಭಾಗದಜನರಕ್ಷೇಮಾಭಿವೃದ್ಧಿ, ಆರೋಗ್ಯ, ನೀರು, ದೀಪ, ರಸ್ತೆ, ಜನರ ಸಮಸ್ಯೆಗೆ ಸ್ಪಂಧಿಸಿ, ಕೆಲಸ ಮಾಡಬೇಕಾದ ಪಿಡಿಓಗಳು ತಮ್ಮದೆ ದರ್ಬಾರುಗಳನ್ನು ತೋರಿಸಿ, ಅಧಿಕಾರಿಗಳಿಗೆ ದಾರಿತಪ್ಪಿಸಿ, ತಮಗೆ ತೋಚಿದಂತೆ ಕಾನೂನನ್ನು ತಿರುಚಿ ಭ್ರಷ್ಟಚಾರ ಮಾಡತ್ತಿರುವುದುಕಂಡು ಬರುತ್ತಿದೆ.

ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿ ಪಟ್ಟಣ ಪಂಚಾಯಿತಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದಜನರಿಗೆ ನಿವೇಶನ ಮನೆ, ನಿರ್ಮಾಣ ಮಾಡಿಕೊಡಬೇಕಾಗಿತ್ತು, ಆದರೆ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಹಲವಾರು ವರ್ಷಗಳಿಂದ







ಹೋರಾಟ ಮಾಡುತ್ತಿರುವಜನರುಯಾವುದೇ ಸೌಲಭ್ಯಗಳಿಲ್ಲದೇ ನಿರ್ಲಕ್ಷ್ಯಕ್ಕೆ ಒಳಗಾಗಿದೆ.

ತಾಲ್ಲೂಕು ಪಂಚಾಯಿತಿಯ ಇ.ಓ. ಆಗಿದ್ದ ಪ್ರಕಾಶ ಎಂಬ ವ್ಯಕ್ತಿಯು ಭ್ರಷ್ಟಚಾರದ ಸ್ವರೂಪದಂತಿದ್ದರು. ಬೇರೆತಾಲ್ಲೂಕಿನರೈತರು ಮತ್ತು ಹೋರಾಟಗಾರರು, ಪ್ರಕಾಶ್ ಚಳ್ಳಕೆರೆ ಬಿಟ್ಟುತೊಲಗುವವರೆಗೆ ಹೋರಾಟ ಮಾಡುತ್ತಲೇಇದ್ದರು. ಆದಾಗ್ಯೂದಪ್ಪಚರ್ಮದ ಪ್ರಕಾಶ್, ತಾನು ಮಾಡಿದ್ದೇ ಸರಿಎಂಬಂತೆ ನಿರಂತರ ವಸೂಲಿಯಲ್ಲಿ ತೊಡಗಿಸಿಕೊಂಡಿದ್ದ.ಅದಕ್ಕಿಂತಲೂ ಮುಂಚೆ ಚಳ್ಳಕೆರೆ ಇ.ಓ. ಆಗಿದ್ದ ಬಾರಿಕೇರಿ ಎಂಬ ವ್ಯಕ್ತಿ ಭ್ರಷ್ಟಚಾರದಿಂದಾಗಿ ಎ.ಸಿ.ಬಿ. ಬಲೆಗೆ ಬಿದ್ದು, ಜೈಲಿಗೆ ಹೋಗಿ ಬಂದರೂಅಲ್ಲಿನಗ್ರಾಮಪಂಚಾಯಿತಿಯ ಪಿಡಿಓಗಳಿಗೆ ಕನಿಷ್ಟ ಕಾನೂನಿನ ಅರಿವಿದ್ದಂತೆಕಾಣುವುದಿಲ್ಲ.

ಮೊಳಕಾಲ್ಮೂರು, ಚಳ್ಳಕೆರೆ ತಾಲ್ಲೂಕುಗಳಲ್ಲಿ ಇ.ಓ.ಗಳಾಗಿ ಕರ್ತವ್ಯ ನಿರ್ವಹಿಸಿದ್ದ ಪ್ರಕಾಶ್ ಮತ್ತು ಬಾರಿಕೇರಿ ಸಮಾನ ಮನಸ್ಕರುಎಂಬಂತೆಡ್ಯೂಟಿ ಮಾಡಿದವರು.ವಸೂಲಿಯಲ್ಲಿಒಬ್ಬರಿಗಿಂತಒಬ್ಬರು ಮೇಲು. ಹಾಗೆಯೇಜನರಿಂದ ಬೀದಿ-ಬೀದಿಗಳಲ್ಲಿ ಛೀಮಾರಿ ಹಾಕಿಸಿಕೊಂಡು ಚಳ್ಳಕೆರೆ ತಾಲ್ಲೂಕು ಬಿಟ್ಟು ಹೋದವರು.ಇವರ ಪಳ ಉಳಿಕೆಗಳಂತೆ ಇರುವಗ್ರಾಮಪಂಚಾಯಿತಿಯ ಪಿಡಿಓಗಳು ಈಗಲೂ ಸಹ ಪ್ರಕಾಶ ಮತ್ತು ಬಾರಿಕೇರಿಯದೆವ್ವ ಬಂದವರಂತೆ ನಡೆದುಕೊಳ್ಳುವ ಮೂಲಕ ವಸೂಲಿಗೆ ನಿಂತುಕೊಳ್ಳುತ್ತಾರೆ.

ಜಾಜೂರುಗ್ರಾಮಪಂಚಾಯತಿಯತಲೆ ನೋವು: ಚಳ್ಳಕೆರೆ ತಾಲ್ಲೂಕು, ಜಾಜೂರುಗ್ರಾಮಪಂಚಾಯಿತಿಇಡೀ ಚಳ್ಳಕೆರೆ ತಾಲ್ಲೂಕಿನಲ್ಲಿಯೇತಲೆ ನೋವಿನ ಪಂಚಾಯಿತಿ. ಸರ್ಕಾರ ಆಡಳಿತ ಒಂದು ಹೇಳಿದರೆ, ಪಂಚಾಯಿತಿ ಪಿಡಿಓ, ಬಿಲ್ ಕಲೆಕ್ಟರ್‌ಇನ್ನೊಂದು ಹೇಳುತ್ತಾರೆ.ಇಲ್ಲಿ ಬಿಲ್ ಕಲೆಕ್ಟರ್ ಹೇಳಿದ್ದೇ ಆಡಳಿತ, ಮಾಡಿದ್ದೇ ಕಾನೂನು.ಈತ ಎಷ್ಟು ಭ್ರಷ್ಟಅಂದರೆಗ್ರಾಮಪಂಚಾಯಿತಿಯಲ್ಲಿ ಸೋತ ಪಂಚಾಯಿತಿಯಕ್ಯಾಂಡಿಡೇಟನ್ನೇತಂದು ಕೃಷಿ ಕಾಯಕಜೀವಿ ಎಂಬ ನೌಕರಿಗಿಟ್ಟಿಸಿಕೊಟ್ಟಿದ್ದಾನೆಂದರೆ ಎಷ್ಟು ಭ್ರಷ್ಟರಿರಬಹುದೆಂದು ನೀವೇ ಯೋಚಿಸಿ.

ಜಾಜೂರು ಪಂಚಾಯಿತಿಯಿಂದಗ್ರಾಮಕಾಯಕ ಮಿತ್ರ ಹುದ್ದೆಗೆಅರ್ಜಿಕರೆದರೆ 7-8 ಜನ ಆ ಹುದ್ದೆಗೆಅರ್ಜಿ ಸಲ್ಲಿಸಿದರೆ 7-8 ಜನರಅರ್ಜಿಯನ್ನುತನ್ನಜೇಬಿ ಇಳಿಸಿಕೊಂಡಿರುವ ಬಿಲ್ ಕಲೆಕ್ಟರ್ ಕೃಷ್ಣ ಎಂಬ ವ್ಯಕ್ತಿಗ್ರಾಮ ಪಂಚಾಯಿತಿಯಲ್ಲಿಚುನಾವಣೆಯಲ್ಲಿ ಸೋತಶಿಲ್ಪಾ ಎಂಬ ಮಹಿಳೆಯ ಅರ್ಜಿಯನ್ನಅನುಮೋದನೆಗಾಗಿಒಂದೇಅರ್ಜಿಯನ್ನುಜಿಲ್ಲಾ ಪಂಚಾಯಿತಿಗೆ ಕಳುಹಿಸಿಕೊಟ್ಟು, ಇನ್ನೇನು ನೌಕರಿಆಗಿಯೇ ಬಿಟ್ಟಿತುಎಂದುತನ್ನ ಬೆನ್ನು, ತಾನೇತಟ್ಟಿಕೊಂಡುಓಡಾಡುತ್ತಿದ್ದ ಕೃಷ್ಣ, ಎಷ್ಟರ ಮಟ್ಟಿಗೆ ನೀಚ ಎಂದರೆಗ್ರಾಮ ಪಂಚಾಹಯತಿಯ ಎಂಬಿ ಪುಸ್ತಕಗಳಿಗೆ ಕೆಲ ದಾಖಲೆಗಳಿಗೆ ನಕಲಿ ಸಹಿಗಳನ್ನು ಮಾಡಿ, ಲಕ್ಷಾಂತರರೂಪಾಯಿ ಲಪಟಾಯಿಸಿರುವ ಹಲವು ದಾಖಲೆಗಳು ಲಭ್ಯವಿದೆ.

ನರೇಗಾಯೋಜನೆಯಡಿಯಲ್ಲಿಆಯ್ಕೆ ಮಾಡಿಕೊಳ್ಳಬೇಕಾಗಿದ್ದ ಕಾಯಕ ಮಿತ್ರಕಾರ್ಯಕರ್ತನ ಬದಲಾಗಿತಾನೇ ಸ್ವತಃ ನರೇಗಾಯೋಜನೆಯ ವಿವಿಧ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ನರೇಗಾದಿಂದ ಬಂದಂತಹ ಲಕ್ಷಾಂತರ ಹಣವನ್ನುತನ್ನ ಸ್ವಂತಖಾತೆಗೆ ವರ್ಗಾಯಿಸಿಕೊಂಡಿರುವ ಬಿಲ್ ಕಲೆಕ್ಟರ್ ಕೃಷ್ಣ ಇನ್ನೇನು ಹಣತನ್ನಜೇಬಿಗೆ ಸೇರಿತುಎಂದು ಮೀಸೆ ಮೇಲೆ ಕೈ ಹಾಕಬೇಕು ಎನ್ನುವಷ್ಟರಲ್ಲಿ ಮೇಲ್ಪಟ್ಟವರಿಗೆ ಮಾಹಿತಿ ತಿಳಿದು, ಸ್ವತಃಜಾಜೂರು ಗ್ರಾಮಪಂಚಾಯಿತಿಯಅಧ್ಯಕ್ಷರು, ಸದಸ್ಯರೂಗಳೇ ಸ್ವತಃ ಕೃಷ್ಣ ಮೇಲೆ ಜಿಲ್ಲಾ ಪಂಚಾಯಿತಿಗೆದೂರು ಸಲ್ಲಿಸಿ, ಕ್ರಮ ಕೈಗೊಳ್ಳುವಂತೆ ಮನವಿಮಾಡಿಕೊಂಡಾಗ್ಯೂ ಸಹ ಚಳ್ಳಕೆರೆ ತಾಲ್ಲೂಕು ಇ.ಓ. ಮಡುಗಿನ ಬಸಪ್ಪ ಆಗಲೀ, ಅಥವಾಜಿಲ್ಲಾ ಪಂಚಾಯಿತಿ ಸಿ.ಇ.ಓ. ಡಾ.ನಂದಿನಿದೇವಿಯಾಗಲೀ ಈ ಭ್ರಷ್ಟನ ವಿರುದ್ಧ ಕಾನೂನು ಕ್ರಮ ಕೈಗೊಳ್ಳದೇ ಮೌನವಾಗಿರುವುದಕ್ಕೆ ಚಳ್ಳಕೆರೆ ತಾಲ್ಲೂಕಿನ ನಾಗರೀಕರು ಈ ಇಬ್ಬರು ಮೇಲಾಧಿಕಾರಿಗಳ ಬಗ್ಗೆ ಅನುಮಾನ ವ್ಯಕ್ತ ಪಡಿಸುತ್ತಿದ್ದಾರೆ.



ಅದೇಕೋ ಏನೋ ಗ್ರಾಮಪಂಚಾಯಿತಿಯಲ್ಲಿ ಸೋತು ಸುಣ್ಣವಾದಶಿಲ್ಪಾಎಂಬಾಕೆಯನ್ನುಕಾಂಯಕ ಮಿತ್ರ ಹುದ್ದೆಗೆತರುವಎಲ್ಲಾ ಹುನ್ನಾರಗಳು ದಿನೇ ದಿನೇ ಬಯಲಾಗುತ್ತಿದ್ದು, ಕೃಷ್ಣನ ಬಂಡವಾಳ ಬೀದಿ ಪಾಲಾಗುತ್ತಿದೆ. ಕೆಳಹಂತದ ಅಧಿಕಾರಿಗಳ ಲಂಪಟತನ, ವಂಚನೆ, ವಸೂಲಿಕೋರತನಗಳ ಬಗ್ಗೆ ಜಾಗರೂಕರಾಗಬೇಕಾದ ಸಿ.ಇ.ಓ. ನಂದಿನಿದೇವಿಯವರುತಮ್ಮ ಸುತ್ತಕಟ್ಟಿಕೊಂಡ ಹೊರಗುತ್ತಿಗೆ ನೌಕರರ ಸಲಹೆಗಳನ್ನು ಪಡೆದುಕೊಂಡುಆಡಳಿತ ನಡೆಸುತ್ತಿರುವುದೇಇಡೀಜಿಲ್ಲಾ ಪಂಚಾಯಿತಿಯ ಆಡಳಿತ ವ್ಯವಸ್ಥೆಅಸಮರ್ಥವಾಗಿ ನಡೆಸುತ್ತಿದ್ದಾರೆಎನ್ನುವ ಮಾತುಎಲ್ಲಾಕಡೆ ಕೇಳಿ ಬರುತ್ತಿದೆ.

ಗ್ರಾಮ ಪಂಚಾಯಿತಿಯಕಾಯಕ ಮಿತ್ರ ಹುದ್ದೆಯುಆಯಾಗ್ರಾಮಪಂಚಾಯಿತಿ ವ್ಯಾಪ್ತಿಯಅಸಹಾಯಕ, ದುರ್ಬಲ, ಅಂಗವಿಲಕ, ವಿಧವೆಯರು, ಅನಾಥ ಹೆಣ್ಣುಮಕ್ಕಳು ಮತ್ತು ಪುರುಷರಿಗೆ ಹುದ್ದೆ ನೀಡಬೇಕೆಂಬ ನಿಯಮಾವಳಿಗಳಿದ್ದಾಗ್ಯೂ ಅವುಗಳನ್ನು ಗಾಳಿಗೆ ತೂರಿತಮಗೆ ಹತ್ತಿರದವರಾಗಿರುವ ಮಾಜಿಗ್ರಾಮಪಂಚಾಯತಿಯ ಸದಸ್ಯರೊಬ್ಬರ ಪತ್ನಿಶಿಲ್ಪಾಎಂಬುವವರನ್ನುಆಯ್ಕೆ ಮಾಡಿಕೊಳ್ಳುವ ಮೂಲಕ ಕಾಯಕ ಮಿತ್ರ ಹುದ್ದೆಗೆದ್ರೋಹ ಬಗೆದಿದ್ದಾರೆ.

ಚಿತ್ರದುರ್ಗಜಿಲ್ಲಾ ಪಂಚಾಯತಿಅಧಿಕಾರಾವಧಿ ಪೂರ್ಣಗೊಂಡುಇನ್ನುಒಂದೆರಡು ತಿಂಗಳು ಕಳೆದರೆ ವರ್ಷವಾಗುತ್ತಾ ಬರುತ್ತಿದೆ. ಚುನಾಯಿತ ಪ್ರತಿನಿಧಿಗಳ ಲಂಗೂ ಲಗಾಮಿಲ್ಲದಅಧಿಕಾರ ವ್ಯವಸ್ಥೆ ನಡೆಸುತ್ತಿರುವಡಾ.ನಂದಿನಿ ದೇವಿಯವರುತಾವು ಮಾಡಿದ್ದೇ ಆಡಳಿತ ನಡೆಸಿದ್ದೇ ಕಾನೂನು ಎಂಬಂತೆ ನಡೆದುಕೊಳ್ಳುತ್ತಿದ್ದು, ಕೆಳಮಟ್ಟದ ಪಿಡಿಓ ಹೇಳುವಂತಹ ಕಾನೂನುಗಳೇ ವೇದವಾಕ್ಯವೆಂಬಂತೆ ಪಾಲಿಸುವ ನಂದಿನಿದೇವಿಯವರುಜನರ ಬೇಡಿಕೆಗಳನ್ನು, ಮನವಿಗಳನ್ನು ಗಾಳಿಗೆ ತೂರಿ ನಡೆದುಕೊಳ್ಳುತ್ತಿದ್ದಾರೆ. ಇವರ ಆಡಳಿತ ಅಸಮರ್ಥವಾಗಿದೆ ಎಂಬ ಮಾತುಎಲ್ಲಾಕಡೆ ಕೇಳಿಬರುತ್ತಿದೆ. ಜಿಲ್ಲಾ ಪಂಚಾಯಿತಿಗೆ ವಿಶೇಷ ಮೆರಗುಎಂಬಂತೆಅಧಿಕಾರ ನಡೆಸಿದಂತಹ ಜನಪರವಾಗಿ ಕೆಲಸ ಮಾಡಿದಂತಹ ಸತ್ಯಭಾಮಅಂತ ಅಧಿಕಾರಿಗಳು ಇದ್ದ ಸಂದರ್ಭದಲ್ಲಿ ಪಿ.ಡಿ.ಓ., ಇ.ಓ., ಡಿ.ಎಸ್. ಅಂತಹ ಅಧಿಕಾರಿಗಳು ಗಪ್‌ಚುಪ್‌ಆಗಿದ್ದರುಎಂಬುವುದನ್ನುಇಲ್ಲಿಒಮ್ಮೆ ಸ್ಮರಿಸಬಹುದು.

# ರಾಜಕುಮಾರ್ ಅರ್ಜುನನಾಗಿ ಅಭಿನಯಿಸಿದ ನಾಗಾರ್ಜುನ

ತೆರೆಮರೆ
ಕನ್ನಡ ಚಿತ್ರ ಇತಿಹಾಸ
ಭಾಗ-61


ಅ.ನಾ.ಪ್ರಹ್ಲಾದರಾವ್
ವಾರ್ತಾ ಇಲಾಖೆ, ನಿವೃತ್ತ ಅಧಿಕಾರಿ

ಮಹಾಭಾರತದ ಪ್ರಸಂಗವೊಂದನ್ನು ಆಧರಿಸಿದ, ರಾಜಕುಮಾರ್ಅರ್ಜುನನಾಗಿ ಅಭಿನಯಿಸಿದ ಕಪ್ಪುಬಿಳುಪು ಪೌರಾಣಿಕಚಿತ್ರ'ನಾಗಾರ್ಜುನ' ನಂದಿ ಪಿಕ್ಚರ್ಸ್ ಲಾಂಛನದಲ್ಲಿ 1961ರಲ್ಲಿ ತೆರೆಗೆ ಬಂದಿತು. ಕೆ.ಎನ್.ಮಲ್ಲಿಕಾರ್ಜುನ ನಿರ್ಮಾಣದ ಈ ಚಿತ್ರವನ್ನುಕನ್ನಡದ ಮೊದಲ ಮಾತನಾಡುವಚಿತ್ರ'ಸತಿ ಸುಲೋಚನ' ನಿರ್ದೇಶನ ಮಾಡಿದ ವೈ.ವಿ.ರಾವ್ ನಿರ್ದೇಶಿಸಿದರು. ಆರ್.ಶ್ರೀನಿವಾಸ್ ಹಾಗೂ ಕುಂದಾನಿ ಸತ್ಯನ್ ಸಹಾಯಕ ನಿರ್ದೇಶಕರಾಗಿದ್ದರು.




ರಾಜಕುಮಾರ್, ವರಲಕ್ಷ್ಮಿ, ವಿ.ನಾಗಯ್ಯ, ಸಂಧ್ಯಾ, ಕಾಂತಾರಾವ್, ಕೆ.ಎಸ್.ಅಶ್ವತ್, ಹರಿಣಿ, ನರಸಿಂಹರಾಜು, ರಾಜನಾಲ, ರಾಘವೇಂದ್ರರಾವ್, ರಮಾದೇವಿ ಮುಂತಾದವರುಅಭಿನಯಿಸಿದ ಈ ಚಿತ್ರದಲ್ಲಿ ಮದರಾಸು ಸಹೋದರಿಯರು ನೃತ್ಯ ಪ್ರದರ್ಶನ ನೀಡಿದ್ದರು. ರಾಜಕುಮಾರ್ಅರ್ಜುನನಾಗಿ, ವರಲಕ್ಷ್ಮಿಉಲೂಚಿಯಾಗಿ, ಕಾಂತಾರಾವ್ ಕೃಷ್ಣನಾಗಿ, ಸಂಧ್ಯಾ ಪಾರ್ವತಿಯಾಗಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ತಾಂಡ್ರ ಸುಬ್ರಹ್ಮಣ್ಯಂಅವರಕಥೆ ಆಧರಿಸಿ, ವಿಷ್ಣುವರ್ಧನ್ಅವರತಂದೆ ಹೆಚ್.ಎಲ್.ನಾರಾಯಣರಾವ್ ಸಂಭಾಷಣೆ ರಚಿಸಿದ ಈ ಚಿತ್ರಕ್ಕಾಗಿ ಹುಣಸೂರುಕೃಷ್ಣಮೂರ್ತಿ ಹಾಗೂ ವಿಜಯನಾರಸಿಂಹ ಗೀತೆಗಳನ್ನು ರಚಿಸಿದರು. ರಾಜನ್-ನಾಗೇಂದ್ರ ಸಂಗೀತ ನೀಡಿದ್ದು, ಜೆ.ಲಕ್ಷ್ಮೀನಾರಾಯಣ ಪದ್ಯ ಸಂಗೀತ ಒದಗಿಸಿದರು. 14 ಹಾಡುಗಳನ್ನು ಅಳವಡಿಸಲಾಗಿದ್ದು, ಪಿ.ಲೀಲಾ, ಪಿ.ಸುಶೀಲ, ಜಿಕ್ಕಿ, ರಾಜಲಕ್ಷ್ಮಿಎಸ್.ಜಾನಕಿ, ಸಿ.ಎಸ್.ಸರೋಜಿನಿ, ಪಿ.ಬಿ.ಶ್ರೀನಿವಾಸ್, ಮಾಧವ ಪೆದ್ದಿ ಸತ್ಯಂ, ಪೀಠಾಪುರಂ ನಾಗೇಶ್ವರರಾವ್, ಎಂ.ಎಸ್.ರಾಮರಾವ್, ಶ್ರೀರಾಮುಲು, ರಾಮಚಂದ್ರಶರ್ಮ, ನಾಗೇಂದ್ರ, ಅಪ್ಪಾರಾವ್, ಕೋಮಲ, ಶಿರ್ಕಾಳಿ ಗೋವಿಂದರಾಜನ್ ಹಾಡುಗಳಿಗೆ ದನಿಯಾದರು. ಮೈಸೂರಿನ ಪ್ರೀಮಿಯರ್ ಸ್ಟುಡಿಯೊದಲ್ಲಿಚಿತ್ರದಚಿತ್ರೀಕರಣ ನಡೆಯಿತು. ಮನದೊಳು ತುಂಬಿತುಆನಂದ ಮುಂತಾದ ಹಾಡುಗಳು ಜನಪ್ರಿಯಗೊಂಡಿದ್ದವು.

ಜಿ.ವರಲಕ್ಷ್ಮಿ: ಚಿತ್ರದ ನಾಯಕಿಯಾಗಿ ಅಭಿನಯಿಸಿದ ತೆಲುಗು ಹಾಗೂ ತಮಿಳು ಚಿತ್ರಗಳಲ್ಲಿ ಅಭಿನಯಿಸಿದ ಪ್ರಖ್ಯಾತ ನಟಿ ಜಿ.ವರಲಕ್ಷ್ಮಿ ಈ ಚಿತ್ರದಲ್ಲಿ ಅಭಿನಯಿಸುವ ವೇಳೆಗೆ ತೆಲುಗು ಹಾಗೂ ತಮಿಳಿನಲ್ಲಿ ಸುಮಾರು 40 ಚಿತ್ರಗಳಲ್ಲಿ ನಾಯಕಿಯಾಗಿ ಅಭಿನಯಿಸಿದ್ದರು. 1926ರಲ್ಲಿ ಜನಿಸಿದ ಇವರು ರಂಗಭೂಮಿ ನಟಿಯಾಗಿ ನಟನಾಕ್ಷೇತ್ರಕ್ಕೆ ಬಂದರು. ರಾಜಕೀಯರಂಗದಲ್ಲೂ ಗುರ್ತಿಸಿಕೊಂಡ ವರಲಕ್ಷ್ಮಿ ಎಂ.ಜಿ.ಆರ್ ಅವರನ್ನು ಬೆಂಬಲಿಸಿದ್ದರು. 2006ರಲ್ಲಿ ವರಲಕ್ಷ್ಮಿ ನಿಧನರಾದರು.


ಬಬ್ರುವಾಹನಕಥೆಯಂತೆಯೇ ಸಾಗುವ ನಾಗಾರ್ಜುನಕಥಾನಕದಲ್ಲಿಉಲೂಚಿ ಹಾಗೂ ಅರ್ಜುನರುಗಾಂಧರ್ವ



ವಿವಾಹವಾಗುತ್ತಾರೆ. ಶಾಪದಿಂದಾಗಿ ಅರ್ಜುನ ಉಲೂಚಿಯನ್ನು ಮರೆಯುತ್ತಾನೆ. ನಾಗಾರ್ಜುನ ಇವರೀರ್ವರ ಪುತ್ರನಾಗಿ ಜನಿಸುತ್ತಾನೆ. ಇವನಿಗೆ ಶಿರದಲ್ಲಿ ಶೃಂಗವಿರುತ್ತದೆ. ಪಾಂಡುರಾಜನಿಗೆ ಸ್ವರ್ಗಪ್ರಾಪ್ತಿಯಾಗಲು ಶೃಂಗಶಿರದ ಬಾಲಕನ ಬಲಿ ಅನಿವಾರ್ಯಎಂದು ನಿರ್ಣಯಿಸಲ್ಪಡುತ್ತದೆ.ಅರ್ಜುನಇಂತಹ ಬಾಲಕನ ಹುಡುಕಾಟದಲ್ಲಿಇದ್ದಾಗ ನಾಗಾರ್ಜುನಕಾಣಿಸುತ್ತಾನೆ. ತಂದೆ ಮಗನಿಗೆ ಯುದ್ಧ ನಡೆಯುತ್ತದೆ.ನಾಗಾರ್ಜುನನ ಪರವಾಗಿ ಪಾರ್ವತಿ, ಅರ್ಜುನನ ಪರವಾಗಿ ಕೃಷ್ಣ ನೆರವಿಗೆ ಬರುತ್ತಾರೆ.



ಅರ್ಜುನಸೋತುಅಗ್ನಿ ಪ್ರವೇಶಕ್ಕೆ ಸಿದ್ಧನಾದಾಗ ನಾಗಾರ್ಜುನತಾನೇತಲೆ ಕತ್ತರಿಸಿಕೊಂಡು ಪಾಂಡುರಾಜನ ಸ್ವರ್ಗಾರೋಹಣಕ್ಕೆಕಾರಣನಾಗುತ್ತಾನೆ. ಇದುಚಿತ್ರದಕಥೆ.



## ಸಹಜಅಭಿನಯದ ನಟ ಎಚ್.ರಾಮ ಚಂದ್ರಶಾಸ್ತ್ರಿ

ಮಂಡ್ಯ ಜಿಲ್ಲೆಯ ಮೇಲುಕೋಟೆ ಸಮೀಪದ ಹಳೇಬೀಡಿನಲ್ಲಿ 1905ರ ನವೆಂಬರ್ 2ರಂದು ಜನಿಸಿದ ಎಚ್.ರಾಮಚಂದ್ರಶಾಸ್ತ್ರಿ ಶಾಲೆಯಲ್ಲಿಕಲಿಯುತ್ತಿದ್ದಾಗಲೇ'ಕವಿರತ್ನ ಕಾಳಿದಾಸ' ನಾಟಕವನ್ನು ಪ್ರದರ್ಶಿಸಿ, ಅಭಿನಯಿಸಿದ್ದರು. ರೈಲ್ವೆ ಇಲಾಖೆಯ ಕಾಮಗಾರಿಯಲ್ಲಿ ಕಾರ್ಮಿಕನಾಗಿದುಡಿದರು. ಕನ್ನಡರಂಗಭೂಮಿಯ ಪಿತಾಮಹ ಎ.ವಿ.ವರದಾಚಾರ್ಯರ ಆಶೀರ್ವಾದ ಪಡೆದು ಮುಂದೆ ಹಲವಾರು ವೃತ್ತಿ ನಾಟಕ ಸಂಸ್ಥೆಗಳಲ್ಲಿ ದುಡಿದರು. 1930ರ ದಶಕದಲ್ಲಿಆರ್.ನಾಗೇಂದ್ರರಾವ್ ತಮಿಳಿನಲ್ಲಿ ತಯಾರಿಸಿದ ಭಕ್ತಅಂಬರೀಷಚಿತ್ರದಲ್ಲಿ ಅಭಿನಯಿಸಿದರು. ಶಾಸ್ತ್ರಿಗಳು 1941ರಲ್ಲಿ ಗುಬ್ಬಿ ವೀರಣ್ಣನವರು ತಯಾರಿಸಿದ 'ಸುಭದ್ರ' ಚಿತ್ರದಲ್ಲಿಧರ್ಮರಾಯನ ಪಾತ್ರವಹಿಸುವ ಮೂಲಕ ಕನ್ನಡಚಿತ್ರರಂಗ ಪ್ರವೇಶಿಸಿದರು. ಮತ್ತೆ ಕೆಲವು ತಮಿಳು, ತೆಲುಗು ಚಿತ್ರಗಳಲ್ಲಿ ಅಭಿನಯಿಸಿದ ನಂತರ ಮತ್ತೆರಂಗಭೂಮಿಗೆ ಹಿಂದಿರುಗಿ ಎಚ್.ಎಲ್.ಎನ್.ಸಿಂಹ ಅವರ ಸಿಂಹಾಸ್ ಸೆಲೆಕ್ಟ್ಆರ್ಟಿಸ್ಟ್ತಂಡದಲ್ಲಿ ಪಾತ್ರಗಳನ್ನು ಮಾಡಲಾರಂಭಿಸಿದರು. ಅನಂತರ ಸ್ವಂತ ನಾಟಕ ಸಂಸ್ಥೆಯೊಂದನ್ನು ಸ್ಥಾಪಿಸಿದರು. ಮತ್ತೆಚಿತ್ರರಂಗ ಪ್ರವೇಶಿಸಿ ರಾಜಕುಮಾರ್ ಹಾಗೂ ಕಲ್ಯಾಣಕುಮಾರ ಮೊದಲ ಚಿತ್ರಗಳಾದ 'ಬೇಡರ ಕಣ್ಣಪ್ಪ' ಮತ್ತು'ನಟಶೇಖರ' ಚಿತ್ರಗಳಲ್ಲಿ ಅಭಿನಯಿಸಿದರು.ಚಿತ್ರರಂಗದಲ್ಲೇ ನೆಲೆಸಿ 200ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದರು. 1968-69ರಲ್ಲಿ ರಾಜ್ಯ ನಾಟಕಅಕಾಡೆಮಿ ಪ್ರಶಸ್ತಿ ಪಡೆದರು.1976ರ ಡಿಸೆಂಬರ್ 12ರಂದುಶಾಸ್ತ್ರಿಗಳು ನಿಧನರಾದರು.

## ನಿಮ್ಮ ಮಾತು

### ಪತ್ರಿಕೆ ಗುಣಮಟ್ಟವನ್ನು ಕಾಪಾಡುತ್ತಿದೆ

ಪತ್ರಿಕೆ ಈ ವಾರ ತುಂಬಾ ಉತ್ತಮವಾಗಿ ಮೂಡಿಬಂದಿದೆ ವಾರ ವಾರವೂ ಗುಣಮಟ್ಟವನ್ನು ಕಾಪಾಡಿಕೊಂಡು ಬರುತ್ತಿರುವುದು ನೋಡಿದರೆ ನಿಮ್ಮ ಪತ್ರಿಕೆ ಮತ್ತಷ್ಟು ಜನಪ್ರಿಯಗೊಳ್ಳಲಿದೆ. ಈ ವಾರದ 'ಕೈ ಪಾದಯಾತ್ರೆಗೆ ಬಿಜೆಪಿ ಬಿಟ್ಟ ಬಾಣ' ಎನ್ನುವುದು ಅರ್ಥಪೂರ್ಣವಾಗಿದೆ. ವಿಶ್ಲೇಷಣೆ ತುಂಬಾ ಮಾರ್ಮಿಕವಾಗಿದೆ. ಇನ್ನೂ ಇತರೆ ಸುದ್ದಿಗಳು ಕೂಡ ಅಷ್ಟೇ ಚೆನ್ನಾಗಿ ಬಂದಿವೆ ಡಿ.ಉಮಾಪತಿ ಅವರ ಲೇಖನ ಅದ್ಭುತವಾಗಿದೆ ಅವರ ಬರಹದ ಶೈಲಿಅತ್ಯುತ್ತಮವಾಗಿದೆ. ಹಾಗೆಯೇ ಇತರೆ ಅಂಕಣಗಳು ಕೂಡ ಚೆನ್ನಾಗಿವೆ.

● ಶಂಕರಪ್ಪ ಭೀಮಪ್ಪ ಉಳಾಗಡ್ಡಿ
ಬಾಗಲಕೋಟೆ

### ನಿಮ್ಮ ಪ್ರಯತ್ನಕ್ಕೆ ಯಶಸ್ಸು ದೊರಕಲಿ

ಅರ್ಥಪೂರ್ಣ ಲೇಖನಗಳು, ಸರ್ಕಾರಕ್ಕೆ ನೇರವಾಗಿ ತಪ್ಪನ್ನು ತೋರುವ ಪರಿ ನೋಡಿ ಇನ್ನೂ ಪತ್ರಿಕೋದ್ಯಮದಲ್ಲಿ ನೈತಿಕತೆ ಉಳಿದಿದೆ ಎನ್ನುವುದು ಖುಷಿ,ನಿಮ್ಮ ಪ್ರಯತ್ನ ಮುಂದುವರೆಯಲಿ..ಯಶಸ್ಸು ಕಂಡು ನಿಮ್ಮ ಕನಸು ಸಾಕಾರಗೊಳ್ಳಿ ಎಂದು ಆಶಿಸುತ್ತೇನೆ

● ಶಿವಶಂಕರ್ ಬೆಂಗಳೂರು.




### ಜವಾಬ್ದಾರಿಯುತವಾಗಿದೆ

ಒಬ್ಬ ಪತ್ರಕರ್ತನಿಗೆ ಇರಬೇಕಾದ ಜವಾಬ್ದಾರಿಯನ್ನು ನಿಮ್ಮ ಪತ್ರಿಕೆ ನೀಗಿಸುತ್ತಿದೆ. ಯಾಕೆಂದರೆ ಇವೊತ್ತು ಎಲ್ಲವೂ ಸರ್ಕಾರದ ಬಾಲಬುಡುಕವಾಗಿವೆ ಅದರಲ್ಲೂ ಟಿವಿ ಚಾನೆಲ್‌ಗಳಂತೂ ಸರ್ಕಾರದ ಹಿಂದೆಯೇ ಬಿದ್ದು ಅವರ ಎಂಜಲು ತಿನ್ನುತ್ತಿವೆ ಇಂತ ಸಮಯದಲ್ಲಿ ನಿಮ್ಮ ಪತ್ರಿಕೆ ಸರ್ಕಾರದ ನಿಜವಾದ ಸ್ಥಿತಿಯನ್ನು ಲೇಖನಗಳ ಮೂಲಕ ಜನರಿಗೆ ತಿಳಿಸುತ್ತಿದ್ದೀರಾ ಬಹುತೇಕ ನಿಮ್ಮ ಪತ್ರಿಕೆ ಲಂಕೇಶ್ ಮತ್ತು ಹಾಯ್ ಬೆಂಗಳೂರು ಪತ್ರಿಕೆಗಳನ್ನು ನೆನಪಿಸುತ್ತದೆ ಹೀಗೆ ಮೂಡಿ ಬರಲಿ.. ಧನ್ಯವಾದಗಳು...

● ಬಸಪ್ಪ ಯರ್ರಪ್ಪ ಮೂಗೇರಿ ಬಳ್ಳಾರಿ

### ರಾಜ್ಯದ ಅತ್ಯುತ್ತಮ ಪತ್ರಿಕೆಯಾಗುತ್ತದೆ

ಇತ್ತೀಚಿನ ಸಾಕಷ್ಟು ಪತ್ರಿಕೆಗಳನ್ನು ನೋಡಿದ್ದೆನೆ ಓದಿದ್ದೇನೆ. ನನಗೆ ಓದುವ ಹುಚ್ಚು ಅದರಲ್ಲೂ ವಾರಪತ್ರಿಕೆಗಳ ಬಗ್ಗೆ ಹೆಚ್ಚು ಆಸಕ್ತಿವುಳ್ಳವನು, ಆದರೆ ಕಳೆದ ಲಾಕ್‌ಡೌನ್ ಹೊತ್ತಿಗೆ ಎಲ್ಲಾ ವಾರಪತ್ರಿಕೆಗಳು ನಿಂತು ಹೋಗಿದ್ದವು ಆ ನಂತರ ಯಾವ ವಾರ ಪತ್ರಿಕೆಗಳು ನಾನು ನೋಡಿಲ್ಲ ಆದರೆ ಸಣ್ಣ ಪುಟ್ಟ ಬರೀ ಜಾಹೀರಾತು ಮತ್ತು ಅವರಿವರ ಒಬ್ಬ ವ್ಯಕ್ತಿಯನ್ನು ವರ್ಣಮಯವಾಗಿ ಬರೆಯುವ ಪತ್ರಿಕೆಗಳನ್ನು ನೋಡಿದ್ದೇನೆ ಆದರೆ ಅವು ಓದುವ ಪತ್ರಿಕೆಗಳಲ್ಲ ಆದರೆ ಕಳೆದ ಜನವರಿಯಿಂದ ನಿಮ್ಮ ಪತ್ರಿಕೆ ನನ್ನ ಕಣ್ಣಿಗೆ ಬಿತ್ತು ಅಂದಿನಿಂದ ನಾನು ತಪ್ಪದೆ ಓದುತ್ತಿದ್ದೇನೆ ಉತ್ತಮವಾದ ಅಂಕಣಗಳು, ಸರ್ಕಾರದ ಸ್ಥಿತಿಯನ್ನು ಕುರಿತು ಬರೆಯುವ ಲೇಖನಗಳು ಒಟ್ಟಾರೆ ಒಂದು ಉತ್ತಮ ಪತ್ರಿಕೆ ಹೇಗಿರಬೇಕೋಹಾಗೆ ಇದೆ ನಿಜಕ್ಕೂ ಇಂದಲ್ಲ ನಾಳೆ ಈ ರಾಜ್ಯದ ಅತ್ಯುತ್ತಮ ಪತ್ರಿಕೆ ಎಂಬ ಹೆಗ್ಗಳಿಕೆಗೆ ಪಾತ್ರವಾಗುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ.

● ಬಸಪ್ಪ ಅಂಗಡಿ ಬಿಜಾಪುರ

ಬೇಕಾಗಿದ್ದಾರೆ : 'ಕೆಂಧೂಳಿ' ವಾರ ಪತ್ರಿಕೆಗೆ ಜಿಲ್ಲಾ ವರದಿಗಾರರು/ಏಜೆಂಟರು ಬೇಕಾಗಿದ್ದಾರೆ. ಎಲ್ಲಾ ಜಿಲ್ಲೆಗಳಿಂದಲೂ ವರದಿಗಾರರನ್ನು ನೇಮಕ ಮಾಡಲಾಗುತ್ತಿದೆ ಆಸಕ್ತರು ಈ ದೂರವಾಣಿಗೆ ಸಂಪರ್ಕಿಸಬಹುದು. 9900633109


KENDHOOLI Kannada Weekly
ಸಂಪುಟ - 02 | ಸಂಚಿಕೆ - 61 | ಪುಟ - 16 | ರೂ. 16/- | ಜನವರಿ 13 ರಿಂದ ಜನವರಿ 19, 2022
kendhooli.com/e-paper/
RNI no KARKAN/2018/76310

# ಪುನೀತ್ ನಟನೆಯ ಜೇಮ್ಸ್ ಸ್ಪೆಷಲ್ ಪೋಸ್ಟರ್ ರಿಲೀಜ್

2022 ರಲ್ಲಿ ರಿಲೀಸ್ ಆಗುತ್ತಿರುವ ಬಹು ನಿರೀಕ್ಷಿತ ಸಿನಿಮಾಗಳಲ್ಲಿ ಪುನೀತ್ ರಾಜ್ ಕುಮಾರ್ ನಟನೆಯ ಜೇಮ್ಸ್ ಚಿತ್ರ ಕೂಡ ಒಂದು.

ಸದ್ಯ ಜೇಮ್ಸ್ ಸಿನಿಮಾ ಪೋಸ್ಟ್ ಪ್ರೊಡಕ್ಷನ್ ಕೆಲಸ ವೇಗವಾಗಿ ಕೆಲಸ ಮಾಡುತ್ತಿದ್ದೇವೆ, ಡಿಐ, ಸಿಜಿ ಮತ್ತು ರಿ ರೆಕಾರ್ಡಿಂಗ್ ನಡೆಯುತ್ತಿದೆ, ಗಣ ರಾಜ್ಯೋತ್ಸವದಂದು ವಿಶೇಷ ಪೋಸ್ಟರ್ ರಿಲೀಸ್ ಮಾಡುವುದಾಗಿ ನಿರ್ದೇಶಕ ಚೇತನ ಕುಮಾರ್ ಹೇಳಿದ್ದಾರೆ. ಮಾರ್ಚ್ 17 ರಂದು ಪುನೀತ್ ರಾಜ ಕುಮಾರ್ ಹುಟ್ಟುಹಬ್ಬವಿದೆ, ಹೀಗಾಗಿ ಅಷ್ಟರಲ್ಲಿ ಜೇಮ್ಸ್ ಸಿನಿಮಾ ಕೆಲಸ ಮುಗಿಸುವುದು ನಮ್ಮ ಟಾರ್ಗೆಟ್ ಆಗಿದೆ. ಅದು ಕೊರೋನಾ ಪರಿಸ್ಥಿತಿ ಮೇಲೆ ಅವಲಂಬಿತವಾಗಿದೆ ಎಂದು ತಿಳಿಸಿದ್ದಾರೆ.

ವಾಸ್ತವವಾಗಿ, ಬಿಡುಗಡೆ ದಿನಾಂಕವನ್ನು ಅಧಿಕೃತವಾಗಿ ಘೋಷಿಸುವುದರ ಜೊತೆಗೆ ಈ ತಿಂಗಳು ಟೀಸರ್ ಅಥವಾ ಟ್ರೇಲರ್‌ನೊಂದಿಗೆ ಬರಲು ನಾವು ಯೋಜಿಸಿದ್ದೆವು, ಆದರೆ ಈಗ ಕೋವಿಡ್ ಪ್ರಕರಣಗಳ ಹೆಚ್ಚಳದಿಂದಾಗಿ ನಾವು ಹಿಂದೆ ಸರಿದಿದ್ದೇವೆ ಎಂದು ತಿಳಿಸಿದ್ದಾರೆ. ಪುನೀತ್ ರಾಜ್‌ಕುಮಾರ್ ಅವರ ಭಾಗವನ್ನು ಹೊರತುಪಡಿಸಿ ಉಳಿದ ಎಲ್ಲಾ ಕಲಾವಿದರ ಡಬ್ಬಿಂಗ್ ಅನ್ನು ತಂಡವು ಪೂರ್ಣಗೊಳಿಸಿದೆ. ಪುನೀತ್ ಸರ್ ಅವರ ಭಾಗಗಳಿಗೆ ಯಾರು ಡಬ್ಬಿಂಗ್ ಮಾಡುತ್ತಾರೆ ಎಂಬುದನ್ನು ನಾವು ಚರ್ಚಿಸುತ್ತೇವೆ ಮತ್ತು ಫೆಬ್ರವರಿ ತಿಂಗಳಲ್ಲಿ ನಮಗೆ ಸ್ಪಷ್ಟತೆ ಸಿಗುತ್ತದೆ ಎಂದು ಚೇತನ್ ಕುಮಾರ್ ಹೇಳಿದ್ದಾರೆ. ಪುನೀತ್ ರಾಜ್ ಕುಮಾರ್ ಶೂಟಿಂಗ್ ಮುಗಿಸಿದ ಕೊನೆಯ ಚಿತ್ರಗಳಲ್ಲಿ ಜೇಮ್ಸ್ ಕೂಡ ಒಂದು, ಇನ್ನೊಂದು ಯೋಜನೆ ಗಂಧದ ಗುಡಿ. ಪವರ್‌ಸ್ಟಾರ್ ಅನ್ನು ನಿರ್ದೇಶಿಸುವ ಅವಕಾಶವನ್ನು ಪಡೆಯುವುದು ಅದೃಷ್ಟ ಎಂದು ನಿರ್ದೇಶಕರು ಅಭಿಪ್ರಾಯ ಪಟ್ಟಿದ್ದಾರೆ. ಕಿಶೋರ್ ಪತ್ತಿಕೊಂಡ ಅವರು ಬಂಡವಾಳ ಹೂಡಿರುವ ಈ ಚಿತ್ರಕ್ಕೆ ಚರಣ್ ರಾಜ್ ಅವರ ಸಂಗೀತ ಮತ್ತು ಜೆ ಸ್ವಾಮಿ ಅವರ ಛಾಯಾಗ್ರಹಣವಿದೆ. ಪುನೀತ್ ರಾಜ್ ಕುಮಾರ್‌ಗೆ ಪ್ರಿಯಾ ಆನಂದ್ ನಾಯಕಿಯಾಗಿದ್ದಾರೆ. ಬಿಗ್ ಬಾಸ್ 7 ಕನ್ನಡ ವಿಜೇತ ಶೈನ್ ಶೆಟ್ಟಿ, ಉಗ್ರಂ ಖ್ಯಾತಿಯ ತಿಲಕ್, ಚಿಕ್ಕಣ್ಣ ಶ್ರೀಕಾಂತ್ ಮೇಕಾ, ಮುಖೇಶ್ ರಿಷಿ, ಆದಿತ್ಯ ಮೆನನ್, ಅನು ಪ್ರಭಾಕರ್, ರಂಗಾಯಣ ರಘು, ಹರ್ಷ, ಸುಚೇಂದ್ರ ಪ್ರಸಾದ್, ಮತ್ತು ರವಿಶಂಕರ ಗೌಡ ಮುಂತಾದವರು ನಟಿಸಿದ್ದಾರೆ.



# ಶೀಘ್ರ ತೆರೆಮೇಲೆ ಕಸ್ತೂರಿ ಮಹಲ್




'ಕಸ್ತೂರಿ ಮಹಲ್' ಅನೌನ್ಸ್ ಮಾಡಿದ್ದಲ್ಲಿಂದ ಒಂದಲ್ಲಾ ಒಂದು ಕಾರಣಕ್ಕೆ ಸದ್ದು ಮಾಡುತ್ತಲೇ ಇತ್ತು. ಕೆಲವೊಮ್ಮೆ ನೆಗೆಟಿವ್ ವಿಚಾರಕ್ಕೆ ಸುದ್ದಿಯಾಗುತ್ತಿದ್ದರೆ, ಮತ್ತೆ ಕೆಲವು ಒಳ್ಳೆ ಕಾರಣಕ್ಕೆ ಸುದ್ದಿಯಾಗಿತ್ತು. ಸದ್ಯ ಎದುರಾದ ಎಲ್ಲಾ ಸಂಕಷ್ಟಗಳನ್ನು ಎದುರಿಸಿ, ಸಿನಿಮಾ ತಂಡ ಶೂಟಿಂಗ್ ಅನ್ನು ಯಶಸ್ವಿಯಾಗಿ ಮುಗಿಸಿದೆ. ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿರುವ ಸಿನಿಮಾ ಬಿಡುಗಡೆಗೂ ಸಜ್ಜಾಗಿ ನಿಂತಿದೆ.

ಕೆಲವು ತಿಂಗಳ ಹಿಂದೆ 'ಕಸ್ತೂರಿ ಮಹಲ್' ಸಿನಿಮಾ ಫಸ್ಟ್ ಲುಕ್ ರಿಲೀಸ್ ಮಾಡಿದ್ದರು. ಶಾನ್ವಿ ಶ್ರೀವತ್ಸವ್ ಲುಕ್, ಗೆಟಪ್ ಎಲ್ಲವೂ ಸಿನಿಪ್ರಿಯರನ್ನು ಸೆಳೆದಿತ್ತು. ಹಿರಿಯ ನಿರ್ದೇಶಕ ದಿನೇಶ್ ಬಾಬು ನಿರ್ದೇಶನ ಮಾಡಿದ್ದರಿಂದ ಸಹಜವಾಗಿಯೇ ಸಿನಿಮಾ ಬಗ್ಗೆ ಸಾಕಷ್ಟು ನಿರೀಕ್ಷೆಗಳಿವೆ. ಕೊರೊನಾ ಹಾವಳಿ ಮಧ್ಯೆ ಸಿನಿಮಾವನ್ನು ರೆಡಿ ಮಾಡಿಟ್ಟುಕೊಂಡಿರುವ ಚಿತ್ರತಂಡ ಬಿಡುಗಡೆಗೆ ಸೂಕ್ತ ಸಮಯವನ್ನು ಹುಡುಕುತ್ತಿದೆ.

**50ನೇ ಸಿನಿಮಾ**

'ಕಸ್ತೂರಿ ಮಹಲ್' ಹಿರಿಯ ನಿರ್ದೇಶಕ ದಿನೇಶ್ ಬಾಬು ಆಕ್ಷನ್ ಕಟ್ ಹೇಳಿರುವ 50ನೇ ಚಿತ್ರ. ಈಗಾಗಲೇ 'ಕಸ್ತೂರಿ ಮಹಲ್' ಸಿನಿಮಾದ ಟೀಸರ್ ಅನ್ನು ದಿವಂಗತ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಬಿಡುಗಡೆ ಮಾಡಿದ್ದರು. ಈ ಟೀಸರ್ ಸೋಶಿಯಲ್ ಮೀಡಿಯಾಗಳಲ್ಲಿ ಭಾರಿ ಮೆಚ್ಚುಗೆ ಗಳಿಸಿತ್ತು. ಶಾನ್ವಿ ಶ್ರೀವಾಸ್ತವ್ ಪ್ರಮುಖ ಪಾತ್ರದಲ್ಲಿ ನಟಿಸಿರುವ ಈ ಚಿತ್ರದಲ್ಲಿ ರಂಗಾಯಣ ರಘು ಕೂಡ ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳಿದ್ದಾರೆ. ಶಾನ್ವಿ ಜೊತೆಯಲ್ಲಿ ಸ್ಕಂಧ ಅಶೋಕ್, ಶೃತಿ ಪ್ರಕಾಶ್, ಕಾಶಿಮ ರಫಿ, ನೀನಾಸಂ ಅಶ್ವಥ್ , ಅಕ್ಷರ್ ಮುಂತಾದವರು ನಟಿಸಿದ್ದಾರೆ.

# ಯಶ್ ಹೊಸ ಚಿತ್ರ ಪ್ರಕಟ

ನಟ ಯಶ್ ಸತತ ನಾಲ್ಕು ವರ್ಷದಿಂದ ಯಾವ ಹೊಸ ಸಿನಿಮಾವನ್ನು ಒಪ್ಪಿಕೊಂಡಿರಲಿಲ್ಲ. ಯಶ್ ತಮ್ಮನ್ನು 'ಕೆಜಿಎಫ್' ಸಿನಿಮಾಕ್ಕೆ ಸಂಪೂರ್ಣ ತೊಡಗಿಸಿಕೊಂಡಿದ್ದರು. 'ಕೆಜಿಎಫ್' ನಂತರ ಏನು ಎಂಬ ಪ್ರಶ್ನೆ ಯಶ್ ಅಭಿಮಾನಿಗಳಿಗೆ ಮಾತ್ರವಲ್ಲ ಚಂದನವನದಲ್ಲೂ ಕುತೂಹಲ ಮೂಡಿಸಿತ್ತು. ಯಶ್ ಸಹ ತಮ್ಮ ಮುಂದಿನ ಸಿನಿಮಾ ಯಾವುದು? ಯಾರು ನಿರ್ದೇಶಕ ಎಂಬ ವಿಷಯವನ್ನು ಗೌಪ್ಯವಾಗಿಟ್ಟಿದ್ದರು. ಆದರೆ ಇದೀಗ ಎಲ್ಲವೂ ಅಧಿಕೃತವಾಗಿ ಬಹಿರಂಗವಾಗಿದೆ.

ಯಶ್ ಹುಟ್ಟುಹಬ್ಬ ದಿನದಂದು ಯಶ್ ಹೊಸ ಸಿನಿಮಾದ ಬಗ್ಗೆ ಘೋಷಣೆ ಹೊರಬಿದ್ದಿದ್ದು, ನಿರ್ದೇಶಕ ನರ್ತನ್, ಯಶ್‌ರ 19ನೇ ಸಿನಿಮಾವನ್ನು ನಿರ್ದೇಶನ ಮಾಡಲಿದ್ದಾರೆ. ಈ ಬಗ್ಗೆ ಮಾತುಕತೆ, ಒಪ್ಪಂದ ಎಲ್ಲವೂ ಮುಗಿದಿದ್ದು, ಸಿನಿಮಾದ ಚಿತ್ರೀಕರಣ ಶೀಘ್ರದಲ್ಲಿಯೇ ಆರಂಭವಾಗಲಿದ

2016 ರಲ್ಲಿ ಬಿಡುಗಡೆ ಆದ 'ಸಂತು ಸ್ಟ್ರೈಟ್ ಫಾರ್ವಡ್' ಸಿನಿಮಾದ ಬಳಿಕ ಈ ವರೆಗೆ ಯಶ್ ತಮ್ಮನ್ನು ಸಂಪೂರ್ಣವಾಗಿ 'ಕೆಜಿಎಫ್'ನಲ್ಲಿ ತೊಡಗಿಸಿಕೊಂಡಿದ್ದರು. ಈ ಆರು ವರ್ಷಗಳಲ್ಲಿ ಅವರು ಯಾವ ಸಿನಿಮಾವನ್ನೂ ಒಪ್ಪಿಕೊಂಡಿಲ್ಲ. 'ಕಿರಾತಕ 2' ಸಿನಿಮಾ ಒಪ್ಪಿಕೊಂಡಿದ್ದರಾದರೂ ಆ ಸಿನಿಮಾ ಸೆಟ್ಟೇರಲಿಲ್ಲ. ಆ ಸಿನಿಮಾಕ್ಕೆ ಪಡೆದಿದ್ದ ಅಡ್ವಾನ್ಸ್ ಹಣವನ್ನು ಸಹ ವಾಪಸ್ ಮಾಡಿದರು. ಯಶ್ ನಟನೆಯ 'ಕೆಜಿಎಫ್ ' ಸಿನಿಮಾದ ಚಿತ್ರೀಕರಣ ಈಗಾಗಲೇ ಪೂರ್ಣವಾಗಿದ್ದು, ಸಿನಿಮಾವು ಏಪ್ರಿಲ್ 14 ಕ್ಕೆ ಬಿಡುಗಡೆ ಆಗಲಿದೆ.



# ಪಿಆರ್‌ಕೆ ಪ್ರೊಡಕ್ಷನ್‌ನ 02 ಚಿತ್ರೀಕರಣ ಪುನರಾರಂಭ




ಆಶಿಕಾ ರಂಗನಾಥ್ ಮತ್ತು ಪ್ರವೀಣ್ ತೇಜ್ ಅಭಿನಯದ 02 ಚಿತ್ರೀಕರಣ ಜನವರಿ 22 ರಂದು ಪುನರಾರಂಭವಾಗಲಿದೆ.

ಇದು ಪುನೀತ್ ರಾಜ್‌ಕುಮಾರ್ ಅವರ ಹೋಮ್ ಬ್ಯಾನರ್ ಪಿಆರ್ ಕೆ ಪ್ರೊಡಕ್ಷನ್ಸ್ ನ ಆರನೇ ಸಿನಿಮಾವಾಗಿದೆ, ಅವರು ಈ ಹಿಂದೆ ಕವಲುದಾರಿ ಮತ್ತು ಫ್ರೆಂಚ್ ಬಿರಿಯಾನಿಯಂತಹ ಚಲನಚಿತ್ರಗಳನ್ನು ನಿರ್ಮಾಣ ಮಾಡಿದ್ದರು.

02 ನಿರ್ದೇಶಕರಾದ ಪ್ರಶಾಂತ್ ರಾಜ್ ಮತ್ತು ರಾಘವ್ ನಾಯಕ್ ಅವರ ಚೊಚ್ಚಲ ಚಿತ್ರವಾಗಿದೆ, 02 ಸಿನಿಮಾವನ್ನು ಅಕ್ಟೋಬರ್ 8 ರಂದು ಪುನೀತ್ ರಾಜ್ ಕುಮಾರ್ ಮತ್ತು ನಿರ್ಮಾಪಕ ಅಶ್ವಿನಿ ಪುನೀತ್ ರಾಜ್ ಕುಮಾರ್ ಅವರು ಅಧಿಕೃತವಾಗಿ ಪ್ರಾರಂಭಿಸಿದ್ದರು.

ನವೆಂಬರ್‌ನಲ್ಲಿ ಚಿತ್ರೀಕರಣವನ್ನು ಪುನರಾರಂಭಿಸಲು ಚಿತ್ರತಂಡ ಬಯಸಿತ್ತು ಆದರೆ ಪವರ್‌ಸ್ಟಾರ್ ಪುನೀತ್ ಅವರ ಅಕಾಲಿಕ ಮರಣದಿಂದಾಗಿ ಶೂಟಿಂಗ್ ತಡವಾಯಿತು.

ಚಿತ್ರದಲ್ಲಿ ನಟ-ರೇಡಿಯೋ ಜಾಕಿ ಸಿರಿ ರವಿಕುಮಾರ್, ಯೂಟ್ಯೂಬರ್ ಪುನೀತ್ ಬಿ ಎ ಮತ್ತು ರಂಗಭೂಮಿ ಕಲಾವಿದ ಮೋಹನ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ರಾಮಾರ್ಜುನ ಮತ್ತು ಬುದ್ಧಿವಂತ 2 ಚಿತ್ರಗಳಲ್ಲಿ ಕೆಲಸ ಮಾಡಿರುವ ಡಿಒಪಿ ನವೀನ್ ಅವರು 02 ಚಿತ್ರದ ಛಾಯಾಗ್ರಹಣವನ್ನು ನಿರ್ವಹಿಸಲಿದ್ದಾರೆ. ಚಿತ್ರ ತಂಡ ಸಂಗೀತ ನಿರ್ದೇಶಕರನ್ನು ಇನ್ನೂ ಅಂತಿಮಗೊಳಿಸಿಲ್ಲ.

KENDHOOLI, Kannada Weekly Printed by, Published by, Owned by & Edited by: T MANJUNATHA, DS MAX SAVVY APARTMENT, PLOT NO 202,2ND FLOOR, JP NAGARA 9TH PHASE, AMRUTHNAGARA MAIN ROAD, ANJANAPURA BANGALORE 560108
Printed at : Brundavan printers, 88/1 1st cross, sameerpura road, Kg nagara Bengaluru-560019
Mob: +91 99161 91222. email: kendhooli18@gmail.com
The Editor is Responsible for selection of news under the PRB Act